ಶನಿವಾರ, ಜೂನ್ 28, 2025 | ₹ 7.00
prajavani.net prajavani
www.prajavani.net



ಪ್ರಜ್ಞಾನಂದಗೆ ಪ್ರಶಸ್ತಿ
ಉಜ್ಬೇಕಿಸ್ತಾನದಲ್ಲಿ ಶುಕ್ರವಾರ ಕೊನೆಗೊಂಡ ಉಜ್‌ಚೆಸ್ ಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಭಾರತದ ಆರ್.ಪ್ರಜ್ಞಾನಂದ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ನಕ್ಸಲರ ಶರಣು
ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ 13 ನಕ್ಸಲರು ಶರಣಾಗಿದ್ದಾರೆ




ಸುದರ್ಶನ್ ಜ್ಯುವೆಲ್ಲರ್ಸ್
Buy
GOLD
JEWELLERY
GET SILVER
· FREE ·
EQUAL WEIGHT
At Sudarshan Jewellers, we bring you gold jewelry crafted with precision and elegance, ensuring purity with every piece. Celebrate the timeless beauty of gold with us.
916 BIS HALLMARK JEWELLERY
EXCLUSIVE COLLECTIONS
*Terms & Conditions Apply
MALLESHWARAM, 8TH CROSS
Sudarshan
Jewellers
MARGOSA ROAD
KANJEEVARAM SILKS | ETHNIC WEAR | WOMEN'S WEAR | MEN'S WEAR | KID'S WEAR & 916 GOLD JEWELLERY
CAR PARKING AVAILABLE
NO.9 MARGOSA ROAD, 8TH CROSS MALLESHWARAM
BANGALORE-03 | 080-40980441 | 46300300

ಶನಿವಾರ, ಜೂನ್ 28, 2025 | ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪುರಿ ಜಗನ್ನಾಥ ರಥಯಾತ್ರೆ

ಐತಿಹಾಸಿಕ ಪುರಿ ಜಗನ್ನಾಥ ರಥಯಾತ್ರೆಗೆ ಶುಕ್ರವಾರ ಅದ್ದೂರಿ ಚಾಲನೆ ದೊರೆತಿದ್ದು, ಅಪಾರ ಭಕ್ತರು ಪಾಲ್ಗೊಂಡರು



ಜೈಶಂಕರ್ ಮಾತುಕತೆ

ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಜತೆ ಶುಕ್ರವಾರ ಮಾತುಕತೆ ನಡೆಸಿದರು



LAUNCH OFFER of ಬೋಳಾಸ್ ಮಖಾನಾ Range*

BUY ANY 1 GET ANY 1 FREE

ಈ ಆಫರ್ ಬೋಳಾಸ್ ಸ್ಟೋರ್ಸ್‌ಗಳಲ್ಲಿ ಜೂನ್ 28 ಮತ್ತು 29 ರಂದು ಮಾತ್ರ ಮಾನ್ಯ.

FOR MRP JUST ₹49



UPTO 40% OFF!* FACTORY PRICE ADVANTAGE

*ಸ್ಟೋರ್ ಉತ್ಪನ್ನಗಳ ಮೇಲೆ

* This Offer is applicable for Bolas Makhana Korean Kimchi 16g, Makhana Salt & Pepper 16g, Makhana Roasted & Salted 16g and Makhana Peri Peri 16g

*ಷರತ್ತುಗಳು ಮತ್ತು ನಿಯಮಗಳು ಅನ್ವಯವಾಗುತ್ತವೆ. *ಆಫರ್ ಸ್ಟಾಕ್ ಇರುವವರೆಗೆ ಮಾತ್ರ ಮಾನ್ಯವಾಗಿರುತ್ತದೆ. *ಮೊದಲ 100 ಗ್ರಾಹಕರಿಗೆ ಮಾತ್ರ ಆಫರ್ ಲಭ್ಯ.
*ಸ್ಟೋರ್‌ಗಳಲ್ಲಿ ಖರೀದಿ ಮಾಡಲು ಮಾತ್ರ. * ಪ್ರತಿ ಗ್ರಾಹಕ ಒಮ್ಮೆಮಾತ್ರ ಆಫರ್ ಪಡೆಯಬಹುದು.
*ದುರುಪಯೋಗದ ಸಂದರ್ಭದಲ್ಲಿ ಕೊಡುಗೆ ನಿರಾಕರಿಸುವ ಹಕ್ಕನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ

DRY FRUITS | NUTS | SWEETS & MORE

FACTORY PRICE ADVANTAGE

ಬೋಳಾಸ್ Bolas

ಚೆನ್ನಪಟ್ಟಣ-9483548777 | ಕನಕಪುರ-9019963559 | ತುಮಕೂರು-9364009426 | ಬನಶಂಕರಿ-9364016910 | ಬಾಣಸವಾಡಿ-9364016909 | ಬೆಂಗಳೂರು ಮೀನಾಕ್ಷಿಮಾಲ್ -9606019779 | ಬೆಂಗಳೂರು ಟಿಸಿ ಪಾಳ್ಯ-9364016907 | ಬಸವೇಶ್ವರ ನಗರ-9364016904 | ಗಾಂಧಿ ಬಝಾರ್- 9364016908 | ಹರಳೂರು-6364863287 | ಎಚ್.ಎಸ್.ಆರ್-364863283 | ಜಯನಗರ-6364863281 | ನೆಲಮಂಗಲ-9364016903 | ನ್ಯೂ ತಿಪ್ಪಸಂದ್ರ ಮೈನ್ ರೋಡ್-6364863285 | ಆಫ್ ಸರ್ಜಾಪುರ ರೋಡ್-6364863286 | ಆರ್ ಟಿ ನಗರ-6364863284 | ಸಂಪಿಗೆ ರೋಡ್ ಮಲ್ಲೇಶ್ವರಂ-9364016905 | ಉತ್ತರಹಳ್ಳಿ-9364016911 | ವಿದ್ಯಾರಣ್ಯಪುರ-9364016902 | ವಿಜಯನಗರ ಕ್ವಾರ್ಡ್ ರೋಡ್-9364016906 | ವಿಲ್ಸನ್ ಗಾರ್ಡನ್-6364863282 | ಮತ್ತಿಕೆರೆ-9364016901 | ಕೆಂಗೇರಿ-9364016916 | ಬಿಟಿಎಂ-ಲೇಔಟ್ 9364016917 | ನಾಗರಭಾವಿ-9972058196 | ತುಮಕೂರು (ಬಿ. ಹೆಚ್. ರೋಡ್)-9035079191 | ಚಿಕ್ಕಬಳ್ಳಾಪುರ -9035079192 |

/bolas.outlet
www.bolas.co.in

ಶನಿವಾರ, ಜೂನ್ 28, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 178 | ಪುಟ 22

prajavani.net prajavani ● www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರಸಿದ್ಧ ಅಭ್ಯಾಸ

ಬರ್ಮಿಂಗ್‌ಹ್ಯಾಮ್‌ನಲ್ಲಿ ಶುಕ್ರವಾರ ಅಭ್ಯಾಸ ಆರಂಭಿಸಿದ ಭಾರತ ಕ್ರಿಕೆಟ್ ತಂಡದ ಪ್ರಸಿದ್ಧಕೃಷ್ಣ. ಜುಲೈ 2ರಿಂದ ಇಲ್ಲಿ ಇಂಗ್ಲೆಂಡ್ ಎದುರು 2ನೇ ಟೆಸ್ಟ್ ನಡೆಯಲಿದೆ





ಬಿಗಿ ಭದ್ರತೆ

ಅಮರನಾಥ ಯಾತ್ರೆಗೆ ಜುಲೈ 3ರಂದು ಚಾಲನೆ ಲಭಿಸಲಿದ್ದು, ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭದ್ರತೆ ಹೆಚ್ಚಿಸಲಾಗಿದೆ

ಸೆನ್ಸೆಕ್ಸ್ 84,058 | ನಿಫ್ಟಿ 25,637 | $/₹ 85.50 | ಚಿನ್ನ (Std. 10g) ₹1.01 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.13 ಲಕ್ಷ (ಬೆಂಗಳೂರು)

ದ್ವೇಷ ಭಾಷಣ: ಅಂಕುಶಕ್ಕೆ ತಾಕೀತು

ಸ್ವಯಂಪ್ರೇರಿತ ಪ್ರಕರಣ ದಾಖಲಿಸದಿದ್ದರೆ, ಪೊಲೀಸರ ವಿರುದ್ಧವೇ ಕ್ರಮ: ಸಿ.ಎಂ ಎಚ್ಚರಿಕೆ

ಸೈಬರ್ ಅಪರಾಧಗಳು ಹೆಚ್ಚುತ್ತಿವೆ. ಆರೋಪಿಗಳ ಪತ್ತೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ, ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಅಪರಾಧಿಗಳ ಪತ್ತೆ ಹಾಗೂ ತನಿಖೆಯ ಗುಣಮಟ್ಟ ಹೆಚ್ಚಿಸುವಂತೆ ಸೂಚಿಸಿದ್ದೇನೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದ್ವೇಷ ಭಾಷಣ, ಪ್ರಚೋದನಕಾರಿ ಹೇಳಿಕೆ ಹಾಗೂ ಸುಳ್ಳು ಸುದ್ದಿ ಪ್ರಕಟಿಸುತ್ತಿರುವ ವ್ಯಕ್ತಿಗಳ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕು. ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳದ ಪೊಲೀಸರ ವಿರುದ್ಧವೇ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ ಶುಕ್ರವಾರ ನಡೆದ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ದಲಿತರು, ಮಹಿಳೆಯರು, ಮಕ್ಕಳು ಹಾಗೂ ವೃದ್ಧರ ಮೇಲೆ ದೌರ್ಜನ್ಯ ನಡೆಯದಂತೆ ಕ್ರಮ ತೆಗೆದುಕೊಳ್ಳಬೇಕು. ಬಾಲ್ಯ ವಿವಾಹ ತಡೆಗಟ್ಟಬೇಕು. ಅತ್ಯಾಚಾರ, ಭ್ರೂಣಹತ್ಯೆಗಳನ್ನು ನೂರಕ್ಕೆ ನೂರು ತಡೆಗಟ್ಟುವ ದಿಸೆಯಲ್ಲಿ ಪೊಲೀಸರು ಕೆಲಸ ಮಾಡಬೇಕು. ಮಾದಕ ವಸ್ತು ಮುಕ್ತ ರಾಜ್ಯ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಅಂಗಡಿಗಳಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುವುದು ಪತ್ತೆಯಾದರೆ ಅಂತಹ ಅಂಗಡಿಯ ಪರವಾನಗಿ ರದ್ದು ಮಾಡಬೇಕು' ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

'ಕಳೆದ 2 ವರ್ಷದಲ್ಲಿ ಕೊಲೆ, ದರೋಡೆ, ಮನೆಗಳ್ಳತನ ಪ್ರಕರಣಗಳು ಕಡಿಮೆ ಆಗಿವೆ ಎಂಬುದು ಅಂಕಿ ಅಂಶದಿಂದ ಗೊತ್ತಾಗಿದೆ. ಅಪರಾಧ ಪ್ರಕರಣಗಳನ್ನು ಮತ್ತಷ್ಟು ಕಡಿಮೆ ಮಾಡುವುದಕ್ಕಾಗಿ ಪೊಲೀಸರು ಕಾರ್ಯ ನಿರ್ವಹಣೆ ಮಾಡಬೇಕು. ರಾತ್ರಿ ವೇಳೆ ಗಸ್ತು ಹೆಚ್ಚಿಸಬೇಕು. ಆಧುನಿಕ ತಂತ್ರಜ್ಞಾನ ಬಳಸಿ ಸೈಬರ್ ಅಪರಾಧಿಗಳನ್ನು ಪತ್ತೆ ಹಚ್ಚಿ ವಂಚಕರಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು. ಹಿರಿಯ ಅಧಿಕಾರಿಗಳು ಪೊಲೀಸ್ ಠಾಣೆಗಳಿಗೆ ನಿಯಮಿತವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಕಚೇರಿಗಳಲ್ಲೇ ಕುಳಿತಿರಬಾರದು' ಎಂದು ನಿರ್ದೇಶನ ನೀಡಿದರು.

'ಬೀದರ್‌ನಲ್ಲಿ ನಡೆದ ದರೋಡೆ ಪ್ರಕರಣದ ಆರೋಪಿ ಯಾರು ಎಂದು ಗೊತ್ತಾಗಿದ್ದರೂ ಐದು ತಿಂಗಳಿಂದ ಆತನನ್ನು ಬಂಧಿಸಿಲ್ಲ. ಬಿಡಿ ಬಿಡಿ ಪ್ರಕರಣಗಳಲ್ಲಿ ತನಿಖೆಯ ಗುಣಮಟ್ಟ ಹೆಚ್ಚಿದ್ದರೂ ಒಟ್ಟಾರೆಯಾಗಿ ಗಮನಿಸಿದಾಗ ತನಿಖೆಯ ಗುಣಮಟ್ಟ ಕುಸಿದಿದೆ. ಅಪರಾಧ ಪ್ರಕರಣಗಳಲ್ಲಿ ದೋಷಾರೋಪ ಪಟ್ಟಿಯನ್ನು ಸೂಕ್ತ ಸಮಯದಲ್ಲಿ, ಪರಿಣಾಮಕಾರಿಯಾಗಿ ಸಲ್ಲಿಸಬೇಕು. ನಿರ್ಲಕ್ಷ್ಯ ಮಾಡಿದರೆ ಸಹಿಸಲ್ಲ' ಎಂದು ಎಚ್ಚರಿಸಿದರು.

ಮಂಗಳೂರು ಮಾತ್ರ ಹದಗೆಟ್ಟಿದ್ದೇಕೆ?: 'ಕೋಮು ಘರ್ಷಣೆ ಮತ್ತು ಕೊಲೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಹೆಚ್ಚಾಗಿ ನಡೆಯುತ್ತಿವೆ. ಇತರೆ ಜಿಲ್ಲೆಗಳಲ್ಲಿ ಯಾಕೆ ಆಗುತ್ತಿಲ್ಲ' ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು.

4B



ವಾರ್ಷಿಕ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಪೊಲೀಸ್ ಅಧಿಕಾರಿಗಳು

ಸಿ.ಎಂ ಹೇಳಿದ್ದು...

- ಇಲಾಖೆಯಲ್ಲಿ ಖಾಲಿ ಇರುವ 4,117 ಹುದ್ದೆಗಳ ಭರ್ತಿಗೆ ಸದ್ಯದಲ್ಲೇ ಚಾಲನೆ
- ಪೊಲೀಸ್ ಇಲಾಖೆಯ ಬೇಡಿಕೆಗಳಲ್ಲಿ ಬಹುತೇಕ ಈಡೇರಿಸಿ ಸಾಕಷ್ಟು ಅನುದಾನ ಒದಗಿಸಲಾಗಿದೆ. ಸಮಾಜದ ನೆಮ್ಮದಿ, ಕಾನೂನು–ಸುವ್ಯವಸ್ಥೆಯನ್ನು ನಿಮ್ಮಿಂದ ನಿರೀಕ್ಷಿಸಲಾಗುತ್ತಿದೆ
- ಸಮಾಜದ ನೆಮ್ಮದಿ ಕಾಪಾಡಲು ಪೊಲೀಸ್ ಕಾರ್ಯಕ್ಷಮತೆ ಬಹಳ ಮುಖ್ಯ

ಕಾಲ್ತುಳಿತ: ಗುಪ್ತಚರ ಇಲಾಖೆ ವಿರುದ್ಧ ಕಿಡಿ

'ಬೆಂಗಳೂರಿನಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣವನ್ನು ಹಿಂದೆಂದೂ ನಾನು ನೋಡಿರಲಿಲ್ಲ. ಗುಪ್ತಚರ ಇಲಾಖೆ ಇರುವುದೇಕೆ? ಸರಿಯಾದ ಮಾಹಿತಿ ನೀಡಲಿಲ್ಲ. ಇದರಿಂದಾಗಿ 11 ಮಂದಿ ಮೃತಪಟ್ಟರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸ್ ಅಧಿಕಾರಿಗಳನ್ನು ಸಭೆಯಲ್ಲಿ ತರಾಟೆಗೆ ತೆಗೆದುಕೊಂಡರು.

'ಕಾಲ್ತುಳಿತ ಘಟನೆ ನಡೆದ ದಿನ ಮಧ್ಯಾಹ್ನ 3.50ಕ್ಕೆ ಸಾವುಗಳು ಸಂಭವಿಸಿದ್ದವು. ಆದರೂ ಸರಿಯಾದ ಮಾಹಿತಿ ಕೊಟ್ಟರಲಿಲ್ಲ. ಇದು ತಪ್ಪು ಅಲ್ಲವೇ? ಸಂಜೆ 5.45ಕ್ಕೆ ನಾನೇ ಕೇಳಿದಾಗಲೂ ಒಂದೇ ಸಾವು ಆಗಿದೆ ಎನ್ನುವ ಮಾಹಿತಿ ನೀಡಿದ್ದರು. ಆ ವೇಳೆಗೆ 11 ಮಂದಿಯ ಸಾವು ಸಂಭವಿಸಿತ್ತು. ಹಿರಿಯ ಅಧಿಕಾರಿ ಸರಿಯಾದ ಮಾಹಿತಿಯನ್ನು ತಕ್ಷಣ ನಮಗೆ ನೀಡಿದ್ದರೆ ಚಿನ್ನಸ್ವಾಮಿ ಕ್ರೀಡಾಂಗಣದ ವಿಜಯೋತ್ಸವ ಕಾರ್ಯಕ್ರಮವನ್ನು ರದ್ದುಗೊಳಿಸಲು ಸೂಚನೆ ನೀಡಬಹುದಿತ್ತು' ಎಂದು ಹೇಳಿದರು.

'ಹಿರಿಯ ಅಧಿಕಾರಿಗಳ ಅಮಾನತು ಮಾಡಿದ್ದರಲ್ಲಿ ನನಗೂ ಬೇಸರ ಇದೆ. ಆದರೆ, ತಪ್ಪಾಗಿದ್ದು ನಿಜ ತಾನೇ' ಎಂದು ಪ್ರಶ್ನಿಸಿದರು.

ಮೈಸೂರು ಪ್ರಕರಣ: ತನಿಖಾಧಿಕಾರಿ ಅಮಾನತಿಗೆ ಸೂಚನೆ

ಮೈಸೂರು ಜಿಲ್ಲೆಯ ಬೆಟ್ಟದಪುರದಲ್ಲಿ ಪತ್ನಿ ನಾಪತ್ತೆಯಾದ ಕುರಿತು ದೂರು ನೀಡಿದ ಪತಿ ಸುರೇಶ್ ವಿರುದ್ಧವೇ, ಪತ್ನಿಯ ಕೊಲೆ ಆರೋಪ ಹೊರಿಸಿ ಸುಳ್ಳು ಪ್ರಕರಣ ದಾಖಲಿಸಿದ್ದ ಪ್ರಕರಣದ ತನಿಖಾಧಿಕಾರಿಯ ಅಮಾನತಿಗೆ ಮುಖ್ಯಮಂತ್ರಿ ಸೂಚನೆ ನೀಡಿದರು. ಸುಳ್ಳು ಪ್ರಕರಣದಲ್ಲಿ ಸುರೇಶ್ ಅವರು ಜೈಲು ಶಿಕ್ಷೆ ಅನುಭವಿಸಿದ್ದರು.

'ತನಿಖೆಯಲ್ಲಿ ಮಧ್ಯ ಪ್ರವೇಶಿಸಲ್ಲ'

'ಲೋಕಾಯುಕ್ತ ಪೊಲೀಸ್ ಅಧಿಕಾರಿಯೊಬ್ಬರ ವಿರುದ್ಧ ಸುಲಿಗೆ ಆರೋಪವಿದ್ದು ಈ ಪ್ರಕರಣದ ತನಿಖೆಯಲ್ಲಿ ನಾನು ಮಧ್ಯ ಪ್ರವೇಶಿಸಲ್ಲ. ತನಿಖೆ ವೇಳೆ ಲೋಪಗಳು ಕಂಡುಬಂದರೆ ಹೇಳುತ್ತೇನೆ' ಎಂದು ಮುಖ್ಯಮಂತ್ರಿ ಹೇಳಿದರು.



ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ ಕಾರ್ಯಕ್ರಮದಲ್ಲಿ ಹಿರಿಯ ನಟ ಶ್ರೀನಾಥ್ ಅವರಿಗೆ ಜೀವಮಾನದ ಸಾಧನೆ ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಂಸ್ಥೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ. ಎನ್. ತಿಲಕ್ ಕುಮಾರ್ ಮತ್ತು ಸಚಿವ ಮಧು ಬಂಗಾರಪ್ಪ ಹಾಜರಿದ್ದರು

ಶ್ರೀನಾಥ್‌ಗೆ 'ಪ್ರಜಾವಾಣಿ' ಪ್ರಶಸ್ತಿ

ಜೀವಮಾನ ಸಾಧನೆಗೆ ಸಂದ ಗೌರವ: ಸಿ.ಎಂ.ರಿಂದ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಕನ್ನಡ ಸಿನಿ ಸಮ್ಮಾನದ ಮೂರನೇ ಆವೃತ್ತಿಯ ಕಾರ್ಯಕ್ರಮದಲ್ಲಿ ಜೀವಮಾನದ ಸಾಧನೆ ಪ್ರಶಸ್ತಿಯನ್ನು 'ಪ್ರಣಯರಾಜ' ಶ್ರೀನಾಥ್ ಅವರಿಗೆ ನೀಡಿ ಗೌರವಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಪ್ರಶಸ್ತಿ ಪ್ರದಾನ ಮಾಡಿದರು. ಶಿಕ್ಷಣ ಸಚಿವ ಮಧು ಬಂಗಾರಪ್ಪ, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್ ಭಾಗಿಯಾಗಿದ್ದರು.

ಪ್ರಶಸ್ತಿ ಪುರಸ್ಕೃತರಾದ ಶ್ರೀನಾಥ್ ಮಾತನಾಡಿ, 'ಎಂಜಿನಿಯರ್, ವೈದ್ಯ, ವಕೀಲ ಆಗಬೇಕು ಎಂಬ ಅನೇಕ ಯೋಚನೆಗಳು ಬಾಲ್ಯದಲ್ಲಿ ಬಂದಿದ್ದವು. ಆದರೆ, ನಟನಾಗಬೇಕು ಎಂಬುದು ಅದಮ್ಯ ಬಯಕೆಯಾಗಿತ್ತು. ಸಿನಿಮಾದಲ್ಲಿ ನಟಿಸಬೇಕಿದ್ದರೆ ಮೊದಲು ನಾಟಕದಲ್ಲಿ ಪಾತ್ರ ಮಾಡಬೇಕಿತ್ತು. ನಾನು ಏಳನೇ ವರ್ಷದಲ್ಲಿ ಕಲಾವಿದನಾದೆ. ಮುಂದೆ ನಾಟಕದಿಂದ ಚಲನಚಿತ್ರ ರಂಗಕ್ಕೆ ಕಾಲಿಟ್ಟೆ. 1969ರಿಂದ ಇಲ್ಲಿಯವರೆಗೆ ನಟಿಸುತ್ತಲೇ ಇದ್ದೇನೆ' ಎಂದು ನೆನಪು ಮಾಡಿಕೊಂಡರು.

'ನಾನು ಮಾಡಿರುವುದು ಸಣ್ಣ ಕೆಲಸ. ಶ್ರೀನಾಥ್ ನಮ್ಮವನು, ನಮ್ಮವನು ಎಂದು ಕನ್ನಡಿಗರು ತಬ್ಬಿಕೊಂಡು ಬೆಳೆಸಿದ್ದಾರೆ. ರಾಜಕುಮಾರ್ ಸಹಿತ ಚಿತ್ರರಂಗದ ಹಿರಿಯರೆಲ್ಲ ತಿದ್ದಿ ತೀಡಿದ್ದಾರೆ. ಈಶ್ವರಿ ಪಿಕ್ಚರ್ಸ್‌ನ ವೀರಸ್ವಾಮಿ ಮತ್ತು ಪುಟ್ಟಣ್ಣ ಅವರನ್ನು ಮರೆಯುವಂತಿಲ್ಲ' ಎಂದು ಚಿತ್ರರಂಗದ ಅನೇಕ ಹಿರಿಯರನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.

9

ಶಕ್ತಿ ಇರುವವರೆಗೆ ನಟಿಸಿ: ಸಿದ್ದರಾಮಯ್ಯ

'ಸಿನಿಮಾರಂಗಕ್ಕೆ ಒಮ್ಮೆ ಬಂದ ಮೇಲೆ ಬಿಡಲಾಗುವುದಿಲ್ಲ. ನೀವು ಶಕ್ತಿ ಇರುವವರೆಗೆ ನಟಿಸುತ್ತಲೇ ಇರಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ರೀನಾಥ್ ಅವರಿಗೆ ಹಾರೈಸಿದರು.

'ಸಿನಿಮಾ ಅಂದರೆ ಮನರಂಜನೆ ಒಂದೇ ಅಲ್ಲ. ಕನ್ನಡದ ಕಂಪು, ನಮ್ಮ ಸಂಸ್ಕೃತಿ, ಕನ್ನಡ ಭಾಷೆಯ ವೈಭವವನ್ನು ಎತ್ತಿ ಹಿಡಿಯುವ ಕೆಲಸ. ಇದನ್ನು ಆಸಕ್ತಿಯಿಂದ ಮಾಡಿಕೊಂಡು ಬಂದಿರುವ ಶ್ರೀನಾಥ್ ಅವರು ಒಂದು ಬಾರಿ ವಿಧಾನ ಪರಿಷತ್ ಸದಸ್ಯರಾಗಿಯೂ ಜನಪರ ಕೆಲಸ ಮಾಡಿದ್ದರು' ಎಂದರು.

'ನಾನು ವಿದ್ಯಾರ್ಥಿಯಾಗಿದ್ದಾಗ, ವಕೀಲನಾಗಿದ್ದಾಗ ಅನೇಕ ಸಿನಿಮಾಗಳನ್ನು ನೋಡಿದ್ದೇನೆ. ರಾಜಕುಮಾರ್ ಅವರ ಚಿತ್ರಗಳನ್ನು ಆನಂತರ ನಿಮ್ಮ ಚಿತ್ರಗಳನ್ನು ನೋಡಿ ಆನಂದಿಸಿದ್ದೇನೆ. ಮಂಜುಳಾ ಮತ್ತು ನೀವು ನನ್ನ ಇಷ್ಟದ ಜೋಡಿ' ಎಂದು ಹೇಳಿದರು.



ಇನ್ನಷ್ಟು ಸುದ್ದಿಗಳು 9

ಅನುದಾನ ಶಾಸಕರಿಗೆ ಶೇ 25 ಮೀಸಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಅವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ನೀಡಿದ ಅನುದಾನದಲ್ಲಿ ಆಯಾ ಶಾಸಕರು ತಮ್ಮ ವಿವೇಚನಾ ಕೋಟಾದ ಕಾಮಗಾರಿಗಳಿಗೆ ಶೇ 25ರಷ್ಟು ಮೊತ್ತ ಬಳಸಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ.



ಮುಖ್ಯಮಂತ್ರಿ ಅವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು ಆರ್ಥಿಕ ಇಲಾಖೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಆಯಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಶೇ 50ರಷ್ಟು ಅನುದಾನವನ್ನು ಲೋಕೋಪಯೋಗಿ ಇಲಾಖೆಯ ರಸ್ತೆ, ಸೇತುವೆ ಕಾಮಗಾರಿಗಳಿಗೆ, ಶೇ 25ರಷ್ಟು ಗ್ರಾಮೀಣ ರಸ್ತೆ ಮತ್ತು ಮೂಲಸೌಕರ್ಯ ಕಾಮಗಾರಿಗಳಿಗೆ ವಿನಿಯೋಗಿಸಲು ಸೂಚಿಸಿದೆ.

ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಮತ್ತು ನೈರ್ಮಲ್ಯ ಒದಗಿಸುವುದು. ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ರಸ್ತೆಗಳ ನಿರ್ಮಾಣ, ಜನರ ದೈನಂದಿನ ಕಾರ್ಯಗಳಿಗೆ ಅಗತ್ಯವಾದ ಮೂಲಸೌಕರ್ಯ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

₹10 ಕೋಟಿವರೆಗಿನ ಕಾಮಗಾರಿಗಳಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಆಡಳಿತಾತ್ಮಕ ಅನುಮೋದನೆ ನೀಡಬೇಕು. ₹10 ಕೋಟಿಗೂ ಅಧಿಕ ಮೊತ್ತಕ್ಕೆ ಸಚಿವ ಸಂಪುಟದ ಅನುಮೋದನೆ ಪಡೆಯಬೇಕು. ಭೂಸ್ವಾಧೀನ ಕಾಮಗಾರಿ, ಆಡಳಿತಾತ್ಮಕ ವೆಚ್ಚಗಳಿಗೆ ಈ ಯೋಜನೆ ಬಳಕೆ ಮಾಡಿಕೊಳ್ಳುವುದಕ್ಕೆ ನಿರ್ಬಂಧ ವಿಧಿಸಲಾಗಿದೆ.

ಚಿನಕುರುಳಿ – ಪ್ರಕಾಶ್ ಶೆಟ್ಟಿ



'ಜಾತ್ಯತೀತ', 'ಸಮಾಜವಾದ' ಪದ ತೆಗೆಯಬೇಕು: ಹೊಸಬಾಳೆ ಹೇಳಿಕೆಗೆ ಆಕ್ರೋಶ

'ಸಂವಿಧಾನ ಮೇಲಿನ ದಾಳಿ'

ಪ್ರಜಾವಾಣಿ ವಾರ್ತೆ/ಪಿಟಿಐ



ದತ್ತಾತ್ರೇಯ ಹೊಸಬಾಳೆ

ನವದೆಹಲಿ: 'ಸಂವಿಧಾನದ ಪೀಠಿಕೆಯಿಂದ 'ಸಮಾಜವಾದ' ಮತ್ತು 'ಜಾತ್ಯತೀತ' ಪದಗಳನ್ನು ತೆಗೆಯಬೇಕು' ಎಂಬ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಹೇಳಿಕೆಗೆ ವಿರೋಧ ಪಕ್ಷಗಳ ಪಾಳಯದಿಂದ ಶುಕ್ರವಾರ ಭಾರಿ ಟೀಕೆ ವ್ಯಕ್ತವಾಗಿದೆ.

'ಆರ್‌ಎಸ್‌ಎಸ್ ಎಂದಿಗೂ ಸಂವಿಧಾನ ಒಪ್ಪಿಕೊಂಡಿಲ್ಲ. ಇದು, ಅಂಬೇಡ್ಕರ್ ಅವರ ದೂರದೃಷ್ಟಿಯನ್ನು ನಾಶ ಮಾಡಬೇಕು ಹಾಗೂ ಮನುಸ್ಮೃತಿ ಪ್ರತಿಪಾದಿಸುವ ಪ್ರಾಚೀನ ಚೌಕಟ್ಟನ್ನು ಮತ್ತೆ ಹೇರಬೇಕು ಎನ್ನುವ ಪಿತೂರಿಯ ಭಾಗವಾಗಿರುವ ಹೊಸದಾದ ಕರೆ' ಎಂದು ಟೀಕಾಪ್ರಹಾರ ನಡೆಸಿವೆ.

'ಭಾರತದ ಮೂಲಭೂತ ಮೌಲ್ಯಗಳ ಮೇಲೆ ನಡೆಯುತ್ತಿರುವ ನಿರಂತರ ದಾಳಿಯನ್ನು ಪ್ರತಿರೋಧಿಸಬೇಕು' ಎಂದೂ ವಿರೋಧ ಪಕ್ಷಗಳು ಕರೆ ನೀಡಿವೆ.

'ಜಾತ್ಯತೀತ ಮತ್ತು ಸಮಾಜವಾದ ಪದಗಳನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರ್ಪಡೆ ಮಾಡಿರುವುದು ಮನಸ್ಸಿಗೆ ತೋಚಿದಂತೆ ಕೈಗೊಂಡ ನಿರ್ಧಾರವಲ್ಲ' ಎಂದೂ ಹೇಳಿವೆ.

11

'ಆರ್‌ಎಸ್‌ಎಸ್ ಮುಖವಾಡ ಮತ್ತೊಮ್ಮೆ ಕಳಚಿದೆ'

'ಸಂಘಟನೆಯ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಹೇಳಿಕೆಯಿಂದ ಆರ್‌ಎಸ್‌ಎಸ್ ಮುಖವಾಡ ಮತ್ತೊಮ್ಮೆ ಕಳಚಿದೆ. ಸಂವಿಧಾನದ ಬದಲು ಮನುಸ್ಮೃತಿ ಜಾರಿಗೊಳ್ಳಬೇಕು ಎಂಬುದೇ ಅದರ ಬಯಕೆಯಾಗಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

'ಸಮಾನತೆ, ಜಾತ್ಯತೀತತೆ ಹಾಗೂ ನ್ಯಾಯದ ಪರವಾಗಿ ಮಾತನಾಡುವ ಸಂವಿಧಾನವು ಆರ್‌ಎಸ್‌ಎಸ್‌ಅನ್ನು ಕೆರಳುವಂತೆ ಮಾಡುತ್ತದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಸಂವಿಧಾನದ ಬದಲು ಮನುಸ್ಮೃತಿ ಜಾರಿಗೊಳಿಸುವ ಕುರಿತು ಕನಸು ಕಾಣುವುದನ್ನು ಆರ್‌ಎಸ್‌ಎಸ್ ನಿಲ್ಲಿಸಬೇಕು. ಅದು ಕಾರ್ಯಗತವಾಗುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ದೇಶಪ್ರೇಮಿಯಾಗಿರುವ ಪ್ರತಿಯೊಬ್ಬ ಭಾರತೀಯ ತನ್ನ ಕೊನೆಯ ಉಸಿರಿನವರೆಗೂ ಸಂವಿಧಾನ ರಕ್ಷಣೆಗೆ ಹೋರಾಡುತ್ತಾನೆ' ಎಂದೂ ಅವರು ಹೇಳಿದ್ದಾರೆ.

'ಅವಕಾಶವಾದಿತನ'

ಆರ್‌ಎಸ್‌ಎಸ್‌ನ ಕರೆ ನಮ್ಮ ಗಣತಂತ್ರದ ಮುಖ್ಯ ಆಶಯಗಳನ್ನು ನಾಶ ಮಾಡುವುದೇ ಆಗಿದೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ತನ್ನ ಅಸ್ತಿತ್ವಕ್ಕಾಗಿ ಆರ್‌ಎಸ್‌ಎಸ್ ಇಂದಿರಾ ಗಾಂಧಿ ಅವರ ಜೊತೆ ಕೈಜೋಡಿಸಿತ್ತು. ಸಂವಿಧಾನವನ್ನು ಬುಡಮೇಲು ಮಾಡುವುದಕ್ಕಾಗಿ ತುರ್ತು ಪರಿಸ್ಥಿತಿ ಹೇರಿದ್ದ ಆಗಿನ ಸಂದರ್ಭವನ್ನು ಬಳಸಿಕೊಳ್ಳುವುದು ಅದರ ಬೂಟಾಟಿಕೆ ಮತ್ತು ರಾಜಕೀಯ ಅವಕಾಶವಾದಿತನವನ್ನು ತೋರಿಸುತ್ತದೆ

ಪಿಣರಾಯಿ ವಿಜಯನ್, ಕೇರಳ ಮುಖ್ಯಮಂತ್ರಿ

'ಸಂವಿಧಾನದ ಮೂಲ ಆಶಯ ಮರುಸ್ಥಾಪನೆ ಉದ್ದೇಶ'

'ಸಂವಿಧಾನದ ಪ್ರಸ್ತಾವನೆಯಿಂದ 'ಸಮಾಜವಾದ' ಮತ್ತು 'ಜಾತ್ಯತೀತ' ಪದಗಳನ್ನು ತೆಗೆಯಬೇಕು' ಎಂಬ ಆರ್‌ಎಸ್‌ಎಸ್ ಸರಕಾರ್ಯವಾಹ ಹೊಸಬಾಳೆ ಅವರ ಹೇಳಿಕೆಯನ್ನು ಆರ್‌ಎಸ್‌ಎಸ್ ಮುಖವಾಣಿ 'ಆರ್ಗನೈಜರ್' ಶುಕ್ರವಾರ ಸಮರ್ಥಿಸಿಕೊಂಡಿದೆ.

ಸುದ್ದಿ 11

₹5 ಲಕ್ಷ ಲಂಚ ವೈದ್ಯನ ಸೆರೆ

ಪ್ರಜಾವಾಣಿ ವಾರ್ತೆ

ಹಾವೇರಿ: 'ವೈದ್ಯರ ನಿರ್ಲಕ್ಷ್ಯದಿಂದ ಮೃತಪಟ್ಟಿದ್ದಾಳೆ' ಎನ್ನಲಾದ ಬಾಲಕಿ ವಂದನಾ ತುಪ್ಪದ ಅವರ ಸಾವಿನ ಪ್ರಕರಣದಲ್ಲಿ ಆಸ್ಪತ್ರೆಯ ಪರವಾಗಿ ಎಫ್‌ಎಸ್‌ಎಲ್ (ವಿಧಿ ವಿಜ್ಞಾನ ಪ್ರಯೋಗಾಲಯ) ವರದಿ ನೀಡುವುದಾಗಿ ಹೇಳಿ ₹5 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿದ್ದ ಆರೋಪದಡಿ ಸರ್ಕಾರಿ ವೈದ್ಯ ಸೇರಿ ಇಬ್ಬರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಹಾವೇರಿ ವೈದ್ಯಕೀಯ ಮಹಾ ವಿದ್ಯಾಲಯದ ನ್ಯಾಯ ವೈದ್ಯವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರೂ ಆಗಿದ್ದ ಜಿಲ್ಲಾಸ್ಪತ್ರೆಯ ವೈದ್ಯ ಡಾ. ಗುರುರಾಜ ಭೀಮರಾಯ ಬಿರಾದಾರ ಹಾಗೂ ಇಜಾರಿಲಕಮಾಪುರದ ನಿವಾಸಿ ಚನ್ನಬಸಯ್ಯ ಕುಲಕರ್ಣಿ ಬಂಧಿತರು.

'ಡಾ. ಗುರುರಾಜ ಮರಣೋತ್ತರ ಪರೀಕ್ಷೆ ನಡೆಸಿದ್ದರು. ಪರಿಚಯಸ್ಥ ಚನ್ನಬಸಯ್ಯ ಮೂಲಕ ಚಿರಾಯು ಆಸ್ಪತ್ರೆಯವರೊಂದಿಗೆ ಸಂಪರ್ಕ ಸಾಧಿಸಿದ್ದರು. ವರದಿಯನ್ನು ಆಸ್ಪತ್ರೆ ಪರವಾಗಿ ನೀಡುವ ಭರವಸೆ ನೀಡಿ, ₹5 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿದ್ದರು. ₹3 ಲಕ್ಷ ಹಣ ಪಡೆಯಲು ಬಂದಿದ್ದಾಗ ಬಂಧಿಸಲಾಗಿದೆ' ಎಂದರು.



ಪುರಿ ಜಗನ್ನಾಥ ರಥಯಾತ್ರೆಯಲ್ಲಿ ಭಾಗಿಯಾಗಿದ್ದ ಭಕ್ತರ ಮೇಲೆ ಅಗ್ನಿಶಾಮಕ ಸಿಬ್ಬಂದಿ ನೀರು ಹಾರಿಸಿದರು –ಪಿಟಿಐ ಚಿತ್ರ

ಪುರಿ ರಥಯಾತ್ರೆ ವೇಳೆ ದಟ್ಟಣೆ ಒಂಬತ್ತು ಮಂದಿ ಸ್ಥಿತಿ ಗಂಭೀರ

ಪುರಿ (ಪಿಟಿಐ): ಪುರಿ ಜಗನ್ನಾಥ ದೇಗುಲದ ರಥಯಾತ್ರೆ ವೇಳೆ ಶುಕ್ರವಾರ ಅತಿಯಾದ ಸೆಕೆ ಮತ್ತು ಕಿಕ್ಕಿರಿದ ಜನ ದಟ್ಟಣೆಯಿಂದಾಗಿ ಸುಮಾರು 625 ಮಂದಿ ಕುಸಿದು ಬಿದ್ದು, ಅಸ್ವಸ್ಥಗೊಂಡರು ಎಂದು ಅಧಿಕಾರಿಗಳು ತಿಳಿಸಿದರು.

'ಜಿಲ್ಲಾಸ್ಪತ್ರೆಯಲ್ಲಿ ಸುಮಾರು 70 ಮಂದಿ ಚಿಕಿತ್ಸೆ ಪಡೆಯುತ್ತಿದ್ದು, ಈ ಪೈಕಿ ಒಂಬತ್ತು ಮಂದಿಯ ಸ್ಥಿತಿ ಗಂಭೀರವಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಹಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಕೆಲವರಿಗೆ ವಾಂತಿಯಾದರೆ ಮತ್ತೆ ಕೆಲವರು ನಿಶ್ಯಕ್ತಿಯಿಂದ ಬಳಲಿದ್ದರು. ಹಲವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ ಕಳುಹಿಸಲಾಗಿದೆ' ಎಂದು ಪುರಿ ಜಿಲ್ಲೆಯ ಮುಖ್ಯ ವೈದ್ಯಾಧಿಕಾರಿ ಡಾ.ಕಿಶೋರ್ ಸತ್ಪತಿ ತಿಳಿಸಿದರು.

'ಲಕ್ಷಾಂತರ ಜನರು ಗಂಟೆಗಟ್ಟಲೆ ಒಂದೇ ಸ್ಥಳದಲ್ಲಿ ಸಿಲುಕಿಕೊಂಡಿದ್ದರು. ದಟ್ಟಣೆಯಿಂದ ಹೊರಬರಲು ಕೆಲವರು ಯತ್ನಿಸಿದ್ದು ಅಹಿತಕರ ಪರಿಸ್ಥಿತಿಗೆ ಕಾರಣವಾಯಿತು' ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದರು.

ದಟ್ಟಣೆಯ ಪರಿಣಾಮ ಬಾಲಭದ್ರ ಸ್ವಾಮಿಯ ರಥ ಮತ್ತು ತಳಧ್ವಜ ಗಂಟೆಗಳ ಕಾಲ ಒಂದೇ ಸ್ಥಳದಲ್ಲಿ ಸಿಲುಕಿಕೊಂಡಿತ್ತು' ಎಂದು ಮೂಲಗಳು ತಿಳಿಸಿವೆ.

ಟೆಂಡರ್ ರದ್ದಾದರೂ ಮಂಚ

ಅರ್ಹವಲ್ಲದ ಕಂಪನಿಗೆ ಪೂರೈಕೆಯ ಹೊಣೆ ವಹಿಸಿ ಆದೇಶ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮಂಚಗಳನ್ನು ಪೂರೈಸಲು ಕರೆದಿದ್ದ ₹14.5 ಕೋಟಿ ಮೌಲ್ಯದ ಟೆಂಡರ್ ಪ್ರಕ್ರಿಯೆಯನ್ನು ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕಳೆದ ತಿಂಗಳೇ ರದ್ದು ಮಾಡಿದ್ದರೂ ಅರ್ಹತೆ ಇಲ್ಲದ ಕಂಪನಿಗೆ ಮಂಚಗಳನ್ನು ಪೂರೈಸಲು ಟೆಂಡರ್ ಪರಿಶೀಲನಾ ಸಮಿತಿ ಶುಕ್ರವಾರ ಸಮ್ಮತಿ ನೀಡಿದೆ.

ಟೆಂಡರ್ ಲೋಪಗಳ ಕುರಿತು ದೂರುಗಳನ್ನು ಸ್ವೀಕರಿಸಿ, ಮೇ 28ರಂದು ವಿಚಾರಣೆ ನಡೆಸಿದ್ದ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್, '₹5 ಕೋಟಿಯ ಒಂದು ಟೆಂಡರ್ ಅನ್ನು ಅಂದೇ ರದ್ದುಪಡಿಸಿದ್ದರು. ಉಳಿದ ₹9.5 ಕೋಟಿ ಟೆಂಡರ್ ಬಗ್ಗೆ ಸಚಿವ ಸಂಪುಟದ ಅನುಮೋದನೆ ಪಡೆದು ಎರಡೂ ಮೊತ್ತಕ್ಕೆ ಒಟ್ಟಿಗೆ ಇ–ಟೆಂಡರ್ ಅಧಿಸೂಚನೆ ಹೊರಡಿಸಬೇಕು' ಎಂದು ಆದೇಶ ಹೊರಡಿಸಿದ್ದರು. ಅವರ ಆದೇಶವನ್ನೂ ಲೆಕ್ಕಿಸದೆ ಸಮಾಜ ಕಲ್ಯಾಣ ಇಲಾಖೆ ಆಯುಕ್ತರ ಕಚೇರಿಯ ಟೆಂಡರ್ ಪರಿಶೀಲನಾ ಸಮಿತಿ ಬಿಡ್ ಅಂತಿಮಗೊಳಿಸಿದೆ.

4B

ಮುಖ್ಯಾಂಶಗಳು


- ಸಚಿವ ಸಂಪುಟದ ಅನುಮತಿ ತಪ್ಪಿಸಲು ಎರಡು ಟೆಂಡರ್
- ಆಯ್ಕೆಯಾದ ಮಂಚದ ಮಾದರಿ ಆರೋಗ್ಯಕ್ಕೆ ಮಾರಕ

ಟೆಂಡರ್ ರದ್ದು ಮಾಡಬೇಕು. ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿರುವ, ಗುಣಮಟ್ಟದ ಟೂ–ಟೈರ್ ಕಾಟ್ ಮಾದರಿ ಸಲ್ಲಿಸಿರುವ ಕಂಪನಿಗಳಿಗೆ ಪೂರೈಕೆಯ ಅವಕಾಶ ನೀಡಬೇಕು

ಕೇಶವ ರೆಡ್ಡಿ, ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ನಗರ ಜಿಲ್ಲಾ ಸರಬರಾಜು ಮತ್ತು ಮಾರಾಟಗಾರರ ಸಹಕಾರ ಸಂಘ

ಅನುಮೋದನೆ ಇಲ್ಲದೇ ಟೆಂಡರ್

ಕರ್ನಾಟಕ ರಾಜ್ಯ ವ್ಯಾಪಾರ ವಹಿವಾಟು ನಿಯಮಗಳ ಪ್ರಕಾರ ಯಾವುದೇ ಟೆಂಡರ್ ಕರೆಯುವ ಸಾಮಗ್ರಿ ಏಕರೂಪವಾಗಿದ್ದು, ಅದರ ಒಟ್ಟಾರೆ ಮೊತ್ತ ₹10 ಕೋಟಿ ಮೀರಿದ್ದರೆ ಸಚಿವ ಸಂಪುಟದ ಅನುಮೋದನೆ ಪಡೆಯಬೇಕಾಗುತ್ತದೆ.



ಎರಡು ಸ್ತರದ ಮಂಚಗಳನ್ನು ಪೂರೈಸಲು ನಿಗದಿಯಾಗಿದ್ದ ಮೊತ್ತವನ್ನು ಎರಡು ಭಾಗವಾಗಿ ವಿಂಗಡಿಸಿ, ಒಂದೇ ತಿಂಗಳಲ್ಲಿ ಎರಡು ಇ–ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ. ಈ ರೀತಿ ವಿಭಜನೆ ಮಾಡಿ ನಿಯಮ ಬಾಹಿರವಾಗಿ ಟೆಂಡರ್ ಕರೆಯಲಾಗಿದೆ. ಈ ಅಂಶವನ್ನೂ ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ಅವರು ಟೆಂಡರ್ ರದ್ದತಿಯ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಪ್ರಾಥಮಿಕ ತನಿಖೆಯಲ್ಲಿ ದೃಢ; ಅರಣ್ಯ ಸಚಿವ ಈಶ್ವರ ಖಂಡ್ರೆ

ವಿಷಪ್ರಾಶನದಿಂದಲೇ ಹುಲಿಗಳ ಸಾವು

ಪ್ರಜಾವಾಣಿ ವಾರ್ತೆ

ಹನೂರು (ಚಾಮರಾಜನಗರ ಜಿಲ್ಲೆ): 'ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಹೂಗ್ಯಂ ವಲಯದಲ್ಲಿ ಐದು ಹುಲಿಗಳ ಅಸಹಜ ಸಾವಿಗೆ ವಿಷಪ್ರಾಶನವೇ ಕಾರಣವೆಂದು ಪ್ರಾಥಮಿಕ ತನಿಖೆಯಲ್ಲಿ ದೃಢಪಟ್ಟಿದೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದರು.

ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದು ಸುದ್ದಿಗಾರರೊಂದಿಗೆ ಅವರು ಶುಕ್ರವಾರ ಮಾತನಾಡಿದರು. 'ಸಾವಿನ ತನಿಖೆಗೆ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ. ವರದಿಯನ್ನು ಆಧರಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯ ನಿರ್ಲಕ್ಷ್ಯದ ಬಗ್ಗೆಯೂ ತನಿಖೆಗೆ ಸೂಚಿಸಲಾಗಿದ್ದು, ಅವರ ವಿರುದ್ಧವೂ ಶಿಸ್ತು ಕ್ರಮವನ್ನು ಜರುಗಿಸಲಾಗುವುದು' ಎಂದರು.

'ರಸ್ತೆಯಿಂದ ಅನತಿ ದೂರದಲ್ಲಿ ಹುಲಿಗಳು ಸತ್ತುಬಿದ್ದರೂ ಗಮನಿಸದಿರುವುದು ಅರಣ್ಯಾಧಿಕಾರಿಗಳ ನಿರ್ಲಕ್ಷ್ಯವಲ್ಲವೇ' ಎಂಬ ಪ್ರಶ್ನೆಗೆ ಸಿಡಿಮಿಡಿಗೊಂಡ ಅವರು, 'ಎಲ್ಲ ಪ್ರಶ್ನೆಗಳಿಗೂ ತನಿಖಾ ವರದಿ ಬಂದ ನಂತರವಷ್ಟೇ ಉತ್ತರ ನೀಡುವೆ' ಎಂದರು.

'ವಿಷಪೂರಿತ ಜಾನುವಾರು ಕಳೇಬರವನ್ನು ತಿಂದು ಹುಲಿಗಳು ಸತ್ತಿವೆ. ಹುಲಿಗಳ ಹಾಗೂ ಹಸುವಿನ ಅಂಗಾಂಗಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಚಾಮರಾಜನಗರ ವೃತ್ತ ಸಿಸಿಎಫ್ ಟಿ.ಹೀರಾಲಾಲ್ ಮಾಹಿತಿ ನೀಡಿದರು.

'ತಾಯಿ ಹುಲಿಗೆ 8ರಿಂದ 9 ವರ್ಷ, ಮರಿಗಳು 9ರಿಂದ 10 ತಿಂಗಳ ಪ್ರಾಯದ್ದಾಗಿದ್ದು, ಮೂರು ದಿನಗಳ ಹಿಂದೆ ಮೃತಪಟ್ಟಿವೆ. ಗೊಬ್ಬರಕ್ಕಾಗಿ ತಮಿಳುನಾಡಿನಿಂದ ಅಕ್ರಮವಾಗಿ ಜಾನುವಾರುಗಳನ್ನು ರಾಜ್ಯಕ್ಕೆ ತರುತ್ತಿರುವ ಬಗ್ಗೆ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಕರ್ತವ್ಯ ನಿರ್ಲಕ್ಷ್ಯ ಆರೋಪಗಳ ಬಗ್ಗೆಯೂ ತನಿಖೆ ನಡೆಯಲಿದೆ' ಎಂದು ತಿಳಿಸಿದರು.

4A



ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಹೂಗ್ಯಂ ವಲಯದಲ್ಲಿ ಮೃತಪಟ್ಟ ಐದು ಹುಲಿಗಳ ಕಳೇಬರವನ್ನು ಸುಡಲಾಯಿತು

ಐದು ತಿಂಗಳಿಂದ ವೇತನ ಇಲ್ಲ

ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ 65ಕ್ಕೂ ಹೆಚ್ಚು ಹೊರಗುತ್ತಿಗೆ ವಾಚರ್‌ಗಳಿಗೆ 5 ತಿಂಗಳಿಂದ ವೇತನ ದೊರಕಿಲ್ಲ.

'ಹುಲಿಗಳ ಸಾವು ಸಂಭವಿಸುವ ಮುನ್ನಾ ದಿನವಾದ ಜೂನ್ 23ರಂದು ಸಿಬ್ಬಂದಿಯು ಎಂಎಂ ಹಿಲ್ಸ್ ಡಿಸಿಎಫ್ ಕಚೇರಿ ಮುಂದೆ ಮೌನ ಪ್ರತಿಭಟನೆ ನಡೆಸಿದ್ದರು. ವೇತನವಿಲ್ಲದೆ ಸಿಬ್ಬಂದಿ ಬೀಟ್‌ಗೆ ಸರಿಯಾಗಿ ಹೋಗುತ್ತಿರಲಿಲ್ಲ. ಅರಣ್ಯ ದಂಚಿನಲ್ಲಿರುವ ರಸ್ತೆಯಿಂದ 50 ಮೀಟರ್ ದೂರದಲ್ಲಿ ಐದು ಹುಲಿಗಳು ಸತ್ತು ಬಿದ್ದರೂ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಕಣ್ಣಿಗೆ ಬೀಳದಿರುವುದು ಕರ್ತವ್ಯ ನಿರ್ಲಕ್ಷ್ಯದ ಪರಮಾವಧಿ' ಎಂದು ವನ್ಯಜೀವಿ ತಜ್ಞರು ಟೀಕಿಸಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ತುಂತುರು ಮಳೆಯಾಗುವ ಸಾಧ್ಯತೆ ಇದೆ

ಜಾತಿ ಸಮೀಕ್ಷೆ ಪರಿಶೀಲನೆ

ಯಲಹಂಕ: ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ ಯಲಹಂಕ ಕ್ಷೇತ್ರವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ, ಜಾತಿ ಸಮೀಕ್ಷೆಯ ಪರಿಶೀಲನೆ ನಡೆಸಿದರು. ಯಲಹಂಕ ಹಳೆನಗರದ ಎ.ಕೆ ಕಾಲೊನಿ, ಅರಕೆರೆ ಬಡಾವಣೆ, ಸುರಧೇನುಪುರ, ಎಂ.ಎಸ್. ಪಾಳ್ಯ ಹಾಗೂ ಬೆಟ್ಟಹಳ್ಳಿ ಗ್ರಾಮಗಳಲ್ಲಿ ಮನೆಮನೆಗೆ ತೆರಳಿ, ಸಮೀಕ್ಷೆ ನಡೆಯುತ್ತಿರುವ ಕಾರ್ಯವೈಖರಿಯನ್ನು ಪರಿಶೀಲಿಸಿದರು. ಸಮಗ್ರ ಜಾತಿ ಸಮೀಕ್ಷೆ ಕುರಿತು ಜಾಗೃತಿ ಮೂಡಿಸಿದರು. ಸಮೀಕ್ಷೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದರು.

'ಜಾತಿಗಳಿಗೆ ಅನುಗುಣವಾಗಿ ಆರ್ಥಿಕ ಮತ್ತು ಸಾಮಾಜಿಕ ಸವಲತ್ತುಗಳನ್ನು ದೊರಕಿಸಿ ಕೊಡಬೇಕೆಂದು ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆ ನಡೆಸುತ್ತಿದೆ. ಸಮೀಕ್ಷೆ ಸಂದರ್ಭದಲ್ಲಿ ತಮ್ಮ ಮೂಲ ಜಾತಿಗಳನ್ನು ಸ್ಪಷ್ಟವಾಗಿ ತಿಳಿಸಬೇಕು' ಎಂದು ಸಚಿವರು ಸೂಚಿಸಿದರು.

ನಗರದ ಇನ್ನಷ್ಟು ಸುದ್ದಿಗಳು 4B

'ನಗರದ ಅಭಿವೃದ್ಧಿ ನಮ್ಮ ಕರ್ತವ್ಯ, ಹೊಣೆ'

ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಕಾರ್ಯಕ್ರಮದಲ್ಲಿ ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ನಗರವನ್ನು ಇನ್ನಷ್ಟು ಅಭಿವೃದ್ಧಿಪಡಿಸುವುದು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿ. ನಗರದ ಅಭಿವೃದ್ಧಿ ಕನಸನ್ನು ನನಸಾಗಿಸಲು ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಬಿಎಂಪಿ ಹಾಗೂ ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ಶುಕ್ರವಾರ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಹಂಪಿ ಬಹಳ ಪ್ರವರ್ಧಮಾನಕ್ಕೆ ಬಂದಿದ್ದ ಕಾಲದಲ್ಲಿ ಅದರಿಂದ ಪ್ರೇರಣೆಗೊಂಡ ಕೆಂಪೇಗೌಡರು ಬೆಂಗಳೂರು ಅಭಿವೃದ್ಧಿಪಡಿಸಿದರು. ಅವರು, 500 ವರ್ಷಗಳ ಹಿಂದೆಯೇ ಎಲ್ಲರನ್ನೊಳಗೊಂಡ ಸಮಾಜ ನಿರ್ಮಿಸುವ ದೂರದೃಷ್ಟಿ ಹೊಂದಿದ್ದ ಮುತ್ಸದ್ದಿ ನಾಯಕ. ವೃತ್ತಿಯಾಧಾರಿತ ಪೇಟೆಗಳನ್ನು ನಿರ್ಮಿಸಿ, ಬೆಂಗಳೂರನ್ನು ವಾಣಿಜ್ಯ ಕೇಂದ್ರವಾಗಿಸಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ. ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆಯಲು ಅವರೇ ಮೂಲ ಕಾರಣ. ಬೆಂಗಳೂರು ಸಿಲಿಕಾನ್ ವ್ಯಾಲಿ ಆಫ್ ಇಂಡಿಯಾ, ಸ್ಟಾರ್ಟ್ ಅಪ್ ರಾಜಧಾನಿ ಶಿಕ್ಷಣ ಹಾಗೂ ಆರೋಗ್ಯ ಕೇಂದ್ರವಾಗಿದ್ದರೆ ಅದಕ್ಕೆ ಅಡಿಪಾಯ ಹಾಕಿದವರು ಕೆಂಪೇಗೌಡರು' ಎಂದು ಹೇಳಿದರು.

'ಸರ್ಕಾರದ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಆಚರಿಸಲು 2017ರಲ್ಲಿ ನಮ್ಮ ಸರ್ಕಾರ ತೀರ್ಮಾನಿಸಿತ್ತು. ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ರಚನೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ಪ್ರಾರಂಭಿಸಲಾಯಿತು. ಮಾಗಡಿ ಕೆಂಪಾಪುರದಲ್ಲಿ ಕೆಂಪೇಗೌಡರ ಸಮಾಧಿ ಅಭಿವೃದ್ಧಿ ಕಾರ್ಯವನ್ನು ಸರ್ಕಾರ ಕೈಗೆತ್ತಿಕೊಂಡಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಹೆಸರಿಟ್ಟಿದ್ದು ನಮ್ಮ ಸರ್ಕಾರ. ಕೆಂಪೇಗೌಡ ಭವನಕ್ಕೆ ಇಂದು ಶಂಕುಸ್ಥಾಪನೆ ನೆರವೇರಿಸಿದ್ದು, ಕಟ್ಟಡವನ್ನು ನಾವೇ ಉದ್ಘಾಟಿಸುತ್ತೇವೆ' ಎಂದು ಹೇಳಿದರು.

'ನಾಡಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ'ಯನ್ನು ಮೈಸೂರು ಸ್ಯಾಂಡಲ್ ಸೋಪ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಪಿ.ಕೆ.ಎಂ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ವ್ಯವಸ್ಥಾಪಕ ನಿರ್ದೇಶಕ ಹರಿ ಮರಾರ್ ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಕೌಶಲ್ ವರ್ಮಾ ಅವರಿಗೆ ಪ್ರದಾನ ಮಾಡಲಾಯಿತು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ಸಚಿವರಾದ ಕೃಷ್ಣ ಬೈರೇಗೌಡ, ಶಿವರಾಜ ತಂಗಡಗಿ, ಕೆ.ಎಚ್.ಮುನಿಯಪ್ಪ, ಎಚ್.ಸಿ.ಮಹದೇವಪ್ಪ ಉಪಸ್ಥಿತರಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೆಂಪೇಗೌಡ ಭವನ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದರು. ಬಾಲಕೃಷ್ಣ, ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಶಿವರಾಜ ತಂಗಡಗಿ, ಮುನಿರತ್ನ, ಪುಟ್ಟಣ್ಣ, ಡಿ.ಕೆ. ಸುರೇಶ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

7 ಭಾಗದಿಂದ 'ಪುರಜ್ಯೋತಿ'


ನಗರದ ನಾಲ್ಕು ದಿಕ್ಕುಗಳಲ್ಲಿರುವ (ಲಾಲ್‌ಬಾಗ್, ಮೇಖ್ರಿ ವೃತ್ತ, ಕೆಂಪಾಂಬುಧಿ ಕೆರೆ ಹಾಗೂ ಹಲಸೂರು) ಗಡಿ ಗೋಪುರ, ಐತಿಹಾಸಿಕ ಸ್ಥಳಗಳಾದ ಮಾಗಡಿ ತಾಲ್ಲೂಕಿನ ಕೆಂಪಾಪುರ, ದೇವನಹಳ್ಳಿ ತಾಲ್ಲೂಕಿನಲ್ಲಿರುವ ಆವತಿ ಹಾಗೂ ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗದಿಂದ ಶುಕ್ರವಾರ ಬೆಳಿಗ್ಗೆ 'ಪುರಜ್ಯೋತಿ' ಹೊರಟು, ಸುಮನಹಳ್ಳಿ ವೃತ್ತದ ಬಳಿಯ ಕೆಂಪೇಗೌಡ ಭವನದ ನಿರ್ಮಾಣ ಸ್ಥಳಕ್ಕೆ ಬಂದು ಸೇರಿದವು.

ಪ್ರತಿಮೆಗಳಿಗೆ ಮಾಲಾರ್ಪಣೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಎದುರು ಇರುವ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಸಿ.ಮಹದೇವಪ್ಪ, ಶಿವರಾಜ್ ತಂಗಡಗಿ, ಶಾಸಕರಾದ ರಿಜ್ವಾನ್ ಅರ್ಷದ್, ಬಸನಗೌಡ ದದ್ದಲ್ ಉಪಸ್ಥಿತರಿದ್ದರು.

ಉಪ ಮುಖ್ಯಮಂತ್ರಿ ಅವರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.

ಬಿಬಿಎಂಪಿ ಕೇಂದ್ರ ಕಚೇರಿ ಸಮೀಪ ಇರುವ ಕೆಂಪೇಗೌಡರ ಪ್ರತಿಮೆ ಹಾಗೂ ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿರುವ ಮಹಾತ್ಯಾಗಿ ಲಕ್ಷ್ಮೀದೇವಿ ಪ್ರತಿಮೆಗೆ ಡಿ.ಕೆ.ಶಿವಕುಮಾರ್ ಅವರು ಮಾಲಾರ್ಪಣೆ ಮಾಡಿ, ಪುಷ್ಪನಮನ ಸಲ್ಲಿಸಿದರು. ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಪೂರ್ವ ವಲಯದ ಆಯುಕ್ತೆ ಸ್ನೇಹಲ್ ಭಾಗವಹಿಸಿದ್ದರು.



ಬಿಬಿಎಂಪಿಯ ನಾಡಪ್ರಭು ಕೆಂಪೇಗೌಡ ಪ್ರಶಸ್ತಿಯನ್ನು ನಿವೃತ್ತ ಐಎಎಸ್ ಅಧಿಕಾರಿಗಳಾದ ಎಸ್‌ಆರ್ ಉಮಾಶಂಕರ್, ಜೈರಾಜ್ ಜರೋಮ್, ಬಿ.ಎಸ್ ಪಾಟೀಲ್ ಅವರಿಗೆ ಪ್ರದಾನ ಮಾಡಲಾಯಿತು. ಟಿ.ಎ. ಶರವಣ, ಮಹೇಶ್ವರ್ ರಾವ್, ಎನ್.ಎ. ಹ್ಯಾರಿಸ್, ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು

'ತಿಂಗಳಲ್ಲಿ ಬಿಬಿಎಂಪಿ ವಿಭಜನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಅಭಿವೃದ್ಧಿಗಾಗಿ ಬಿಬಿಎಂಪಿ ವ್ಯಾಪ್ತಿಯನ್ನು 'ಗ್ರೇಟರ್ ಬೆಂಗಳೂರು' ರಚಿಸಿದ್ದೇವೆ. ಇದಕ್ಕೆ ಇನ್ನಷ್ಟು ಪ್ರದೇಶವನ್ನು ಸೇರಿಸಿ, ಒಂದು ತಿಂಗಳಲ್ಲಿ ಐದು ಪಾಲಿಕೆಗಳನ್ನು ಮಾಡಬೇಕು ಎಂದು ನಿರ್ಧರಿಸಲಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಬಿಎಂಪಿಯ ಡಾ.ರಾಜ್‌ಕುಮಾರ್ ಗಾಜಿನ ಮನೆಯಲ್ಲಿ 53 ಸಾಧಕರಿಗೆ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

'ಕೆಂಪೇಗೌಡ ಅವರು ಹಾಕಿಕೊಟ್ಟ ಅಡಿಪಾಯದ ಮೇಲೆ ನಾವು 'ಬ್ರ್ಯಾಂಡ್ ಬೆಂಗಳೂರು' ಮಾಡುವ ಪರಿಕಲ್ಪನೆ ಇದೆ. ನಾವೆಲ್ಲರೂ ಸೇರಿ, ಬಲಿಷ್ಠ ಬೆಂಗಳೂರು, ಶಾಂತ ಬೆಂಗಳೂರು, ಗ್ರೀನ್ ಬೆಂಗಳೂರು, ಸುರಕ್ಷಿತ ಬೆಂಗಳೂರು ನಿರ್ಮಿಸೋಣ' ಎಂದರು.

'ಸ್ಕೈ ಡೆಕ್ ನಿರ್ಮಾಣದ ವಿಷಯದಲ್ಲಿ ತಾಂತ್ರಿಕ ಅಂಶಗಳಿವೆ. ಇದಕ್ಕೆ ವಿಮಾನ ನಿಲ್ದಾಣ ಅಧಿಕಾರಿಗಳು ಒಪ್ಪಿಗೆ ನೀಡಬೇಕು. ವಿಮಾನ ನಿಲ್ದಾಣದಿಂದ 20 ಕಿ.ಮೀ ದೂರದಲ್ಲಿ ನಿರ್ಮಿಸಬೇಕಾಗುತ್ತದೆ. ನಮ್ಮ ಮೆಟ್ರೊಗೆ ಹತ್ತಿರದ ಜಾಗ ಹುಡುಕುತ್ತಿದ್ದು, ಶೀಘ್ರ ಅಂತಿಮಗೊಳಿಸುತ್ತೇವೆ ಎಂದು ಅವರು ಹೇಳಿದರು.



ನಾಡಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ವಿಜ್ಞಾನಿ ಪ್ರಹ್ಲಾದ್ ರಾಮರಾವ್(ವಿಜ್ಞಾನ), ಅನಿವಾಸಿ ಭಾರತೀಯ ಅಮರನಾಥ ಗೌಡ (ಉದ್ಯಮ), ಕೆ.ಪಿ. ಗೋಪಾಲಕೃಷ್ಣ (ಶಿಕ್ಷಣ) ಅವರಿಗೆ ಪ್ರದಾನ ಮಾಡಲಾಯಿತು. ಕೆ. ಸುಧಾಕರ್, ಡಾ. ಸಿ.ಎನ್. ಮಂಜುನಾಥ್, ಡಿ.ವಿ. ಸದಾನಂದಗೌಡ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಬಿ. ವೈ. ವಿಜಯೇಂದ್ರ, ನಿಶ್ಚಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ, ನಿರ್ಮಲಾನಂದನಾಥ ಸ್ವಾಮೀಜಿ, ಛಲವಾದಿ ನಾರಾಯಣಸ್ವಾಮಿ, ಆರ್. ಅಶೋಕ, ಸಿ.ಟಿ.ರವಿ, ಪ್ರಲ್ಹಾದ ಜೋಶಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'ಬೆಂಗಳೂರಿನ ವಿಭಜನೆ ತಡೆಯೋಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಪ್ರಭು ಕೆಂಪೇಗೌಡರು ಸಹಿಷ್ಣುತೆ, ಸಮ ಭಾವನೆಯ ದೃಷ್ಟಿಯಿಂದ ಬೆಂಗಳೂರನ್ನು ನಿರ್ಮಾಣ ಮಾಡಿದ್ದು, ಅದನ್ನು ವಿಭಾಗ ಮಾಡಿ ಹರಿದು ಹಂಚಿ ಹೋಗದಂತೆ ರಕ್ಷಿಸುವ ಸಂಕಲ್ಪವನ್ನು ನಾವೆಲ್ಲ ಮಾಡಬೇಕು' ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕರೆ ನೀಡಿದರು.

ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ ಶುಕ್ರವಾರ ಆಯೋಜಿಸಿದ್ದ 'ನಾಡಪ್ರಭು ಕೆಂಪೇಗೌಡರ 516ನೇ ಜನ್ಮದಿನೋತ್ಸವ' ಮತ್ತು ಅಂತರರಾಷ್ಟ್ರೀಯ ಕೆಂಪೇಗೌಡ ಪ್ರಶಸ್ತಿ ಹಾಗೂ ರಾಜ್ಯ ಕೆಂಪೇಗೌಡ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಮತ್ತು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು, 'ಬೆಂಗಳೂರು ನಗರವನ್ನು ನಾಲ್ಕೈದು ಭಾಗ ಮಾಡುತ್ತಿದ್ದಾರೆ. ಅದಕ್ಕೆ ಅವಕಾಶ ಕೊಡಬಾರದು' ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ. ವೈವಿಜಯೇಂದ್ರ, 'ಬೆಂಗಳೂರು ನಗರವನ್ನು ಒಡೆಯುವ ಕೆಲಸವನ್ನು ಎಲ್ಲರೂ ಒಟ್ಟಾಗಿ ಹೋರಾಟ ಮಾಡಿ ತಡೆಯಬೇಕು' ಎಂದು ತಿಳಿಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸ್ಫಟಿಕಪುರಿ ಮಹಾಸಂಸ್ಥಾನದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿದರು.

ಪ್ರಶಸ್ತಿ ಪ್ರದಾನ: ಮೂವರಿಗೆ 2025ನೇ ಸಾಲಿನ 'ಅಂತರರಾಷ್ಟ್ರೀಯ ಕೆಂಪೇಗೌಡ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಶಸ್ತಿ ತಲಾ ₹2 ಲಕ್ಷ ನಗದು, ಬೆಳ್ಳಿ ಪದಕ ಒಳಗೊಂಡಿದೆ. ವಿವಿಧ ಕ್ಷೇತ್ರಗಳ 25 ಸಾಧಕರಿಗೆ ಜಿಲ್ಲಾ ಮಟ್ಟದವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ₹ 25 ಸಾವಿರ ನಗದು ಮತ್ತು ಬೆಳ್ಳಿ ಪದಕವನ್ನು ಒಳಗೊಂಡಿದೆ.

ಧಾತು ಬೊಂಬೆಯಾಟ ಉತ್ಸವ ಇಂದು

ಬೆಂಗಳೂರು: ನಗರದ ಧಾತು ಸಂಸ್ಥೆಯು ಇದೇ 28ರಂದು ಬೆಳಿಗ್ಗೆ 10ರಿಂದ ಕನಕಪುರ ರಸ್ತೆಯ ತಲಘಟ್ಟಪುರದಲ್ಲಿರುವ ಮಂಡಲ ಕಲ್ಚರಲ್ ಸೆಂಟರ್‌ನಲ್ಲಿ 'ಧಾತು ಬೊಂಬೆ ಸಂತೆ' ಶೀರ್ಷಿಕೆಯಡಿ ಬೊಂಬೆಯಾಟ ಉತ್ಸವ ಹಮ್ಮಿಕೊಂಡಿದೆ.

ಇಡೀ ದಿನ ನಡೆಯುವ ಈ ಉತ್ಸವವು ಬೊಂಬೆಯಾಟ, ಬೊಂಬೆ ತಯಾರಿಕೆ ಕಾರ್ಯಾಗಾರ, ಮಕ್ಕಳಿಗಾಗಿ ಬೊಂಬೆಗಳನ್ನು ಬಳಸಿ ಕಥೆ ಹೇಳುವುದು, ಬೊಂಬೆ ಮಾರಾಟ, ಕಲಾವಿದರ ಜತೆಗೆ ಸಂವಹನ ವಸ್ತು ಸಂಗ್ರಹಾಲಯ ಪ್ರವಾಸವನ್ನು ಒಳಗೊಂಡಿದೆ ಎಂದು ಸಂಸ್ಥೆಯ ಸಂಸ್ಥಾಪಕಿ ಅನುಪಮಾ ಹೊಸಕೆರೆ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಬೆಳಿಗ್ಗೆ 10.30 ಮತ್ತು ಮಧ್ಯಾಹ್ನ 3.30ಕ್ಕೆ ಬೊಂಬೆಯಾಟ ಪ್ರದರ್ಶನಗಳು ನಡೆಯಲಿವೆ. ಈ ಕಾರ್ಯಕ್ರಮಕ್ಕೆ ಪ್ರವೇಶ ಉಚಿತ ಎಂದರು. ಸಂಸ್ಥೆಯು ಇದೇ 29ರಿಂದ ತಿಂಗಳ ಪ್ರತಿ ನಾಲ್ಕನೇ ಭಾನುವಾರ, 2ರಿಂದ 5 ವರ್ಷದ ಮಕ್ಕಳಿಗಾಗಿ 'ಪಂಚತಂತ್ರ' ಸರಣಿಯಡಿ ಬೊಂಬೆ ಕಥೆ ಹೇಳುವ ಕಾರ್ಯಾಗಾರವನ್ನು ಪ್ರಾರಂಭಿಸಲಿದೆ. ಬೊಂಬೆಯಾಟವನ್ನು ಕಲಿಯಲು ಆಸಕ್ತಿ ಹೊಂದಿರುವವರಿಗೆ ಪ್ರತಿ ಭಾನುವಾರ ಬೆಳಿಗ್ಗೆ 9.30ಕ್ಕೆ ತರಗತಿ ನಡೆಸಲಾಗುತ್ತದೆ. ಸಂಸ್ಥೆಯು ವರ್ಷವಿಡೀ ಶಾಲಾ ಮಕ್ಕಳಿಗೆ ಬೊಂಬೆ ವಸ್ತು ಸಂಗ್ರಹಾಲಯದ ಪ್ರವಾಸಗಳನ್ನು ಸಹ ನಡೆಸುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವರಕ್ಕೆ: 9886193999 ಸಂಪರ್ಕಿಸಿ.



ಬಿಬಿಎಂಪಿ ನೀಡುವ ನಾಡಪ್ರಭು ಕೆಂಪೇಗೌಡ ಪ್ರಶಸ್ತಿಯನ್ನು ರಾಜೇಶ್ ರೈ ಚಟ್ಲ, ದೀಪಕ್ ತಿಮ್ಮಯ್ಯ, ದಯಾನಂದ ಎಸ್ ಪಿ ಮತ್ತು ಸಂಗೀತ ಕಟ್ಟಿ ಅವರಿಗೆ ನೀಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

'ಕೆಂಪೇಗೌಡರು ಹುಟ್ಟಿದ್ದು ಒಕ್ಕಲಿಗರಾಗಿ, ಬದುಕಿದ್ದು ವಿಶ್ವಮಾನವರಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುಟ್ಟಿದಾಗ ಭೂಮಿ ಮೇಲಿರುತ್ತೇವೆ. ಸತ್ತಾಗ ಭೂಮಿ ಕೆಳಗಿರುತ್ತೇವೆ. ಆದರೆ ನಮ್ಮ ಸಾಧನೆಗಳು ಮೇಲಿರುತ್ತವೆ. ಅದೇ ರೀತಿ ಕೆಂಪೇಗೌಡರ ಸಾಧನೆಗಳು ಶಾಶ್ವತ. ಕೆಂಪೇಗೌಡರು ಹುಟ್ಟಿದ್ದು ಒಕ್ಕಲಿಗರಾಗಿ, ಬದುಕು ನಡೆಸಿದ್ದು, ಸಮಾಜಕ್ಕೆ ಸಂದೇಶ ನೀಡಿದ್ದು ವಿಶ್ವಮಾನವರಾಗಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯ ಅಂಗವಾಗಿ 'ಕೆಂಪೇಗೌಡ ಭವನ'ದ ಭೂಮಿಪೂಜೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿಶ್ವದೆಲ್ಲೆಡೆ ಬೆಂಗಳೂರಿನ ಕೀರ್ತಿ ಹರಡಿದೆ. ಈ ನಗರದ ಅಭಿವೃದ್ಧಿಗೆ ಕೆಂಪೇಗೌಡರೇ ಸ್ಫೂರ್ತಿ. 500 ವರ್ಷಗಳ ಹಿಂದೆಯೇ ಎಲ್ಲ ಜಾತಿ, ಧರ್ಮಗಳಿಗೆ ಅವಕಾಶ ನೀಡಿ ಸಮಾಜಕ್ಕೆ ಸಂದೇಶ ನೀಡಿದವರು' ಎಂದು ತಿಳಿಸಿದರು.

'ನಾವು ಯಾರೂ ಇಂತಹದ್ದೇ ಜಾತಿಯಲ್ಲಿ ಹುಟ್ಟಬೇಕು ಎಂದು ಅರ್ಜಿ ಹಾಕಿಕೊಂಡಿರುವುದಿಲ್ಲ. ರಾಜಕೀಯದಲ್ಲಿ ಧರ್ಮ ಇರಬೇಕೆ ಹೊರತು, ಧರ್ಮದಲ್ಲಿ ರಾಜಕೀಯ ಇರಬಾರದು ಎನ್ನುವ ಮಾತನ್ನು ಮರೆಯಬಾರದು. ಕೆಂಪೇಗೌಡರು ಎಲ್ಲಾ ಸಮುದಾಯಕ್ಕೆ ಸೇರಿದವರು. ಇವರು ನಾಡಿನ ಆಸ್ತಿ, ಎಲ್ಲ ಸಮಾಜದ ಆಸ್ತಿ' ಎಂದು ಹೇಳಿದರು.

'ಕೆಂಪೇಗೌಡರ ಭವನ ನಿರ್ಮಾಣಕ್ಕೆ ಐದು ಎಕರೆ ಜಮೀನು ನೀಡಲು ಒಂದೇ ವಾರದಲ್ಲಿ ಸಚಿವ ಸಂಪುಟದ ಮುಂದೆ ತಂದು ಒಪ್ಪಿಗೆ ಪಡೆಯಲಾಯಿತು. ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಜಾಗವನ್ನು ಸಚಿವರಾದ ಮಹದೇವಪ್ಪ ಅವರಿಂದ ಒಪ್ಪಿಗೆ ಪಡೆದು ಈಗ ಕಟ್ಟಡ ನಿರ್ಮಾಣಕ್ಕೆ ಬಳಕೆ ಮಾಡಲಾಗುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ₹100 ಕೋಟಿ ವೆಚ್ಚದಲ್ಲಿ ಸಂಶೋಧನಾ ಕೇಂದ್ರ ಕೂಡ ನಿರ್ಮಾಣ ಮಾಡಲಾಗುತ್ತಿದೆ. ಕೆಂಪೇಗೌಡರ ಹೆಸರಿನಲ್ಲಿ ಭವ್ಯ ಕಟ್ಟಡ ನಿರ್ಮಾಣಕ್ಕೆ ₹100 ಕೋಟಿ ಮೀಸಲಿಟ್ಟಿದ್ದೇವೆ' ಎಂದರು.

'ಸ್ಟೇಡಿಯಂಗಾಗಿ 50 ಎಕರೆ ಜಾಗ'

'ನಗರದಲ್ಲಿ 60 ಸಾವಿರ ಪ್ರೇಕ್ಷಕರು ಕುಳಿತುಕೊಳ್ಳುವಷ್ಟು ಸಾಮರ್ಥ್ಯದ ಸ್ಟೇಡಿಯಂ ನಿರ್ಮಾಣ ಮಾಡಲಾಗುವುದು. ಇದಕ್ಕಾಗಿ 50 ಎಕರೆ ಜಾಗ ಗುರುತಿಸಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಹಾಗೂ ಯೋಜನಾ ಪ್ರಾಧಿಕಾರ ಸೇರಿ ಕೆಂಪೇಗೌಡ ಪ್ರತಿಮೆ ಜಾಗ ಅಭಿವೃದ್ಧಿಪಡಿಸಬೇಕು. ಪ್ರತಿ ವರ್ಷ ಇಲ್ಲಿ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಮಾಡಬೇಕು' ಎಂದು ಹೇಳಿದರು.

'ಕೆಂಪೇಗೌಡ ಥೀಮ್ ಪಾರ್ಕ್ ಯೋಜನೆ ಜವಾಬ್ದಾರಿಯನ್ನು ಸಚಿವ ಕೃಷ್ಣ ಬೈರೇಗೌಡ ವಹಿಸಿಕೊಂಡಿದ್ದಾರೆ. ಈ ಯೋಜನೆಗೆ ಅನುದಾನ ಸಿಕ್ಕಿರಲಿಲ್ಲ. ಈಗ ಅದನ್ನು ಸರಿಪಡಿಸಲಾಗಿದ್ದು, ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ಅಂತಿಮ ರೂಪ ನೀಡಲಾಗುವುದು' ಎಂದು ಹೇಳಿದರು.

'ಮೂರು 'ಕೆ'ಗಳನ್ನು ಮರೆಯಬಾರದು'

'ನಾವು ಮೂರು 'ಕೆ'ರಗಳನ್ನು ಮರೆಯಬಾರದು. ಬೆಂಗಳೂರು ಕಟ್ಟಿದ ಕೆಂಪೇಗೌಡರು, ವಿಧಾನಸೌಧ ಕಟ್ಟಿದ ಕೆಂಗಲ್ ಹನುಮಂತಯ್ಯ ಹಾಗೂ ವಿಕಾಸಸೌಧ ಕಟ್ಟಿದ ಎಸ್.ಎಂ.ಕೃಷ್ಣ ಅವರು ನಗರದ ಅಭಿವೃದ್ಧಿಯನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದವರು. ಇವರನ್ನು ನಾವು ಯಾವಾಗಲೂ ಅವರನ್ನು ಸ್ಮರಿಸಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಬೆಂಗಳೂರಿನ ಅಭಿವೃದ್ಧಿಗೆ ಬೇಕಾದಷ್ಟು ಶ್ರಮ ಪಡುತ್ತಿದ್ದೇವೆ. ಸಿಕ್ಕಿರುವ ಅವಕಾಶದಲ್ಲಿ ಸಾಕ್ಷಿಗುಡ್ಡೆ ನಿರ್ಮಾಣ ಮಾಡಲಾಗುವುದು. ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಸುಮಾರು ₹1 ಲಕ್ಷ ಕೋಟಿ ಮೊತ್ತದ ಯೋಜನೆಗಳಿಗೆ ನಾವು ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದು ತಿಳಿಸಿದರು.

ಕೆಂಪೇಗೌಡರ ಸ್ಮರಣೆ, ಅದ್ಧೂರಿ ಮೆರವಣಿಗೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ನಗರದ ವಿವಿಧೆಡೆ ಶುಕ್ರವಾರ ಸಂಭ್ರಮದಿಂದ ಆಚರಿಸಿ, ಬೆಂಗಳೂರಿಗೆ ಅವರು ನೀಡಿದ ಕೊಡುಗೆ ಹಾಗೂ ಅವರ ದೂರದೃಷ್ಟಿ ಚಿಂತನೆಗಳನ್ನು ಸ್ಮರಿಸಲಾಯಿತು.

ನಗರದ ವಿವಿಧೆಡೆ ಕೆಂಪೇಗೌಡ ಅವರ ಪ್ರತಿಮೆಗೆ ಮಾಲಾರ್ಪಣೆ, ಪುಷ್ಪನಮನ ಸಲ್ಲಿಸಲಾಯಿತು. ವಿಜಯಸೇನೆ ವತಿಯಿಂದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಜಯಂತಿ ಆಚರಿಸಲಾಯಿತು. ಮಂಟಪ ನಿರ್ಮಿಸಿ ಕೆಂಪೇಗೌಡರ ಪ್ರತಿಮೆ ಇರಿಸಲಾಗಿತ್ತು.

ಕೆ.ಆರ್.ರಸ್ತೆಯಲ್ಲಿರುವ ರಾಜ್ಯ ಒಕ್ಕಲಿಗರ ಸಂಘದ ಆವರಣದಲ್ಲಿ ಜಾನಪದ ಕಲಾ ತಂಡಗಳ ನೃತ್ಯ ವೈಭವದೊಂದಿಗೆ ಆಚರಿಸಲಾಯಿತು. ಸಂಘದ ಆವರಣದಲ್ಲಿದ್ದ ಕೆಂಪೇಗೌಡರ ಪುತ್ಥಳಿಗೆ ಕ್ರೇನ್ ಮೂಲಕ ಹಾರ ಹಾಕಿ ನಮಿಸಲಾಯಿತು. ಬಳಿಕ ನಡೆದ ಮೆರವಣಿಗೆಯಲ್ಲಿ ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ ವಿದ್ಯಾರ್ಥಿಗಳು ಹೆಜ್ಜೆ ಹಾಕಿದರು.

ಕೆಂಪೇಗೌಡರ ಹೆಸರಿಡಿ: 'ಬೆಂಗಳೂರಿನ ಒಂದು ವಿಶ್ವವಿದ್ಯಾಲಯಕ್ಕೆ ಕೆಂಪೇಗೌಡರ ಹೆಸರು ಇಡಬೇಕು. ನ್ಯಾಷನಲ್ ಕಾಲೇಜು ಮೆಟ್ರೊ ನಿಲ್ದಾಣಕ್ಕೆ ಕೆಂಪೇಗೌಡ ವೈದ್ಯಕೀಯ ಕಾಲೇಜು ನಿಲ್ದಾಣ ಎಂಬುದಾಗಿ ನಾಮಕರಣ ಮಾಡಬೇಕು' ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬಿ.ಕೆಂಚಪ್ಪಗೌಡ ಅವರು ಒತ್ತಾಯಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಅಧ್ಯಕ್ಷ ಮಹೇಶ ಜೋಶಿ ಅವರು, 'ಕೆಂಪೇಗೌಡರು ಅತ್ಯಂತ ಮಾದರಿಯಾಗಿ ನಗರವನ್ನು ನಿರ್ಮಿಸಿದ್ದಾರೆ' ಎಂದು ಸ್ಮರಿಸಿದರು..

ಚಿಲುಮೆ ಪ್ರತಿಷ್ಠಾನ: ಚಿಲುಮೆ ರವಿಕುಮಾರ್ ಪ್ರತಿಷ್ಠಾನದ ವತಿಯಿಂದ ಹಮ್ಮಿಕೊಂಡಿದ್ದ ಮೂರು ದಿನಗಳ ಕಾರ್ಯಕ್ರಮ ಸಂಪನ್ನಗೊಂಡಿತು. ಅವೆನ್ಯೂ ರಸ್ತೆಯ ದೊಡ್ಡಪೇಟೆ ವೃತ್ತದಲ್ಲಿ ಕೆಂಪೇಗೌಡರ ವೇಷಧಾರಿ ಗಮನ ಸೆಳೆದರು. ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣುಹಂಪಲು, ಬ್ರೆಡ್ ವಿತರಿಸಲಾಯಿತು.

ಚಿತ್ರಾವಳಿ



ಸಚಿವ ಜಮೀರ್ ಅಹಮದ್ ಖಾನ್ ಅವರು ಕೆಂಪಾಂಬುಧಿ ಕೆರೆ ಗೋಪುರದಿಂದ 'ಪುರಜ್ಯೋತಿ' ಮೆರವಣಿಗೆಗೆ ಚಾಲನೆ ನೀಡಿದರು. ಶಾಸಕ ರವಿ ಸುಬ್ರಮಣ್ಯ, ಮಾಜಿ ಶಾಸಕ ಯು.ಬಿ. ವೆಂಕಟೇಶ್, ಮುಖಂಡ ತಿಮ್ಮೇಗೌಡ ಉಪಸ್ಥಿತರಿದ್ದರು



ಸಿ.ವಿ. ರಾಮನ್‌ನಗರದ ನ್ಯೂ ತಿಪ್ಪಸಂದ್ರದ ಶ್ರೀ ಕೆಂಪೇಗೌಡ ವೃತ್ತದಲ್ಲಿ ಕೆಂಪೇಗೌಡರ ಪ್ರತಿಮೆ ಹಾಗೂ ಭಾವಚಿತ್ರಕ್ಕೆ ಶಾಸಕ ಎಸ್. ರಘು ಪುಷ್ಪಾರ್ಚನೆ ಮಾಡಿದರು

ಬೆದರಿಸಿ ₹2 ಕೋಟಿ ನಗದು ದರೋಡೆ

ಹಣ ಎಣಿಸುವಾಗ ಮಳಿಗೆಗೆ ನುಗ್ಗಿದ 6–7 ಜನರಿಂದ ಕೃತ್ಯ ● ಉದ್ಯಮಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಉದ್ಯಮಿಯೊಬ್ಬರಿಗೆ ಚಾಕುವಿನಿಂದ ಹೆದರಿಸಿ ₹2 ಕೋಟಿ ನಗದು ದರೋಡೆ ಮಾಡಿಕೊಂಡು ಪರಾರಿಯಾಗಿರುವ ಘಟನೆ ವಿದ್ಯಾರಣ್ಯಪುರಂ ಪೊಲೀಸ್ ಠಾಣಾ ವ್ಯಾಪ್ತಿಯ ಎಂ.ಎಸ್. ಪಾಳ್ಯದಲ್ಲಿ ನಡೆದಿದೆ ಉದ್ಯಮಿ ಶ್ರೀಹರ್ಷ ವಿ. ಅವರು ನೀಡಿರುವ ದೂರಿನ ಅನ್ವಯ ವಿದ್ಯಾರಣ್ಯಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಕೆಂಗೇರಿಯ ಶ್ರೀಹರ್ಷ ತಮ್ಮ ಉದ್ಯಮಕ್ಕೆ ಅಗತ್ಯವಿರುವ ಯಂತ್ರವೊಂದನ್ನು ಜರ್ಮನಿಯಿಂದ ಆಮದು ಮಾಡಿಕೊಳ್ಳಬೇಕಿದ್ದ ಕಾರಣ ₹ 2 ಕೋಟಿ ನಗದನ್ನು ಯುಎಸ್‌ಡಿಟಿಗೆ ಬದಲಾವಣೆ ಮಾಡಿಸಿಕೊಳ್ಳಬೇಕಿತ್ತು. ಈ ಸಂದರ್ಭದಲ್ಲಿ ಸ್ನೇಹಿತರೊಬ್ಬರ ಮೂಲಕ ಶ್ರೀಹರ್ಷ ಅವರಿಗೆ ಬೆಂಜಮಿನ್ ಹರ್ಷ ಅವರ ಪರಿಚಯವಾಗಿತ್ತು. ಹಣ ಬದಲಾವಣೆ ಸಲುವಾಗಿ ಜೂನ್ 25ರಂದು ಎಂ.ಎಸ್.ಪಾಳ್ಯದ ಎ.ಕೆ. ಎಂಟರ್‌ಪ್ರೈಸಸ್‌ನಲ್ಲಿ ಬೆಂಜಮಿನ್ ಹರ್ಷ ಹಾಗೂ ಶ್ರೀಹರ್ಷ ಭೇಟಿಯಾಗಿದ್ದರು ಎಂದು ದೂರಿನಲ್ಲಿ ವಿವರಿಸಲಾಗಿದೆ.

ಶ್ರೀಹರ್ಷ, ಬೆಂಜಮಿನ್ ಮತ್ತು ಆತನ ಇಬ್ಬರು ಸ್ನೇಹಿತರು ₹2 ಕೋಟಿ ಹಣ ಎಣಿಸುವಾಗ ಏಕಾಏಕಿ ಅಂಗಡಿಗೆ ನುಗ್ಗಿದ್ದ 6-7 ಜನರು ಚಾಕುವಿನಿಂದ ಶ್ರೀಹರ್ಷ ಅವರ ಮೇಲೆ ಹಲ್ಲೆ ಮಾಡಿದ್ದಾರೆ. ಬಳಿಕ ಕುತ್ತಿಗೆ ಬಳಿ ಚಾಕು ಇಟ್ಟು ಬೆಂಜಮಿನ್ ಹರ್ಷ, ಶ್ರೀಹರ್ಷ ಮತ್ತು ಅವರ ಸ್ನೇಹಿತರನ್ನು ಕೊಠಡಿಯಲ್ಲಿ ಕೂಡಿ ಹಾಕಿ, ಹಣವನ್ನು ಚೀಲಕ್ಕೆ ತುಂಬಿಕೊಂಡು ಪರಾರಿಯಾಗಿದ್ದಾರೆ. ಕೊನೆಗೆ ಕಷ್ಟಪಟ್ಟು ಕೊಠಡಿ ಬಾಗಿಲು ಹಾಗೂ ಶೆಟರ್ ತೆರೆದಾಗ ಬೆಂಜಮಿನ್ ಮತ್ತು ಅವರ ಸ್ನೇಹಿತರು ಸ್ಥಳದಿಂದ ಕಾಲ್ಕಿತ್ತಿದ್ದಾರೆ ಎಂದು ಶ್ರೀಹರ್ಷ ದೂರಿದ್ದಾರೆ.

ಬೆಂಜಮಿನ್ ಹರ್ಷ ಮತ್ತು ಆತನ ಸ್ನೇಹಿತರನ್ನು ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ಮುಂದುವರಿಸಲಾಗಿದೆ. ₹ 2 ಕೋಟಿ ನಗದು ಇಟ್ಟುಕೊಂಡಿದ್ದ ಬಗ್ಗೆ ದಾಖಲೆ ನೀಡುವಂತೆ ಸೂಚಿಸಲಾಗಿದೆ. ಬೆಂಜಮಿನ್ ಸೇರಿದಂತೆ ಇತರರು ಸಂಚು ರೂಪಿಸಿ ಹರ್ಷ ಬಳಿ ಇರುವ ನಗದು ಹಾಗೂ ನಾಲ್ಕು ಮೊಬೈಲ್ ಕಸಿದು ಪರಾರಿ ಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಪೊಲೀಸರು ತಿಳಿಸಿದರು.

₹2 ಕೋಟಿ ನಗದು ಹವಾಲ ವಹಿವಾಟಿನ ಕುರಿತು ಅನುಮಾನವಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ. ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ. ಆರೋಪಿಗಳ ಬಂಧನ ಬಳಿಕ ಕೃತ್ಯದ ಬಗ್ಗೆ ಸ್ಪಷ್ಟತೆ ಸಿಗಲಿದೆ ಎಂದು ಹೇಳಿದರು.

ಗಾಂಜಾ ಪತ್ತೆ: ಬಂಧನ

ಬೆಂಗಳೂರು: ರೈಲ್ವೆ ರಕ್ಷಣಾ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಭುವನೇಶ್ವರ–ಬೆಂಗಳೂರು ನಡುವೆ ಸಂಚರಿಸುವ ಪ್ರಶಾಂತಿ ಎಕ್ಸ್‌ಪ್ರೆಸ್‌ನಲ್ಲಿ ಸಾಗಿಸುತ್ತಿದ್ದ ₹1.27 ಲಕ್ಷ ಮೌಲ್ಯದ ಗಾಂಜಾವನ್ನು ಪತ್ತೆ ಮಾಡಿ, ಆರೋಪಿಯನ್ನು ಬಂಧಿಸಿದ್ದಾರೆ.

ಒಡಿಶಾದ ಸುಂದರಪುರ ನಿವಾಸಿ, ಸುದರ್ಶನ್ ಜೇನಾ (35) ಬಂಧಿತ ಆರೋಪಿ.

ಎಕ್ಸ್‌ಪ್ರೆಸ್ ರೈಲಿನಿಂದ ಇಳಿದ ಆರೋಪಿ ನಗರದಲ್ಲಿ ಕೈಯಲ್ಲಿ ಬ್ಯಾಗ್ ಹಿಡಿದು ಶಂಕಾಸ್ಪದವಾಗಿ ಓಡಾಡುತ್ತಿದ್ದ. ವಶಕ್ಕೆ ಪಡೆದು ಬ್ಯಾಗ್ ಪರಿಶೀಲಿಸಿದಾಗ ಹಳದಿ ಟೇಪ್‌ನಲ್ಲಿ ಬಂಡಲ್ ಮಾಡಿದ್ದ 3.174 ಕೆ.ಜಿ. ಗಾಂಜಾ ಪತ್ತೆಯಾಯಿತು ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ಕಾಲ್ತುಳಿತ: ಪ್ರತ್ಯಕ್ಷದರ್ಶಿಗಳ ಹೇಳಿಕೆ ದಾಖಲು

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತ ಪ್ರಕರಣದ ವಿಚಾರಣಾಧಿಕಾರಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರು ಶುಕ್ರವಾರ ಪ್ರತ್ಯಕ್ಷದರ್ಶಿಗಳು ಹಾಗೂ ಸಾರ್ವಜನಿಕರ ಹೇಳಿಕೆಯನ್ನು ದಾಖಲಿಸಿಕೊಂಡರು.

ಕಾಲ್ತುಳಿತ ಘಟನೆ ನೋಡಿದ್ದ ಕೆಲವರು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ವಿಶೇಷ ನ್ಯಾಯಾಲಯಕ್ಕೆ ಬಂದು, ಲಿಖಿತ ಹೇಳಿಕೆ ನೀಡಿದರು. ಕ್ರೀಡಾಂಗಣ ಸೇರಿದಂತೆ ವಿವಿಧ ಕಡೆ ಬಂದೋಬಸ್ತ್ ಕೈಗೊಂಡಿದ್ದ ಕಬ್ಬನ್ ಪಾರ್ಕ್ ಟ್ರಾಫಿಕ್ ಇನ್‌ಸ್ಪೆಕ್ಟರ್ ಬಿ.ರವಿ ಅವರು ಹೇಳಿಕೆ ದಾಖಲಿಸಿದರು.

ಆರ್‌ಸಿಬಿ ವಿಜಯೋತ್ಸವ ವೇಳೆ ಎಷ್ಟು ಸಿಬ್ಬಂದಿ ನಿಯೋಜಿಸಲಾಗಿತ್ತು? ಯಾವ ವೃತ್ತ, ರಸ್ತೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಲಿದ್ದಾರೆ ಎಂಬ ಬಗ್ಗೆ ಗುರುತಿಸಲಾಗಿತ್ತು? ಎಂದು ಪ್ರಶ್ನಿಸಲಾಯಿತು.

ಜಿಲ್ಲಾಧಿಕಾರಿ ಜಿ.ಜಗದೀಶ್ ಶುಕ್ರವಾರ ಮತ್ತೆ ಡಿಎನ್‌ಎ ಎಂಟರ್‌ಟೈನ್ಮೆಂಟ್ ಸಂಸ್ಥೆಯ ಭದ್ರತಾ ವಿಭಾಗದ ವ್ಯವಸ್ಥಾಪಕ ಸತೀಶ್ ಅವರನ್ನು ಒಂದು ತಾಸಿಗೂ ಹೆಚ್ಚು ವಿಚಾರಣೆ ನಡೆಸಿದರು.

‘ಕ್ರೀಡಾಂಗಣದ ಬಳಿ 585 ಡಿಎನ್‌ಎ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿತ್ತು. ಪೊಲೀಸರು, ಬಂದೋಬಸ್ತ್ ನಡೆಸಿದ್ದ ಕ್ರೀಡಾಂಗಣದ ಹೊರಗಿನ ಗೇಟ್‌ಗಳಲ್ಲಿ ಘಟನೆ ನಡೆದಿದೆ’ ಎಂದು ಸತೀಶ್ ಹೇಳಿಕೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ‘ಡಿಎನ್‌ಎ ಕಂಪನಿಯ ಮುಖ್ಯಸ್ಥರು ಹಾಗೂ ಸಿಬ್ಬಂದಿ ವಿಚಾರಣೆ ಬಹುತೇಕ ಮುಗಿದಿದೆ. ಈವರೆಗೆ ತನಿಖಾಧಿಕಾರಿಗಳು ನೀಡಿರುವ ಎಲ್ಲ ನೋಟಿಸ್‌ಗೆ ಹಾಜರಾಗಿ ಹೇಳಿಕೆ ದಾಖಲಿಸಲಾಗಿದೆ’ ಎಂದು ಡಿಎನ್‌ಎ ಪರ ವಕೀಲರಾದ ನಿಮಿಷಾ ಹೇಳಿದ್ದಾರೆ.

ಐದು ಬೀದಿನಾಯಿಗಳ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರಂನ ಭಟ್ಟರಹಳ್ಳಿಯಲ್ಲಿ ಐದು ಬೀದಿನಾಯಿಗಳು ರಕ್ತ ವಾಂತಿ ಮಾಡಿಕೊಂಡು ಮೃತಪಟ್ಟಿದ್ದು, ಕಿಡಿಗೇಡಿಗಳು ವಿಷ ಹಾಕಿರುವ ಬಗ್ಗೆ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಆರು ನಾಯಿಗಳ ಪೈಕಿ ಐದು ಸಾವಿಗೀಡಾಗಿವೆ. ನಾಯಿಗಳು ಒದ್ದಾಡಿ ಪ್ರಾಣಬಿಡುವ ದೃಶ್ಯ ಸಿಸಿಟಿವಿ ಗುರುವಾರ ರಾತ್ರಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಈ ಸಂಬಂಧ ಬಿಬಿಎಂಪಿ ಅಧಿಕಾರಿಗಳು ಕೆ.ಆರ್.ಪುರಂ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಮೃತ ನಾಯಿಗಳ ರಕ್ತದ ಮಾದರಿ ರವಾನೆ ಮಾಡಲಾಗಿದೆ. ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳ ಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಅಪಘಾತ: ಮಹಿಳೆ ಸಾವು

ಬೆಂಗಳೂರು: ದ್ವಿಚಕ್ರ ವಾಹನಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಏರೋಸ್ಪೇಸ್ ಕಂಪನಿಯೊಂದರಲ್ಲಿ ಗುಣಮಟ್ಟದ ವಿಶ್ಲೇಷಣಾ ತಜ್ಞೆ ಆಗಿದ್ದ ನಂದಿನಿ (24) ಮೃತಪಟ್ಟಿದ್ದಾರೆ.

ರೇವಾ ವಿಶ್ವವಿದ್ಯಾಲಯದ ಬಳಿಯ ಪಿ.ಜಿಯಲ್ಲಿ ವಾಸವಿದ್ದರು. ಗುರುವಾರ ಕೆಲಸ ಮುಗಿಸಿ ಮನೆಗೆ ತೆರಳುವಾಗ ಬೂದಿಗೇರೆ ಕ್ರಾಸ್ ಬಳಿ ಸಂಜೆ ಅಪಘಾತ ಸಂಭವಿಸಿದೆ. ಯಲಹಂಕ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿ, ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು. ಚಿಕ್ಕಜಾಲ ಸಂಚಾರಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಗರದಲ್ಲಿ ಇಂದು

ಹಿಮವತ್ ಕೇದಾರ ಜಗದ್ಗುರುಗಳ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ ಮತ್ತು ಜನಜಾಗೃತಿ ಧರ್ಮ ಸಮಾರಂಭ: ಬೆಳಿಗ್ಗೆ 8ಕ್ಕೆ ಇಷ್ಟಲಿಂಗ ಮಹಾಪೂಜೆ, ಸಂಜೆ 6ಕ್ಕೆ ಜನಜಾಗೃತಿ ಧರ್ಮ ಸಮಾರಂಭ: ಸಾನ್ನಿಧ್ಯ: ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ, ನೇತೃತ್ವ: ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ನಾಂದಿ ನುಡಿ: ಇಮ್ಮಡಿ ಬಸವರಾಜೇಂದ್ರ ಸ್ವಾಮೀಜಿ, ನುಡಿ ನಮನ: ಜಗದೀಶ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ವಿ. ಸೋಮಣ್ಣ, ಮುಖ್ಯ ಅತಿಥಿಗಳು: ಸಿ.ಕೆ.ರಾಮಮೂರ್ತಿ, ದೊಡ್ಡಣ್ಣ, ಶಂಕರ ಬಿದರಿ, ಗಂಗಾಂಬಿಕೆ ಮಲ್ಲಿಕಾರ್ಜುನ, ಪಾಲನೇತ್ರ, ವೀಣಾ ಕಾಶಪ್ಪನವರ್, ಪದವಿ ಪ್ರದಾನ: ಎಸ್. ಪಿ.ದಯಾನಂದ್, ಆಯೋಜನೆ: ಹಿಮವತ್ ಕೇದಾರ ಪೂಜಾ ಸಮಿತಿ, ಸ್ಥಳ: ನಿಜಗುಣ ಕಲ್ಯಾಣ ಮಂಟಪ, ದೊಡ್ಡಗಣೇಶ ದೇವಸ್ಥಾನದ ಎದುರು, ಬಸವನಗುಡಿ

ಮಹಾವಿದ್ವಾನ್ ಎ.ವಿ.ಆನಂದ್ ಸಂಭ್ರಮಾಚರಣೆ: ಅತಿಥಿಗಳು: ಎಂ.ಎಸ್. ಶೀಲಾ, ಮೈಸೂರು ನಾಗರಾಜ್, ಆನೂರು ಅನಂತಕೃಷ್ಣ ಶರ್ಮ, ಮೈಸೂರು ಮಂಜುನಾಥ್, ಗೌರವ ಅತಿಥಿಗಳು: ತೇಜಸ್ವಿ ಸೂರ್ಯ, ರವಿ ಸುಬ್ರಹ್ಮಣ್ಯ, ಆಯೋಜನೆ: ಲಯಾನಂದ, ಸ್ಥಳ: ಪತ್ತಿ ಸಭಾಂಗಣ, ಎನ್.ಆರ್. ಕಾಲೊನಿ, ಬೆಳಿಗ್ಗೆ 9.30

ಅಣಕು ನ್ಯಾಯಾಲಯ ಕೊಠಡಿ ಉದ್ಘಾಟನೆ: ವಿವೇಕ್ ಕೆ. ಚಾಂಡಿ, ಆಯೋಜನೆ ಹಾಗೂ ಸ್ಥಳ: ವಿನ್‌ಮೋರ್ ಅಕಾಡೆಮಿ, ಜಕ್ಕೂರು, ಬೆಳಿಗ್ಗೆ 10 ಪದವಿ ಪ್ರದಾನ ಸಮಾರಂಭ: ಅತಿಥಿಗಳು: ಪ್ರಶಾಂತ್ ಪ್ರಕಾಶ್, ಕೆ.ಸಿ.ರಾಮಮೂರ್ತಿ, ಸಬಿತಾ ರಾಮಮೂರ್ತಿ, ಆಯೋಜನೆ ಹಾಗೂ ಸ್ಥಳ: ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಐಟಿ ಪಾರ್ಕ್ ರಸ್ತೆ, ಬೆಳಿಗ್ಗೆ 10

ಧಾತು ಬೊಂಬೆಯಾಟ ಉತ್ಸವ: ಬೊಂಬೆಯಾಟ, ಬೊಂಬೆ ತಯಾರಿಕೆ ಕಾರ್ಯಾಗಾರ, ಮಕ್ಕಳಿಗಾಗಿ ಬೊಂಬೆಗಳನ್ನು ಬಳಸಿ ಕಥೆ ಹೇಳುವುದು, ಬೊಂಬೆ ಮಾರಾಟ, ಕಲಾವಿದರ ಜತೆಗೆ ಸಂವಹನ. ಮತ್ತು ವಸ್ತು ಸಂಗ್ರಹಾಲಯ ಪ್ರವಾಸ, ಆಯೋಜನೆ: ಧಾತು ಸಂಸ್ಥೆ, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ತಲಘಟ್ಟಪುರ, ಕನಕಪುರ ರಸ್ತೆ, ಬೆಳಿಗ್ಗೆ 10

‘ತಿಪ್ಪಗೊಂಡನಹಳ್ಳಿ ಜಲಾಶಯ ರಕ್ಷಿಸಿ, ಬೆಂಗಳೂರು ಉಳಿಸಿ’ ವಿಚಾರಸಂಕಿರಣ: ವಿಚಾರ ಮಂಡಿಸುವವರು: ಎಂ.ಎನ್.ತಿಪ್ಪೇಸ್ವಾಮಿ, ಕಾತ್ಯಾಯಿನಿ ಚಾಮರಾಜ, ವಿಶ್ವನಾಥ, ಸಿಂಹಾದ್ರಿ, ರಾಮ್‌ಪ್ರಸಾದ್, ಶಶಿಧರ್ ಸಿ. ಆರಾಧ್ಯ, ಆಯೋಜನೆ: ಆಮ್ ಆದ್ಮಿ ಪಕ್ಷ, ಸ್ಥಳ: ಅಖಿಲ ಭಾರತ ವೀರಶೈವ ಮಹಾಸಭಾ ಸಭಾಂಗಣ, ಗಾಯತ್ರಿ ವಿಹಾರ ಎದುರು, ಬಳ್ಳಾರಿ ರಸ್ತೆ, ಬೆಳಿಗ್ಗೆ 10.30

ಕಾಸಿಯಾ ಶ್ರೇಷ್ಠತಾ ಮತ್ತು ನಾವೀನ್ಯತಾ ಕೇಂದ್ರ ಹಾಗೂ ವಸ್ತು ಪ್ರದರ್ಶನ ಕೇಂದ್ರ ಕಟ್ಟಡಗಳ ಉದ್ಘಾಟನೆ: ಡಿ.ಕೆ.ಶಿವಕುಮಾರ್, ಅತಿಥಿಗಳು: ಕೆ.ಎಚ್.ಮುನಿಯಪ್ಪ, ಶರಣಬಸಪ್ಪ ದರ್ಶನಾಪುರ, ಟಿ. ರಘುಮೂರ್ತಿ, ಎನ್.ಶ್ರೀನಿವಾಸ್, ರಾಜೇಂದ್ರ, ಸತೀಶ್ ಪಾಟೀಲ್, ಅಧ್ಯಕ್ಷತೆ: ಎಂ.ಜಿ. ರಾಜಗೋಪಾಲ್, ಆಯೋಜನೆ: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ), ಸ್ಥಳ: ಪ್ಲಾಟ್ ನಂ. ಕಾಮ್–4, ಅವ್ವೇರಹಳ್ಳಿ ಕೈಗಾರಿಕಾ ಪ್ರದೇಶ, ದಾಬಸ್‌ಪೇಟೆ, ಬೆಳಿಗ್ಗೆ 10.30

ಭರತನಾಟ್ಯ ರಂಗಪ್ರವೇಶ: ವಿಸ್ಮಯ ಸುಧೀರ್, ಅತಿಥಿಗಳು: ಬಿ. ತನುಜಾ ರಾಜ್, ನಾಗಲಕ್ಷ್ಮಿ ನಾಗರಾಜನ್, ದೀಪಾ ಸುಧೀಂದ್ರ, ಸಂಧ್ಯಾ ಶಂಕರ್, ಸುಧಾಕರ್ ರಾವ್, ಸ್ಥಳ: ಪ್ರಭಾತ್ ಕಲಾದ್ವಾರಕ, ಕೋರಮಂಗಲ ಕ್ಲಬ್ ಆವರಣ, ಕೋರಮಂಗಲ, ಸಂಜೆ 5



ರೈನ್‌ಬೋ ಹಬ್ಬ: ಲಿಂಗತ್ವ ಮತ್ತು ಲೈಂಗಿಕ ವೈವಿಧ್ಯತೆಯ ಸಂಭ್ರಮ, ಅತಿಥಿಗಳು: ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ನಾಗಲಕ್ಷ್ಮಿ ಚೌಧರಿ, ಪ್ರಿಯಕೃಷ್ಣ, ಮಹೇಶ್ ಬಾಬು, ಆಯೋಜನೆ: ಸಂಗಮ, ಸ್ಥಳ: ಸ್ಟೂಡೆಂಟ್ ಕ್ರಿಶ್ಚಿಯನ್ ಮೂಮೆಂಟ್ ಆಫ್ ಇಂಡಿಯಾ, 2ನೇ ಕ್ರಾಸ್, ಸಿಎಸ್‌ಐ ಕಾಂಪೌಂಡ್, ಮಿಷನ್ ರಸ್ತೆ, ಮಧ್ಯಾಹ್ನ 1.30

ಜಗನ್ನಾಥ ರಥ ಯಾತ್ರೆ: ಆಯೋಜನೆ ಹಾಗೂ ಸ್ಥಳ: ಇಸ್ಕಾನ್ ದಕ್ಷಿಣ ಬೆಂಗಳೂರು, ರಾಜರಾಜೇಶ್ವರಿ ನಗರ, ಸಂಜೆ 4

ಅನಂತ ಅಭಿನಂದನೆ: ಅನಂತನಾಗ್ ಅವರ ಚಿತ್ರಗೀತೆಗಳ ಗಾಯನ, ಆಯೋಜನೆ: ಸೃಜನ ಲಲಿತಕಲಾ ವೇದಿಕೆ, ಸ್ಥಳ: ಶುಕ್ರ ಸಭಾಂಗಣ, ಮಲ್ಲೇಶ್ವರ, ಸಂಜೆ 5

ಸ್ಮರಣೆ-ಸ್ವರಾಂಜಲಿ: ಅನಿಲ್ ಕುಲಕರ್ಣಿ ಸ್ಮರಣೆ, ಗಾಯನ: ಶ್ರಾವ್ಯಾ ಸುದರ್ಶನ ಅಯ್ಯರ್, ತಬಲಾ: ಪೂರ್ಣಿಮಾ ಸುಮಂತ್, ಹಾರ್ಮೋನಿಯಂ: ಗಜಾನನ ಸುಭಾಹಿತ, ಉಸ್ತಾದ್ ರಶೀದ್ ಖಾನ್ ಸ್ಮರಣೆ, ಗಾಯನ: ಪ್ರಸಾದ ಖಾಪಡ್ರೆ, ತಬಲಾ: ಗುರುಮೂರ್ತಿ ವೈದ್ಯ, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ಆಯೋಜನೆ: ಸಪ್ತಕ ಬೆಂಗಳೂರು, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

‘ಒಂದು ವಿಲಯ ಕಥೆ’ ನಾಟಕ ಪ್ರದರ್ಶನ: ನಿರ್ದೇಶನ: ಶರತ್ ಪರ್ವತವಾಣಿ, ಆಯೋಜನೆ: ಯುವಶ್ರೀ ಬೆಂಗಳೂರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಏರು ವಯಸ್ಸಿನ ಅವಧಿಯ ಸವಾಲುಗಳನ್ನು ಎದುರಿಸಲು ಬ್ರಿಟನ್‌ನ ನಾರ್ತ್ ಯಾರ್ಕ್‌ಶೈರ್‌ನಲ್ಲಿ 40 ವರ್ಷ ಮೇಲ್ಪಟ್ಟ ಮಹಿಳೆಯರು 'ನಾವಿರುವಂತೆಯೇ ನಮ್ಮನ್ನು ಒಪ್ಪುವುದು' (ಎಡಬ್ಲ್ಯು ಡಬ್ಲ್ಯು ಎ- ಅಕ್ಸೆಪ್ಟಿಂಗ್ ಹೂ ವಿ ಆರ್) ಎಂಬ ಆಂದೋಲನವನ್ನೇ ಇತ್ತೀಚೆಗೆ ಆರಂಭಿಸಿದ್ದಾರೆ

ನಾ ಚಿರಯೌವನೆ!

ವಯಸ್ಸಾಗುವುದು ದೇಹಕ್ಕೇ ವಿನಾ ಮನಸ್ಸಿಗಲ್ಲ. ಆದರೂ 'ನನಗೆ ವಯಸ್ಸಾಯಿತು' ಎಂದುಕೊಂಡು ಜೀವನೋತ್ಸಾಹ ಕಳೆದುಕೊಳ್ಳುವವರು, 'ನಿನಗೆ ವಯಸ್ಸಾಯಿತು ಬಿಡು' ಎಂದು ಉತ್ಸಾಹ ಕುಂದಿಸುವವರು ಹೆಜ್ಜೆಹೆಜ್ಜೆಗೂ ಸಿಗುತ್ತಾರೆ. ವಯಸ್ಸಾಗುವಿಕೆಯನ್ನು ಗೌರವದಿಂದ ಸ್ವೀಕರಿಸುತ್ತಲೇ ಜೀವನಪ್ರೀತಿ ದಕ್ಕಿಸಿಕೊಳ್ಳುವ ಮಾರ್ಗವನ್ನು ಶೋಧಿಸಿಕೊಂಡರೆ ಬದುಕು ಸುಂದರ, ಸುರಳೀತ. ಆಂತರಿಕ ಸೌಂದರ್ಯದಿಂದ ಬಾಹ್ಯ ಸೌಂದರ್ಯವೂ ಪುಟಿಯುವ, ಬಾಹ್ಯ ಸೌಂದರ್ಯದಿಂದ ಆಂತರಿಕ ಸೌಂದರ್ಯದ ಆತ್ಮವಿಶ್ವಾಸ ಕಳೆಗಟ್ಟುವ ಸೋಜಿಗವನ್ನು ಹಿಡಿದಿಟ್ಟಿದ್ದಾರೆ ಲೇಖಕಿ, ಕವಯಿತ್ರಿ ಎಂ.ಆರ್.ಕಮಲಾ



ಚಿತ್ರ: ಭಾವು ಪತ್ತಾರ್

'ಹೆಣ್ಣುಮಕ್ಕಳ ವಯಸ್ಸನ್ನು ಕೇಳಬಾರದು' ಎಂಬ ಮಾತಿನ ಹಿಂದಿನ ಮರ್ಮವೇನು? ವಯಸ್ಸನ್ನು ಮರೆಮಾಚುತ್ತಾರೆ ಎನ್ನುವುದಾದರೆ ಅದಕ್ಕೆ ಕಾರಣವೇನು? ಸಿನಿಮಾ ನಟಿಯರ ವಯಸ್ಸು ಹದಿನೆಂಟರಲ್ಲೇ ನಿಂತುಬಿಡುತ್ತದೆ ಎನ್ನುವ ಅಪಹಾಸ್ಯವೇಕೆ? ನಿಜವಾದ ವಯಸ್ಸನ್ನು ಹೇಳಿದರೆ ತಮ್ಮನ್ನು ಕಡೆಗಣಿಸುತ್ತಾರೆ ಎಂಬ ಅಳುಕೇ?– ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಸರಳವಾಗಿಲ್ಲ.

ವಯಸ್ಸಾಗುವುದು ಒಂದು ಸಹಜ ಪ್ರಕ್ರಿಯೆ. ಅದು ತನಗೆ ತಾನೇ ದೋಷವೂ ಅಲ್ಲ, ಗುಣವೂ ಅಲ್ಲ. ವಯಸ್ಸಾಯಿತು ಎಂದು ಮೂಲೆಗೆ ತಳ್ಳುವ ಪ್ರವೃತ್ತಿ ಒಂದು ಕಡೆಗಾದರೆ, ಪೂಜನೀಯ ಸ್ಥಾನದಲ್ಲಿ ಇರಿಸುವುದು ಮತ್ತೊಂದು ಕಡೆ. ಈ ಎರಡು ಕೂಡ ಅಸಹಜ, ಅತಿರೇಕದ ವರ್ತನೆಗಳೇ. ಇವು ಹೆಚ್ಚಿನವರಲ್ಲಿ ಗೊಂದಲ ಸೃಷ್ಟಿಸಿ ಮನಸ್ಸನ್ನು ಅಸ್ವಸ್ಥಗೊಳಿಸುತ್ತವೆ. 'ವಯಸ್ಸಾಗುವುದರ' ಬಗ್ಗೆ ಸಮಾಜದಲ್ಲಿ ಆಳವಾಗಿ ಬೇರೂರಿರುವ ಪೂರ್ವಗ್ರಹಗಳೇ ಇದಕ್ಕೆ ಕಾರಣ.

ಇಂಥಿಂಥ ವಯಸ್ಸಿನಲ್ಲಿ ಹೀಗೆಯೇ ಇರಬೇಕು, ಹೀಗೇ ವರ್ತಿಸಬೇಕು, ಇಂಥ ಬಟ್ಟೆಯನ್ನೇ ತೊಡಬೇಕು ಎನ್ನುವ ಒತ್ತಡಗಳನ್ನೆಲ್ಲ ಅರಿವಿಗೇ ಬಾರದಂತೆ ನಮ್ಮ ಮೇಲೆ ಹೇರಲಾಗುತ್ತದೆ. ವಯಸ್ಸಾದವರು ಯೌವನಿಗರಂತೆ ಕೇಕೆ ಹಾಕಬಾರದು, ಕುಣಿಯಬಾರದು, ಹೊಸ ಶೈಲಿಯ ಉಡುಪುಗಳನ್ನು ಧರಿಸಬಾರದು ಎಂದೆಲ್ಲ ತಲೆಗೆ ತುಂಬಿರುವುದರಿಂದ, ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡವರು ಅಪಹಾಸ್ಯ, ಅವಹೇಳನಕ್ಕೆ ಈಡಾಗುವುದೇ ಹೆಚ್ಚು.

ಕೆ.ಎಸ್.ನರಸಿಂಹಸ್ವಾಮಿ ಅವರಂತಹ ಸೂಕ್ಷ್ಮ ಸಂವೇದನೆಯ ಕವಿಯೇ 'ನಲವತ್ತರ ಚೆಲುವೆ' ಕವನದಲ್ಲಿ, ದಿನವೂ ಹೊಸ ಸೀರೆ ಉಡುವ ಜೀವನ್ಮುಖಿ ಹೆಣ್ಣುಮಗಳನ್ನು 'ನಲವತ್ತರ ಮೇಲೊದಗಿದೆ ಹೊಸ ಪ್ರಾಯದ ಸರದಿ' ಎನ್ನುತ್ತಾರೆ. ಬಹುಶಃ ವ್ಯಂಗ್ಯವನ್ನು ಬಿಟ್ಟು ಪ್ರೀತಿಯಿಂದ ನಲವತ್ತರ ಚೆಲುವೆಯ ಒಳಗನ್ನು ಅವರು ನೋಡಬಹುದಿತ್ತು.

'ನಿನಗೆ ವಯಸ್ಸಾಯಿತು ಬಿಡು' ಎಂದು ಮಾತನಾಡದ ಮನೆಯೊಂದಿದೆಯೇ? ಅದೊಂದು ಮನಸ್ಸನ್ನು ಕುಗ್ಗಿಸುವ ಮಾತು. ಇದೇ ಮಾತನ್ನು ಯಾರೂ ಚುಕ್ಕೆ-ಚಂದ್ರರಿಗೆ, ಬೆಟ್ಟ-ಗುಡ್ಡಗಳಿಗೆ, ನದಿ-ಕಡಲಿಗೆ ಹೇಳುವುದಿಲ್ಲ. ಕೈ ಸುಕ್ಕುಗಟ್ಟುವುದು, ಬಿಳಿ ಕೂದಲು ಮೂಡುವುದು, ಕಣ್ಣು ಕಾಂತಿ ಕಳೆದುಕೊಳ್ಳುವುದು, ನೆನಪಿನ ಶಕ್ತಿ ಕಮ್ಮಿಯಾಗುವುದು ವಯೋಧರ್ಮ. ಆದರೆ ಒಳಗಿನ ಚೈತನ್ಯಕ್ಕೆ ಮುದಿತನ ಎಂಬುದಿಲ್ಲ ಎನ್ನುವುದನ್ನು ಅರ್ಥಮಾಡಿಸುವ ರೀತಿಯಲ್ಲಿ ಕಿರಿಯರನ್ನು ಬೆಳೆಸುತ್ತಿದ್ದೇವೆಯೇ ಎಂಬ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟ. ಹಿರಿಯರು ಕೂಡ ಇಂತಹ ಪೂರ್ವಗ್ರಹಗಳಿಗೆ ಒಳಗಾಗಿಯೇ ಬದುಕುತ್ತಾರೆ.

ಯೌವನದ ಆಕರ್ಷಣೆಗೆ ಒಳಗಾಗದವರಾರು? ಲ್ಯಾಟಿನ್ ಅಮೆರಿಕದ ಬರಹಗಾರ್ತಿ ಇಸಬೆಲ್ ಅಯಾಂಡೆ 2006ರಲ್ಲಿ ಇಟಲಿಯಲ್ಲಿ ನಡೆದ ಚಳಿಗಾಲದ ಒಲಿಂಪಿಕ್ ಕ್ರೀಡೆಯಲ್ಲಿ, 'ಚಲನ ಚಿತ್ರಗಳ ದೇವತೆ' ಎಂದೇ ಪ್ರಸಿದ್ಧಳಾಗಿದ್ದ ಆ ದೇಶದ ಸೋಫಿಯಾ ಲೊರೆನ್ ಅವರನ್ನು ಭೇಟಿಯಾಗುತ್ತಾರೆ. ಇಸಬೆಲ್ ಅವರೊಂದಿಗೆ ಒಲಿಂಪಿಕ್ ಬಾವುಟ ಹಿಡಿದು ಕ್ರೀಡಾಂಗಣದಲ್ಲಿ ಹೆಜ್ಜೆ ಹಾಕಿದ ಎಂಟು ಹೆಣ್ಣುಮಕ್ಕಳಲ್ಲಿ ಸೋಫಿಯಾ ಕೂಡ ಒಬ್ಬರು. 'ಎಪ್ಪತ್ತು ವರ್ಷ ದಾಟಿದ್ದ ಸೋಫಿಯಾ ಕೋಳಿಗಳ ನಡುವಿನ ನವಿಲಿನಂತೆ ಇದ್ದಳು' ಎಂದು ಇಸಬೆಲ್ ಬರೆಯುತ್ತಾರೆ. ಅಜೇಯ ಯೌವನದ, ಆಕರ್ಷಣೆಯ ಗುಟ್ಟೇನು ಎಂಬ ಪ್ರಶ್ನೆಗೆ ಸಂದರ್ಶನವೊಂದರಲ್ಲಿ ಸೋಫಿಯಾ, 'ಸದಾ ಸಂತೋಷವಾಗಿ ಇರುತ್ತೇನೆ, ನೇರವಾಗಿ ನಿಲ್ಲುತ್ತೇನೆ. ನರಳುವುದು, ಆಪಾದನೆ ಮಾಡುವುದು, ಕೆಮ್ಮುವುದನ್ನೆಲ್ಲ ಮಾಡುವುದಿಲ್ಲ. ಮುದುಕರ ಗೊಣಗಾಟಗಳಂತೂ ಇಲ್ಲವೇ ಇಲ್ಲ' ಎಂದಿದ್ದರು. ಅಲ್ಲಿಂದ ಮುಂದೆ ಇಸಬೆಲ್ ಉತ್ತಮ ಭಂಗಿಯಲ್ಲಿ ಇರುವುದನ್ನು ಅಭ್ಯಾಸ ಮಾಡಿಕೊಂಡರು. ಆದರೆ ಅದಷ್ಟೇ ವೃದ್ಧಾಪ್ಯದಲ್ಲಿ ಸಂತಸವನ್ನು ನೀಡುವುದಿಲ್ಲ ಎಂದಾಕೆಗೆ ಅರ್ಥವಾಗಿದ್ದು ಗೆಳತಿ ಓಲ್ಗಾ ಮುರ್ರೆಯನ್ನು ನೋಡಿದಾಗ.

94ನೇ ವಯಸ್ಸಿನಲ್ಲೂ ಓಲ್ಗಾ ಕನ್ನಡಕವನ್ನಾಗಲೀ ಕಿವಿ ಕೇಳಿಸುವ ಯಂತ್ರವನ್ನಾಗಲೀ ಹಾಕಿಕೊಳ್ಳದೆ, ಲೇನ್ ಬದಲಿಸದೆ ಕಾರನ್ನು ಓಡಿಸುತ್ತಿದ್ದರು. ಆ ಶಕ್ತಿಶಾಲಿ ಹೆಣ್ಣುಮಗಳ ಬದುಕಿಗೆ ಇದ್ದ ಉದ್ದೇಶವೇ ಸಂತಸದಿಂದ ಇರುವುದು ಹೇಗೆ ಎಂಬ ಬಗ್ಗೆ ತನಗೆ ಮಾರ್ಗದರ್ಶನವನ್ನು ನೀಡಿತ್ತು ಎಂದು ಇಸಬೆಲ್ ಹೇಳಿದ್ದಾರೆ. ಓಲ್ಗಾ ತಮ್ಮ ಅರವತ್ತನೇ ವಯಸ್ಸಿನಲ್ಲಿ ನೇಪಾಳದ ಬೆಟ್ಟಗಳಲ್ಲಿ ಟ್ರೆಕಿಂಗ್ ಮಾಡಲು ಹೋಗಿ ಕಾಲು ಮುರಿದುಕೊಂಡಿದ್ದರು. ಜೊತೆಗಿದ್ದ ಶೆರ್ಪಾ ಆಕೆಯನ್ನು ಬುಟ್ಟಿಯಲ್ಲಿ ಕೂರಿಸಿಕೊಂಡು, ಬಡತನ ತಾಂಡವವಾಡುತ್ತಿದ್ದ ಹಳ್ಳಿಯೊಂದಕ್ಕೆ ಕರೆದೊಯ್ದ. ಬಸ್ಸಿಗಾಗಿ ಕಾಯುತ್ತಿದ್ದಾಗ, ಅಲ್ಲಿ ನಡೆಯುತ್ತಿದ್ದ 'ಹಬ್ಬ'ವೊಂದಕ್ಕೆ ಓಲ್ಗಾ ಸಾಕ್ಷಿಯಾದರು. ಆ ನಿಗದಿತ ದಿನದಂದು ಬಸ್ಸುಗಳಲ್ಲಿ ಬಂದಿಳಿಯುತ್ತಿದ್ದ ಏಜೆಂಟರು, ಆರರಿಂದ ಎಂಟು ವರ್ಷದ ಹುಡುಗಿಯರನ್ನು ಎರಡು ಆಡುಗಳ ಬೆಲೆಗೆ ಕೊಳ್ಳುತ್ತಿದ್ದರು. ಈ ಹೆಣ್ಣುಮಕ್ಕಳು ಒಳ್ಳೆಯ ಕುಟುಂಬವನ್ನು ಸೇರಿ, ಶಾಲೆಗೆ ಹೋಗುತ್ತಾರೆ ಎಂದು ಪೋಷಕರನ್ನು ನಂಬಿಸಿ ಕರೆದೊಯ್ಯುತ್ತಿದ್ದರು. ಆದರೆ ಆ ಹುಡುಗಿಯರನ್ನು ಜೀತಗಾರರನ್ನಾಗಿ ಮಾಡುತ್ತಿದ್ದರು ಇಲ್ಲವೇ ವೇಶ್ಯಾಗೃಹಕ್ಕೆ ತಳ್ಳುತ್ತಿದ್ದರು. ಈ ವಿಷಯ ಓಲ್ಗಾ ಅವರಿಗೆ ನಂತರ ತಿಳಿಯಿತು.

ಕ್ಯಾಲಿಫೋರ್ನಿಯಾಗೆ ಮರಳಿದ ಓಲ್ಗಾ, ಶೋಷಣೆಗೊಳಗಾದ ಮಕ್ಕಳ ವಸತಿ, ಶಿಕ್ಷಣ ಮತ್ತು ಆರೋಗ್ಯಕ್ಕಾಗಿ 'ನೇಪಾಳ್ ಯೂಥ್ ಫೌಂಡೇಶನ್' ಸಂಸ್ಥೆಯನ್ನು ಸ್ಥಾಪಿಸಿದರು. ಹೆಚ್ಚುಕಮ್ಮಿ ಹದಿನೈದು ಸಾವಿರ ಹೆಣ್ಣುಮಕ್ಕಳನ್ನು ಜೀತದಿಂದ ಪಾರು ಮಾಡಿದರು. ಪರಿತ್ಯಕ್ತ ಮತ್ತು ಅನಾಥ ಮಕ್ಕಳಿಗೆ ವಸತಿಶಾಲೆಗಳು, ಪೌಷ್ಟಿಕಾಂಶದ ಕ್ಲಿನಿಕ್‌ಗಳನ್ನು ಸ್ಥಾಪಿಸಿದರು. ವೃದ್ಧಾಪ್ಯದಲ್ಲೂ ಓಲ್ಗಾ ಆರೋಗ್ಯಕರವಾಗಿ, ಶಕ್ತಿಶಾಲಿಯಾಗಿ ಇದ್ದುದಕ್ಕೆ ಇದೇ ಕಾರಣ (ಹೋದ ವರ್ಷ ಓಲ್ಗಾ ನಿಧನರಾದರು). ನಾವು ಕೂಡ ವಯಸ್ಸಿನ ಬಗ್ಗೆ ಇರುವ ಎಲ್ಲ ಪೂರ್ವಗ್ರಹಗಳನ್ನೂ ಕಿತ್ತೆಸೆದು, ಬದುಕಿರುವ ತನಕ 'ಜೀವಂತ'ವಾಗಿ, ಸಂತಸದಿಂದ ಇರುವ ಮೂಲಕ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳಲು ಸಾಧ್ಯ ಎನ್ನಿಸುತ್ತದೆ.

ಒಳಚೇತನಕ್ಕೆ ಸೋಕದ ವಯಸ್ಸಿನ ಗಾಳಿ



ಮಹಾಶ್ವೇತಾ ದೇವಿ

'ನಾನು ತೊಂಬತ್ತಕ್ಕೆ ಕಾಲಿಡುತ್ತಿರುವೆ, ನೋಡಿ, ನನ್ನ ಸುತ್ತಲೂ ಎಷ್ಟೆಲ್ಲ ಅವಾಂತರಗಳನ್ನು ಸೃಷ್ಟಿಸಿರುವೆ' ಎಂದು 2013ರರ ಜೈಪುರ ಸಾಹಿತ್ಯೋತ್ಸವದಲ್ಲಿ ಹೇಳಿದ್ದ ಪಶ್ಚಿಮ ಬಂಗಾಳದ ಮಹಾಶ್ವೇತಾ ದೇವಿ, ವಿಶ್ವಪ್ರಸಿದ್ಧ ಲೇಖಕಿ. ವಿವಿಧ ರಾಜ್ಯಗಳಲ್ಲಿ ಮಹಿಳಾ ಹಕ್ಕು, ಭೂಮಿ ಹಕ್ಕು, ಆದಿವಾಸಿ ಮಹಿಳೆಯರ ಆರೋಗ್ಯಕ್ಕಾಗಿ ಪಟ್ಟ ಶ್ರಮಕ್ಕೆ ಅವರಿಗೆಂದೂ ವಯೋಮಿತಿ ಅಡ್ಡಿಯಾಗಿರಲಿಲ್ಲ.

ಅವರ ಕೃತಿಯೊಂದರಲ್ಲಿ, ಗರ್ಭದಲ್ಲಿರುವ ಹೆಣ್ಣುಭ್ರೂಣಕ್ಕೆ ಅಜ್ಜಿ ಹೇಳುವ ಕಥೆಯೊಂದಿದೆ. ಮೊಮ್ಮಗಳು ಅನಿಷ್ಟಗಳನ್ನು ತೊಡೆದುಹಾಕಲು ಯತ್ನಿಸುವಾಗ, ಹೆಣ್ಣಿನ ವಿವಿಧ ವಯೋಮಾನದ ಪಡಿಪಾಟಲುಗಳು ಕಣ್ಣಮುಂದೆ ಚಾಚುತ್ತವೆ. ಜೀವಚೈತನ್ಯದ ಚಿಲುಮೆಯಾಗಿದ್ದ ಮಹಾಶ್ವೇತಾ ದೇವಿಯವರು ಯೌವನದಲ್ಲಿದ್ದಾಗಿನ ಮತ್ತು ವಯೋವೃದ್ಧರಾಗಿದ್ದಾಗಿನ ಭಾವಚಿತ್ರಗಳನ್ನು ಹೋಲಿಸಿ ನೋಡಿದರೆ, ನಗುಮುಖದ ಕಾಂತಿ, ಆತ್ಮವಿಶ್ವಾಸಕ್ಕೆ ಮಾತ್ರ ಒಂದಿನಿತೂ ಚ್ಯುತಿ ಬಾರದೇ ಇದ್ದುದನ್ನು ಕಾಣಬಹುದು. ಅವರ ಒಳಚೇತನಕ್ಕೆ ಎಂದಿಗೂ ವಯಸ್ಸಿನ ಗಾಳಿ ಸೋಕಿರಲೇ ಇಲ್ಲ.

ಆತ್ಮವಿಶ್ವಾಸ ಕೊಡುವ ಅಲಂಕಾರ

ನಮ್ಮನ್ನು ನಾವು ಅಂದಗೊಳಿಸಿಕೊಳ್ಳುವುದೆಂದರೆ ಸುತ್ತಲಿನ ವಾತಾವರಣವನ್ನು ಸುಂದರಗೊಳಿಸುವುದು ಎಂದೇ ಅರ್ಥ. ಗಿಡ ಮರಗಳು ತಮ್ಮ ವಯಸ್ಸನ್ನು ಲೆಕ್ಕಿಸದೆ ದಿನ ದಿನವೂ ಅಪೂರ್ವ ಬಣ್ಣಗಳನ್ನು ತೆರೆದಿಡುವಾಗ ನಾವೇಕೆ ಸಪ್ಪಗಿರಬೇಕು? ಚೆನ್ನಾಗಿ ಕಾಣಿಸಿಕೊಳ್ಳುವುದರ ಬಗ್ಗೆ ಮನುಷ್ಯನಿಗೆ ವಯಸ್ಸು ಯಾಕೆ ಆತಂಕ ಹುಟ್ಟಿಸಬೇಕು? ಅಭಿರುಚಿಪೂರ್ಣ ಅಲಂಕಾರ, ಬಣ್ಣ ಬಣ್ಣದ ಬಟ್ಟೆಗಳು, ಕೇಶ ವಿನ್ಯಾಸ ಎಲ್ಲವೂ ಅಪಾರವಾದ ಆತ್ಮವಿಶ್ವಾಸವನ್ನು ನೀಡಬಲ್ಲವು, ಮನಸ್ಸನ್ನು ಮುದವಾಗಿ ಇರಿಸಬಲ್ಲವು, ನಕಾರಾತ್ಮಕತೆಯನ್ನು ಹೋಗಲಾಡಿಸಬಲ್ಲವು. ವಿವೇಚನೆಯಿಂದ ಮಾಡಿಕೊಳ್ಳುವ ಮೇಕ್‌ಅಪ್ ಕೂಡ ಒಂದು ಪವಾಡವೇ. ವಯಸ್ಸು ನಮ್ಮ ಚೈತನ್ಯವನ್ನು, ನಮ್ಮ ಆಸಕ್ತಿಯನ್ನು, ಈ ಜಗತ್ತಿನ ಆಗುಹೋಗುಗಳಲ್ಲಿ ಭಾಗವಹಿಸುವುದನ್ನು ತಡೆಹಿಡಿಯಬಾರದು.

ಸ್ಮಾರ್ಟ್ ಆಗಿರಲು ಏನಡ್ಡಿ?



ಒಮ್ಮೆ ವಿಶಾಖಪಟ್ಟಣದಲ್ಲಿ ಶೂಟಿಂಗ್‌ನಲ್ಲಿದ್ದೆ. ಜಯಾ ಅಂತ ಒಬ್ಬಳು 'ಲಕ್ಷ್ಮಿ ನನ್ನ ಫ್ರೆಂಡು, ಅವಳನ್ನು ನೋಡಬೇಕು' ಅಂತ ಹೇಳಿಕಳಿಸಿದ್ದಳು. ನಾನಿದ್ದ ಜಾಗದಿಂದಲೇ ಅವಳನ್ನು ನೋಡಿದೆ. ತಲೆಕೂದಲೆಲ್ಲಾ ಬೆಳ್ಳಗಾಗಿಹೋಗಿತ್ತು. ಚೈತನ್ಯವೆಲ್ಲಾ ಉಡುಗಿ ಹೋದಂತೆ ಇದ್ದಳು. ಮೊಮ್ಮಗನನ್ನು ಆಡಲು ಬಿಟ್ಟು ಸೋತ ಮುಖದಲ್ಲಿ ನೋಡುತ್ತಾ ನಿಂತಿದ್ದಳು. 'ಅವಳು ನನ್ನ ಸೀನಿಯರ್, ತುಂಬಾ ವರ್ಷ ಫೇಲಾಗಿ, ಫೇಲಾಗಿ ಓದಿದ್ದಾಳೆ. ಅಂಥವಳ ಜೊತೆ ಐ ಡೋಂಟ್ ವಾಂಟ್ ಟು ಮಿಕ್ಸ್' ಅಂತ ಹೇಳಿಬಿಟ್ಟೆ.

ಅಂದರೆ, ನಮಗೆ ಎಷ್ಟೇ ವಯಸ್ಸಾದರೂ ಅದನ್ಯಾಕೆ ತೋರಿಸಿಕೊಳ್ಳಬೇಕು? ವಿ ಲಿವ್ ಓನ್ಲಿ ಒನ್ಸ್. ನಾವು ಚೆನ್ನಾಗಿ ಇರಬೇಕು. ನಮಗೆ ವಯಸ್ಸಾದರೆ ವಯಸ್ಸಾದ ಥರಾನೇ ಇರಬೇಕು ಅಂತೇನೂ ಇಲ್ಲ. 'ನನಗೆ ವಯಸ್ಸಾಗಿ ಹೋಯ್ತು' ಅಂತ ಹಲುಬುತ್ತಲೇ ಇರುವವರು ತಮ್ಮ ಎನರ್ಜಿಯನ್ನೂ ಹೋಗಿಸಿಕೊಂಡು ನಮ್ಮನ್ನೂ ಅವರತ್ತಲೇ ಎಳೆದುಕೊಂಡು ಬಿಡುತ್ತಾರೆ. ಅಂಥವರ ಜೊತೆ ನಾನು ಸೇರುವುದೇ ಇಲ್ಲ. ಅವರು ಸ್ನೇಹಿತರಾಗಿರಲಿ, ಸಂಬಂಧಿಕರೇ ಆಗಿರಲಿ, 'ಸ್ಮಾರ್ಟ್ ಇದ್ರೆ ಮಾತ್ರ ನನ್ನ ಹತ್ತಿರಕ್ಕೆ ಬನ್ನಿ, ಇಲ್ಲಾ ಅಂದ್ರೆ ಬರಲೇಬೇಡಿ, ಯಾಕಂದ್ರೆ ನನಗೂ ನಿಮ್ಮ ಗಾಳಿ ಬೀಸಿಬಿಡುತ್ತದೆ' ಅಂತ ಹೇಳಿಬಿಡ್ತೀನಿ.

ಲಕ್ಷ್ಮಿ, ಚಿತ್ರನಟಿ

ಫ್ರಾನ್ಸ್‌ನ ಚೆಲುವೆಯರು

ಫ್ರಾನ್ಸ್‌ನ ಯಾವುದೇ ನಗರಕ್ಕೆ ಭೇಟಿ ನೀಡಿದರೂ ಕಾಣಸಿಗುವ ಸಾಮಾನ್ಯ ದೃಶ್ಯವೆಂದರೆ, ತೊಂಬತ್ತನ್ನು ದಾಟಿದವರಲ್ಲೂ ಚಿಮ್ಮುವ ಉತ್ಸಾಹ, ಉಲ್ಲಾಸದ ನಡಿಗೆ, ನಗು, ಅನುಭವಗಳ ವಿನಿಮಯ, ಸ್ವಾವಲಂಬಿ ಜೀವನ. ವಯಸ್ಸಿನ ಬಗ್ಗೆ ಇರಬಹುದಾದ ಸಂಕುಚಿತ ಭಾವನೆಗಳನ್ನು ದಾಟಿರುವುದೇ ಇದಕ್ಕೆ ಕಾರಣ.

ಕೆಲವೊಮ್ಮೆ ಮಾನಸಿಕ ಸ್ಥಿತಿಯೇ ಯೌವನಿಗರನ್ನು ವೃದ್ಧರಂತೆ ಆಗಿಸಬಹುದು, ವೃದ್ಧರಲ್ಲಿ ಯೌವನದ ಉತ್ಸಾಹವನ್ನು ತುಂಬಬಹುದು. ಹೊಸ ವಿಷಯಗಳ ಕಲಿಕೆಯನ್ನು ನಿರಾಕರಿಸಿದರೆ, ಹತಾಶೆ, ನಿರಾಶೆಗಳಲ್ಲಿ ಮುಳುಗಿ ನಿಂದಿಸುವುದನ್ನೇ ರೂಢಿಸಿಕೊಂಡರೆ, ಸಿನಿಕತನವೇ ಆದರ್ಶವಾದರೆ, ಅಂತಃಕರಣದ ಸೆಲೆ ಬತ್ತಿಹೋದರೆ ಮಾನಸಿಕ ಮುದಿತನವನ್ನು ಆಹ್ವಾನಿಸಿಕೊಂಡಂತೆಯೇ ಸರಿ.

ಅನ್ಯಮನಸ್ಕ ಮಗಳಲ್ಲಿ ಹೇಗೆ ಉತ್ಸಾಹ ತುಂಬಲಿ?



ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

ಮಗಳಿಗೆ 14 ವರ್ಷ. ಬಹಳ ಚುರುಕುಮತಿಯ ಹುಡುಗಿ. ಆದರೆ ಕೆಲವು ತಿಂಗಳಿನಿಂದ ಸದಾ ಅನ್ಯಮನಸ್ಕಳಾಗಿ ಇರುತ್ತಾಳೆ. ಊಟ, ತಿಂಡಿ, ಬಟ್ಟೆಬರೆ, ಓದು ಯಾವುದರಲ್ಲಿಯೂ ಆಸಕ್ತಿ ತೋರುತ್ತಿಲ್ಲ. ನಾನು ಸಿಂಗಲ್ ಮದರ್. ಅತ್ತ ಉದ್ಯೋಗ, ಇತ್ತ ಮನೆ ಜವಾಬ್ದಾರಿಯ ನಡುವೆ ಮಗಳಿಗೆ ಸಮಯ ಕೊಡಲು ಸಾಧ್ಯವಾಗುತ್ತಿಲ್ಲ. ಅವಳ ಸಮಸ್ಯೆ ಏನೆಂಬುದೇ ಅರ್ಥವಾಗುತ್ತಿಲ್ಲ. ಮನೋವೈದ್ಯರ ಬಳಿ ಹೋಗೋಣವೆಂದರೆ ಸುತರಾಂ ಬರಲು ತಯಾರಿಲ್ಲ. ಹರೆಯಕ್ಕೆ ಕಾಲಿಡುತ್ತಿರುವ ಮಗಳನ್ನು ಗದರುವುದೋ ಅವಳ ಸ್ಥಿತಿ ಕಂಡು ಮರುಕಪಡುವುದೋ ಅಥವಾ ಪಾಪಪ್ರಜ್ಞೆಯಿಂದ ನರಳುವುದೋ ತಿಳಿಯದಾಗಿದೆ. ಈ ಸಮಸ್ಯೆಯಿಂದ ಅವಳನ್ನು ಹೊರತರಲು ಏನು ಮಾಡಲಿ?

ರಮಾ, ಮಂಗಳೂರು

ಹದಿಹರೆಯದವರ ಸಮಸ್ಯೆಗಳ ಬಗ್ಗೆ ಅನೇಕ ಲೇಖನಗಳು, ಪುಸ್ತಕಗಳು ಬಂದಿವೆ. ಆದರೂ ಈ ವಯಸ್ಸಿನಲ್ಲಿ ಬರುವ ಸಮಸ್ಯೆಗಳು ಮುಂದುವರಿಯುತ್ತಲೇ ಇವೆ ಮಾತ್ರವಲ್ಲ, ಪರಿಹಾರ ಸುಲಭವಾಗಿ ಸಿಗುತ್ತಿಲ್ಲ. ಕಾರಣವೆಂದರೆ, ಎಲ್ಲರ ಸಮಸ್ಯೆಗಳೂ ಒಂದೇ ರೀತಿಯಾಗಿ ಕಂಡರೂ ಅವೆಲ್ಲವೂ ಭಿನ್ನವಾಗಿರುತ್ತವೆ. ಹಾಗಾಗಿ, ಎಲ್ಲ ಸಮಸ್ಯೆಗಳಿಗೂ ಒಂದೇ ರೀತಿಯ ಪರಿಹಾರ ಉಪಯೋಗಕ್ಕೆ ಬರದು. ಅದೇ ಮನಸ್ಸಿಗಿರುವ ವಿಶಿಷ್ಟ ಸ್ವಭಾವ. ಹಾಗಾಗಿಯೇ ಒಬ್ಬ ಮನಃಶಾಸ್ತ್ರಜ್ಞನಿಗೆ ಪ್ರತಿ ಸೆಷನ್ ಕೂಡಾ ಒಂದು ಪರೀಕ್ಷೆ ಇದ್ದಂತೆ. ಒಂದೊಂದು ಸೆಷನ್‌ನಲ್ಲೂ ಒಂದೇ ತರಹದ ಸಮಸ್ಯೆಗಳಿಗೆ ಬೇರೆ ಬೇರೆ ರೀತಿಯ ಪರಿಹಾರಗಳನ್ನು ಹುಡುಕಬೇಕಾಗುತ್ತದೆ.

ನಿಮ್ಮ ಪ್ರಶ್ನೆಯನ್ನು ಕೂಲಂಕಷವಾಗಿ ಗಮನಿಸಿದರೆ, ನಿಮ್ಮ ಮಗಳಲ್ಲಿ ಇಂತಹ ಬದಲಾವಣೆ ಕೆಲವು ತಿಂಗಳ ಹಿಂದೆಯೇ ಆರಂಭವಾಗಿರಬಹುದೆಂಬುದು ತಿಳಿಯುತ್ತದೆ. ಅಂದರೆ, ಸಮಸ್ಯೆಯೂ ಅದೇ ಸಂದರ್ಭದಲ್ಲಿ ಉದ್ಭವವಾಗಿರಬಹುದು. ಅದು ಗೆಳೆಯ– ಗೆಳತಿಯರೊಂದಿಗಿನ ಸಮಸ್ಯೆ ಆಗಿರಬಹುದು, ಶಾಲೆಯಲ್ಲಿ ನಡೆದಿರುವಂತಹ ಯಾವುದೋ ಸನ್ನಿವೇಶ ಇರಬಹುದು ಅಥವಾ ಇನ್ಯಾವುದೋ ಕಾರಣ ಇರಬಹುದು. ಅದನ್ನು ನೀವು ನಿಧಾನವಾಗಿ ಆಕೆಯೊಡನೆ ಮಾತನಾಡಿ ಅರ್ಥೈಸಿಕೊಳ್ಳಬೇಕು. ಆಗ, ಸಮಸ್ಯೆಯ ಮೂಲವು ಅರಿವಿಗೆ ಬರುತ್ತದೆ. ಇಲ್ಲದಿದ್ದರೆ, ನಾವು ನಮ್ಮ ಕಲ್ಪನೆಯ ಆಧಾರದ ಮೇಲೆ, ಏನೋ ಮಾಡಲು ಹೋಗಿ ಇನ್ನೇನೋ ಆಗುವ ಸಾಧ್ಯತೆ ಇರುತ್ತದೆ. ಯಾಕೆ ಹೀಗೆ ಹೇಳುತ್ತಿದ್ದೇನೆಂದರೆ, ಸುಮಾರು ಅದೇ ವಯಸ್ಸಿನ ಒಬ್ಬಳು ಬಾಲಕಿಯನ್ನು ಆಕೆಯ ತಂದೆ– ತಾಯಿ ನನ್ನ ಬಳಿ ಕರೆತಂದಿದ್ದರು. ಆಕೆಗೂ ಎಲ್ಲ ವಿಷಯಗಳಲ್ಲೂ ನಿರಾಸಕ್ತಿ. ಶಾಲೆಗೆ ಹೋಗುವುದಕ್ಕೂ ಮನಸ್ಸಿಲ್ಲದ ಮನಸ್ಸು. ಏನು ಮಾಡಲೂ ಉತ್ಸಾಹ ಇರಲಿಲ್ಲ. ಮಾತ್ರವಲ್ಲ, ಆಕೆ ತನ್ನ ಕೈಯ ನರವನ್ನು ಕೊಯ್ದುಕೊಳ್ಳುವುದಕ್ಕೆ ಕೂಡ ಮುಂದಾಗಿದ್ದಳು. ಕಾರಣದ ಮೂಲ ಹುಡುಕಿದಾಗ ತಿಳಿದದ್ದು ಏನೆಂದರೆ, ಬಹಳವಾಗಿ ಹಚ್ಚಿಕೊಂಡಿದ್ದ ಇಬ್ಬರು ಸ್ನೇಹಿತೆಯರೊಡನೆ ಆಕೆಗೆ ಏನೋ ಜಗಳವಾಗಿತ್ತು. ಆ ಕಾರಣಕ್ಕೆ ಅವರು ಆಕೆಯನ್ನು ದೂರ ಮಾಡಿದ್ದರು. ಆದ್ದರಿಂದ, ತನಗೆ ಇನ್ಯಾರಿದ್ದಾರೆ, ತಾನು ಒಬ್ಬಂಟಿಯಾದೆ, ಇದನ್ನು ಹೇಗೆ ಸಹಿಸಿಕೊಳ್ಳುವುದು ಎಂದೆಲ್ಲಾ ಚಿಂತಿಸಿ ಆಕೆ ತನ್ನ ವ್ಯಾಕುಲವನ್ನು ಹೆಚ್ಚಿಸಿಕೊಂಡಿದ್ದಳು. ಅಷ್ಟೇ ಅಲ್ಲ, ತೀವ್ರವಾದ ನಕಾರಾತ್ಮಕ ಚಿಂತನೆಗಳ ಜೊತೆಗೆ ತನ್ನನ್ನೇ ತಾನು ದೂಷಿಸಿಕೊಳ್ಳಲಾರಂಭಿಸಿದ್ದಳು.

ಈ ವಿಷಯ ತಿಳಿದಾಗ, 'ಅಷ್ಟಕ್ಕೇ ಹೀಗೆಲ್ಲಾ ಆಡಬೇಕಾ? ಇನ್ನೂ ಹೆಚ್ಚು ಕಷ್ಟದಲ್ಲಿ ಇರುವವರು ಎಷ್ಟೋ ಜನ ಇರುತ್ತಾರೆ. ಹಾಗಿರುವಾಗ, ಇದೇನು ಮಹಾ?' ಎಂದು ಅನ್ನಿಸಬಹುದು. ಆದರೆ, ಪ್ರತಿಯೊಬ್ಬರ ದೃಷ್ಟಿಕೋನ ಬೇರೆ ಬೇರೆ. ಒಬ್ಬರಿಗೆ ಮುಖ್ಯ ಎನ್ನಿಸಿದ್ದು ಇನ್ನೊಬ್ಬರಿಗೆ ಹಾಗೆ ಅನ್ನಿಸಬೇಕೆಂದಿಲ್ಲ. ಹಾಗೆಯೇ ಒಬ್ಬರಿಗೆ ನೋವುಂಟು ಮಾಡಿದಂತಹ ವಿಚಾರ ಇನ್ನೊಬ್ಬರಿಗೆ ನೋವುಂಟು ಮಾಡದೇ ಇರಬಹುದು. ಹೀಗೆ, ನಾವು ಪ್ರತಿಯೊಬ್ಬರೂ ವಿಭಿನ್ನ ವ್ಯಕ್ತಿಗಳು.

ಹೀಗಾಗಿ, ನಿಮ್ಮ ಮಗಳ ಮನದ ಆಳದಲ್ಲಿ ಏನು ಅಡಗಿದೆ ಎಂಬುದನ್ನು ಹುಡುಕಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮನೋವೈದ್ಯರ ಬಳಿ ಕರೆದುಕೊಂಡು ಹೋಗಬಹುದು. ಆದರೆ, ಬಹುಶಃ ಆಕೆ ನಿಮ್ಮ ಸಮಯವನ್ನು ಬಯಸುತ್ತಿದ್ದಾಳೆ. ಯಾವುದಾದರೂ ವಾರದ ರಜೆಯ ದಿನ ಸ್ವಲ್ಪ ಬಿಡುವು ಮಾಡಿಕೊಂಡು, ಆಕೆಯನ್ನು ಎಲ್ಲಾದರೂ ಹೊರಗೆ ಕರೆದುಕೊಂಡು ಹೋಗಿ, ಮುಕ್ತವಾಗಿ ಮಾತನಾಡಿ ಮತ್ತು ಮಾತನಾಡುವುದಕ್ಕೆ ಅವಕಾಶ ಕೊಡಿ. ಆಮೇಲಷ್ಟೇ ಪರಿಹಾರವನ್ನು ಕಂಡುಕೊಳ್ಳಿ.

ಆಹಾ... ಪತ್ರೊಡೆ ಘಮಘಮ ಗೆಣಸಲೆ

ರಸಾಸ್ವಾದ



ಸೂರು ನೀರಿನ ಚಟಪಟ ಸದ್ದು, ಕೊರಕಲಲ್ಲಿ ಹರಿಯುವ ನೀರ ನಿನಾದ, ಎಲೆಗಳ ಮೇಲೆ ಮಳೆ ಹನಿಯ ಬಿಂದು, ಮಗ್ಗುಲಲ್ಲೇ ಸೌದೆ ಒಲೆಯಲ್ಲಿ ತಯಾರಾದ ಪತ್ರೊಡೆ ಬಾಯಲ್ಲಿ ನೀರೂರಿಸಿತ್ತು. ಕೆಸುವಿನ ಎಲೆ ಕಿತ್ತು ತಂದು, ನೆನೆಹಾಕಿದ ಅಕ್ಕಿ ಒರಳುಕಲ್ಲಲ್ಲಿ ಕಡೆದು, ಮಸಾಲೆ ಬೆರೆಸಿ ತಯಾರಿಸಿದ ಪತ್ರೊಡೆ, ಮಳೆಗಾಲದ ತಂಗಾಳಿಯ ಚಳಿಯನ್ನು ಹೊಡೆದೋಡಿಸಿ ನಾಲಿಗೆಯ ರುಚಿಮೊಗ್ಗು ಅರಳಿಸಿತ್ತು...

ಭಟ್ 'ಎನ್' ಭಟ್ ಯೂಟ್ಯೂಬ್ ಅಡುಗೆ ಚಾನೆಲ್‌ನ ಸುದರ್ಶನ ಭಟ್ ಬೆದ್ರಡಿ ಅವರು ಹೇಳಿಕೊಡುವ ಪ್ರತಿ ರೆಸಿಪಿಯೂ ಇಂಥದ್ದೊಂದು ಲೋಕಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಪ್ರಕೃತಿಯಲ್ಲಿ ಸಹಜವಾಗಿ ಸಿಗುವ ಎಲೆ, ಸೊಪ್ಪು, ಕಾಯಿ, ಕಾಡುಹಣ್ಣುಗಳಿಂದ ತಯಾರಿಸುವ ವಿಶಿಷ್ಟ ರೆಸಿಪಿಗಳು ನಾಲಿಗೆ ಮೇಲೆ ಸ್ವಾದದ ಟಿಸಿಲೊಡೆಯುವಂತೆ ಮಾಡುತ್ತವೆ. ಇಂದಿನ ಫಾಸ್ಟ್‌ಫುಡ್ ಯುಗದಲ್ಲಿ ತೆರೆಮರೆಗೆ ಸರಿದಿರುವ, ಈಗಿನವರು ಹೆಸರನ್ನೇ ಕೇಳಿರದ, ಕೇಳಿದ್ದರೂ ಮರೆತೇಹೋಗಿರಬಹುದಾದ ಬಗೆಬಗೆಯ ಸಾಂಪ್ರದಾಯಿಕ ಅಡುಗೆಗಳು ಈ ಚಾನೆಲ್‌ನ ಅಂಗಳದಲ್ಲಿವೆ.

'ಬೇಗ ಮಾಡು, ಬೇಗ ತಿನ್ನು, ಓಡು' ಎನ್ನುವ ಧಾವಂತದ ಬದುಕಿನಲ್ಲೂ ಹಿಂದಿನ ರಾತ್ರಿ ನೆನೆಹಾಕಿದ ಅಕ್ಕಿಯನ್ನು ಒರಳುಕಲ್ಲಲ್ಲಿ ಕಡೆದು ದೋಸೆ ಹೊಯ್ಯುವಂತಹ ಸಾಂಪ್ರದಾಯಿಕ ಶೈಲಿಯ ರೆಸಿಪಿಗಳಿಗೇ ಆದ್ಯತೆ ನೀಡುವ ಈ ಚಾನೆಲ್ ಅನ್ನು ಪಾಕಪ್ರಿಯರು ಮೆಚ್ಚಿಕೊಂಡಿದ್ದಾರೆ. ದಿನವೂ ಅಲ್ಲದಿದ್ದರೂ ಬಿಡುವಾದಾಗ ಅವನ್ನು ತಯಾರಿಸಿ ಸವಿದಿದ್ದಾರೆ. ಈವರೆಗೆ ಅವರು ಹೇಳಿಕೊಟ್ಟಿರುವ 500ಕ್ಕೂ ಹೆಚ್ಚು ರೆಸಿಪಿಗಳು 26 ಕೋಟಿ ವೀಕ್ಷಣೆ ಪಡೆದಿರುವುದೇ ಇದಕ್ಕೆ ನಿದರ್ಶನ.

ಕೇರಳದ ಕಾಸರಗೋಡಿನಲ್ಲಿರುವ ಅವರು ತಮ್ಮ ಅವಳಿ ಸಹೋದರ ಮನೋಹರ ಭಟ್ ಬೆದ್ರಡಿ ಅವರೊಂದಿಗೆ ಸೇರಿ ಈ ಚಾನೆಲ್ ನಡೆಸುತ್ತಿದ್ದಾರೆ. ಸುದರ್ಶನ ತೆರೆ ಮೇಲೆ ರಸಪಾಕ ಹೇಳಿಕೊಟ್ಟರೆ, ಆ ದೃಶ್ಯವನ್ನು ಅಚ್ಚುಕಟ್ಟಾಗಿ ಸೆರೆಹಿಡಿಯುವಲ್ಲಿ ಮನೋಹರ ಪ್ರವೀಣರು. ಇವರ ಅಡುಗೆ ತಯಾರಿಗೆ ಸಹೋದರಿ ಪ್ರಸನ್ನಾ ಭಟ್ ಜೊತೆಯಾಗಿದ್ದಾರೆ. ಕಾನೂನು ಪದವಿ ವ್ಯಾಸಂಗದ ಬಿಡುವಿನ ಸಮಯದಲ್ಲಿ ಚಿಕ್ಕಪುಟ್ಟ ಸಮಾರಂಭಗಳಿಗೆ ಅಡುಗೆ ತಯಾರಿಸಲು ಹೋಗುತ್ತಿದ್ದ ಸುದರ್ಶನ ಅವರಿಗೆ ಲಾಕ್‌ಡೌನ್ ಸಮಯದಲ್ಲಿ ಯೂಟ್ಯೂಬ್‌ನ ನಂಟು ಹತ್ತಿತು.



ಕಾಸರಗೋಡು, ದಕ್ಷಿಣ ಕನ್ನಡ, ಉಡುಪಿ ಭಾಗದಲ್ಲಿನ ಸಾಂಪ್ರದಾಯಿಕ ಅಡುಗೆಗಳನ್ನು ಸಾಂಪ್ರದಾಯಿಕ ಶೈಲಿಯಲ್ಲಿಯೇ ಪ್ರಸ್ತುತಪಡಿಸುವುದು ಇವರ ವಿಶೇಷ.

ಹಳ್ಳಿ ಮನೆಯಲ್ಲಿ, ಹಳ್ಳಿ ಸೊಗಡನ್ನು ಬಿಂಬಿಸುವ ಪಾತ್ರೆಗಳು, ಒರಳುಕಲ್ಲಿನಲ್ಲಿ ರುಬ್ಬುವ ವಿಧಾನ, ಪ್ರತಿ ರೆಸಿಪಿಯಲ್ಲೂ ಇರುವ ಆರೋಗ್ಯವರ್ಧಕ ಅಂಶಗಳ ವಿವರಣೆ ಗಮನ ಸೆಳೆಯುತ್ತವೆ. ಮಂಗಳೂರಿನ ಗಂಜಿ ಈಗ ಬೆಂಗಳೂರಿನ ಅಡುಗೆ ಮನೆಗಳಲ್ಲೂ ಕಾಣುತ್ತಿರುವುದರಲ್ಲಿ, ಕೇರಳದ ವಿಶೇಷ ತಿಂಡಿ 'ನೈಯಪ್ಪ' ಉತ್ತರ ಕರ್ನಾಟಕದ ಬಾಣಲೆಯಲ್ಲೂ ಸ್ಥಾನ ಪಡೆದಿರುವುದರಲ್ಲಿ ಇವರ ಕೊಡುಗೆಯೂ ಇದೆ.

ದೇಸಿತನದೊಂದಿಗೆ ಆಧುನಿಕ ಸ್ಪರ್ಶ ನೀಡುವ ಸಮೋಸ, ಬಾಳೆಕಾಯಿ ಚಿಪ್ಸ್, ಸ್ವದೇಶಿ ಕೇಕ್, ಹಣ್ಣುಗಳ ಐಸ್‌ಕ್ರೀಮ್, ಬಿಸ್ಕೆಟ್ ರೊಟ್ಟಿ, ಮಂಗಳೂರು ಗೋಳಿಬಜೆ... ತಿನಿಸುಪ್ರಿಯರ ನಾಲಿಗೆಯ ದಾಹ ತಣಿಸಿವೆ.

'ಬಹುತೇಕ ಸಾಂಪ್ರದಾಯಿಕ ಅಡುಗೆಗಳನ್ನು ಹಿರಿಯರಿಂದ ಕೇಳಿ ಕಲಿತು ಮಾಡುತ್ತೇವೆ. ಕೆಲವೊಮ್ಮೆ ಕಸದಿಂದ ರಸಪಾಕ ತಯಾರಿಸಿದ್ದೇವೆ. ಕೆಸುವಿನ ಎಲೆಯ ದಂಟನ್ನು ಬಹುತೇಕರು ಬಿಸಾಡುತ್ತಾರೆ. ನಾವು ಅದರಲ್ಲಿ ಸ್ವಾದಿಷ್ಟ ಪಲ್ಯ ಮಾಡಿದ್ದೇವೆ. ತೆರೆಮರೆಗೆ ಸರಿಯುತ್ತಿರುವ ಸಾಂಪ್ರದಾಯಿಕ ಅಡುಗೆಗಳನ್ನೇ ಹೆಚ್ಚು ಆಸ್ಥೆವಹಿಸಿ ಹೇಳಿಕೊಡುತ್ತೇವೆ. ಆಯಾ ಪ್ರದೇಶದಲ್ಲಿ, ಆಯಾ ಕಾಲಕ್ಕೆ ಜನಪ್ರಿಯವಾದ ತಿನಿಸನ್ನು ತಯಾರಿಸುವವರ ಬಳಿಗೇ ಹೋಗಿ ಅವರಿಂದಲೇ ಅಡುಗೆ ಹೇಳಿಸಿಕೊಡುವ ಪ್ರಯತ್ನವನ್ನೂ ಮಾಡಿದ್ದೇವೆ. ದೇಸಿತನದ ಅಡುಗೆಗಳು ಮರೆಯಾಗಬಾರದು, ಎಲ್ಲರ ಅಡುಗೆ ಮನೆಗಳಲ್ಲೂ ಅವು ತಯಾರಾಗಬೇಕು ಎನ್ನುವುದು ನಮ್ಮ ಕಾಳಜಿ' ಎನ್ನುತ್ತಾ ಮುಗುಳ್ನಗುತ್ತಾರೆ ಸುದರ್ಶನ.

ವರ್ಷದ ಒಂದೆರಡು ತಿಂಗಳಲ್ಲಷ್ಟೇ ಸಿಗುವ ಕಳಲೆ ಅಥವಾ ಕಣಿಲೆಯಿಂದ (ಸುದರ್ಶನ ಅವರ ಮಾತಲ್ಲೇ ಹೇಳುವುದಾದರೆ, ಬಿದಿರಿನ ಚಿಕ್ಕ ಪಿಳ್ಳೆ) ಹತ್ತು ಹಲವು ಬಗೆಯ ತಿಂಡಿಗಳನ್ನು ಅವರು ಮಾಡಬಲ್ಲರು. ಅಷ್ಟೇ ಅಲ್ಲ, ಕಣಿಲೆ ಕಿತ್ತು ತೆಗೆಯುವುದು ಹೇಗೆ ಎಂಬಂತಹ ಸಂಗತಿಗಳನ್ನೂ ಅವರು ರೆಸಿಪಿಯ ಜೊತೆಗೆ ತೋರಿಸಿಕೊಡುತ್ತಾರೆ.

ಮಂಗಳೂರು, ಉಡುಪಿಯ ಪ್ರಸಿದ್ಧ ತಿನಿಸಾದ ಸಾಟು, ತೆಳುವಾದ ಅಕ್ಕಿ ರೊಟ್ಟಿ (ತುಳುವಿನಲ್ಲಿ ಕೋರಿ ರೊಟ್ಟಿ), ಕೃಷ್ಣಾಷ್ಟಮಿಗೆ ತಯಾರಿಸುವ ಅವಲಕ್ಕಿ ಮನೋಹರ, ಗಣೇಶ ಚತುರ್ಥಿಯ ಅಪ್ಪ ಕಜ್ಜಾಯ, ಬಾಳೆಕಾಯಿ ಸೇಮಿಗೆ (ಶಾವಿಗೆ), ನಾಗರಪಂಚಮಿಗೆ ತಯಾರಿಸುವ ಕಾಯಿ ಗೆಣಸಲೆ (ಪಾತೋಳಿ), ಅತಿರಸ (ಕಜ್ಜಾಯ), ಕುಚ್ಚಲಕ್ಕಿಯಲ್ಲಿ ಮಾಡಿದ ಉಬ್ಬು ರೊಟ್ಟಿ, ಗೋಧಿ ಹುಡಿ ತುಕ್ಕುಡಿ, ಇಡ್ಲಿ ಪುಟ್ಟು, ಸಜ್ಜಿಗೆ ರೊಟ್ಟಿ, ಒಗ್ಗರಣೆ ಉಂಡೆ, ದೇವಸ್ಥಾನಗಳಲ್ಲಿ ನೈವೇದ್ಯಕ್ಕೆ ಮಾಡುವ ನೈಪಾಯಸ, ಬಾಳೆಹೂವಿನ ಪಲ್ಯ, ಸಂಜೀರಾ (ಸಿಹಿ ಪೂರಿ), ಕೊಚ್ಚಕ್ಕಿ ಕೋಡುಬಳೆ, ಮೆಣಸಿನ ಸಂಡಿಗೆ, ಸಿಹಿಗೆಣಸಿನ ಹಪ್ಪಳ, ಮರಗೆಣಸು ಹಪ್ಪಳ, ತೊಡೆದೇವು, ಬೂದುಗುಂಬಳ ಪೇಟ, ಕಾಶಿ ಹಲ್ವ, ಬಾಳೆಹಣ್ಣಿನ ಹಲ್ವ, ಅಮೃತ ಫಲ, ಚೇಟ್ಲ ಕೂಟು... ಹೀಗೆ ಕರಾವಳಿ, ಮಲೆನಾಡು ಭಾಗದ ವಿಶಿಷ್ಟ ತಿನಿಸುಗಳ ಘಮ ಕರ್ನಾಟಕದ ಗಡಿಯಷ್ಟೇ ಅಲ್ಲ ಸಾಗರದಾಚೆಗೂ ಪಸರಿಸಿದೆ.

ಸುಮಾ ಬಿ.

ಹಲಸಿನ ಬೀಜದ ಹೋಳಿಗೆ

ಆರೋಗ್ಯದಾಯಕ ಹಲಸಿನಕಾಯಿ, ಹಣ್ಣು, ಸೊಳೆ, ಬೀಜದಿಂದ ಹಲವು ರೆಸಿಪಿಗಳನ್ನು ತಯಾರಿಸಿ ಹಲಸುಪ್ರಿಯರಿಂದ ಸೈ ಅನ್ನಿಸಿಕೊಂಡಿದ್ದಾರೆ ಸುದರ್ಶನ. ಪೌಷ್ಟಿಕಾಂಶಯುಕ್ತ ಹಲಸಿನ ಬೀಜವನ್ನು ಬಹುತೇಕರು ಬಿಸಾಡುವುದೇ ಹೆಚ್ಚು. ಗ್ರಾಮೀಣ ಭಾಗದಲ್ಲಿ ಹೆಚ್ಚೆಂದರೆ ಅದನ್ನು ಕೆಂಡದಲ್ಲಿ ಸುಟ್ಟು ಸವಿಯಬಹುದು. ಆದರೆ ಈ ಬೀಜದಲ್ಲೂ ತರಹೇವಾರಿ ಪಾಕಗಳನ್ನು ತಯಾರಿಸಿದ್ದಾರೆ ಭಟ್ ಸಹೋದರರು. ನಾಲಿಗೆಯ ರುಚಿ ಹೆಚ್ಚಿಸುವ, ತಯಾರಿಕೆಗೆ ಹೆಚ್ಚು ಜನರನ್ನೂ ಸಮಯವನ್ನೂ ಬೇಡುವ ಈ ರೆಸಿಪಿ ತಯಾರಿ ವಿಧಾನ ಇಲ್ಲಿದೆ:

ಬೇಕಾಗುವ ಸಾಮಗ್ರಿ: ಹಲಸಿನ ಬೀಜ, ನೆನೆಸಿಟ್ಟ ಅಕ್ಕಿ, ಬೆಲ್ಲ, ಕೊಬ್ಬರಿ ತುರಿ, ಸ್ವಲ್ಪ ಎಣ್ಣೆ. **ಮಾಡುವ ವಿಧಾನ:** ಹಲಸಿನ ಬೀಜದ ಸಿಪ್ಪೆಯನ್ನು ತೆಗೆಯಬೇಕು. ಬಳಿಕ ಬೀಜದ ಮೇಲಿರುವ ಕೆಂಪು ಪದರವನ್ನು ಯಾವುದಾದರೂ ಒರಟಾದ ಕಲ್ಲಿನ ಮೇಲೆ ಹಾಕಿ ತಿಕ್ಕಿ ತೆಗೆಯಬೇಕು (ಈ ಕೆಲಸ ಹೆಚ್ಚು ಸಮಯವನ್ನು ಬೇಡುವುದರಿಂದ ಹೆಚ್ಚು ಜನ ಕೈಗೂಡಿಸುವುದು ಒಳಿತು). ಪಾತ್ರೆಯಲ್ಲಿ ನೀರು ಹಾಕಿ, ಕುದಿ ಬಂದ ಬಳಿಕ ಬೀಜ ಹಾಕಿ ಬೇಯಲು ಇಡಬೇಕು. ನೆನೆಸಿದ ಅಕ್ಕಿಯನ್ನು ಸ್ವಲ್ಪ ಉಪ್ಪು ಹಾಕಿ ದೋಸೆ ಹಿಟ್ಟಿನ ಹದಕ್ಕೆ ರುಬ್ಬಿಕೊಳ್ಳಬೇಕು. ನಂತರ ಬೆಂದಿರುವ ಬೀಜ ಹಾಗೂ ನೀರು ಬೇರ್ಪಡಿಸಿ, ಬೀಜ ತಣಿಯಲು ಬಿಡಬೇಕು. ಕೊಬ್ಬರಿ, ಬೆಲ್ಲ ಹಾಕಿ ರುಬ್ಬಿಕೊಳ್ಳಬೇಕು. ಅದಕ್ಕೆ ಬೇಯಿಸಿಟ್ಟಿರುವ ಬೀಜ ಸೇರಿಸಿ ರುಬ್ಬಬೇಕು. ಇದಷ್ಟೂ ಬೆರೆತು ಹೂರಣವಾಗುತ್ತದೆ. ಹೂರಣವನ್ನು ಉಂಡೆ ಮಾಡಿ ಎರಡೂ ಬದಿ ಬಾಳೆಯೆಲೆ ಹಾಕಿ ಒತ್ತಬೇಕು. ಅದನ್ನು ಕಡೆದ ಅಕ್ಕಿಹಿಟ್ಟಿನಲ್ಲಿ ಎರಡೂ ಬದಿ ಅದ್ದಿ ಹೆಂಚಿನ ಮೇಲೆ ಸ್ವಲ್ಪ ಎಣ್ಣೆ ಹಾಕಿ ಎರಡೂ ಬದಿ ಬೇಯಿಸಿದರೆ ಹಲಸಿನ ಬೀಜದ ಹೋಳಿಗೆ ಸವಿಯಲು ಸಿದ್ಧ.



ಸುದರ್ಶನ ಬೆದ್ರಡಿ

ಬ್ರೇಕ್‘ಫಾಸ್ಟ್’ ತಯಾರಿಗೆ 10 ಸೂತ್ರ



ಶಾಲೆಗೆ ಹೋಗುವ ಮಕ್ಕಳಿರುವ ಮನೆಗಳಲ್ಲಿ ಬೆಳಗಿನ ತಿಂಡಿ ತಯಾರಿಸುವುದು ಅಮ್ಮಂದಿರಿಗೆ ಒಂದು ಸವಾಲು.

ಶಾಲಾ ಬಸ್ ಬರುವ ವೇಳೆಗೆ ಅಥವಾ ತಮ್ಮದೇ ವಾಹನದಲ್ಲಿ ಅವರನ್ನು ಕರೆದೊಯ್ದು ಬಿಟ್ಟು ಬರುವ ಧಾವಂತದಲ್ಲಿ ಡಬ್ಬಿ ಸಿದ್ಧಗೊಳಿಸಿ ಕಳಿಸುವುದು ಒಂದು ಹರಸಾಹಸವೇ ಆಗಿರುತ್ತದೆ. ಅಷ್ಟೆಲ್ಲ ಮಾಡಿದ ಮೇಲೂ 'ಅಯ್ಯೋ ಸ್ಪೂನ್ ಹಾಕುವುದು ಮರೆತೆ', 'ಚಟ್ನಿ ಡಬ್ಬಿ ಇಡಲೇ ಇಲ್ಲ', 'ಲಂಚ್ ಬ್ಯಾಗ್‌ಗೆ ನ್ಯಾಪ್ಕಿನ್ ಹಾಕಿದೆನೋ ಇಲ್ಲವೋ' ಎಂಬಂತಹ ಗೊಂದಲ, ಆತಂಕದಲ್ಲಿ ಅಮ್ಮಂದಿರ ಬಿ.ಪಿ ಏರದಿದ್ದರೆ ಪವಾಡವೇ ಸರಿ. ಬೆಳಗಿನ ತಿಂಡಿಯನ್ನು ಯೋಜಿಸಿ ಮಾಡುವುದು ಇಂತಹ ಎಷ್ಟೋ ಗೊಣಗಾಟ, ಕಿರಿಕಿರಿಯನ್ನು ತಪ್ಪಿಸಬಲ್ಲದು. ಅದಕ್ಕಾಗಿ ಇಲ್ಲಿವೆ ಒಂದಿಷ್ಟು ಸೂತ್ರಗಳು:

1. ಯಾವ ತಿಂಡಿ ಮಾಡಬೇಕು ಎಂಬುದನ್ನು ಹಿಂದಿನ ದಿನವೇ ನಿರ್ಧರಿಸಿಕೊಳ್ಳಿ. ಕೆಲವರು ಒಂದು ವಾರದ ಮೆನು ಸಿದ್ಧಪಡಿಸಿಕೊಳ್ಳುವುದೂ ಉಂಟು!
2. ನಿಗದಿಪಡಿಸಿಕೊಂಡ ತಿಂಡಿಗೆ ಬೇಕಾದ ಪದಾರ್ಥಗಳು ಮನೆಯಲ್ಲಿ ಇವೆಯೇ ಪರಿಶೀಲಿಸಿಕೊಳ್ಳಿ.
3. ಬೇಕಾದ ಪದಾರ್ಥ ಇಲ್ಲದಿದ್ದರೆ ಹಿಂದಿನ ದಿನವೇ ಬಿಡುವು ಮಾಡಿಕೊಂಡು ಅವುಗಳನ್ನು ತಂದಿಟ್ಟುಕೊಳ್ಳಿ.
4. ತರಕಾರಿ, ಸೊಪ್ಪನ್ನು ಮೊದಲೇ ತೊಳೆದು ಫ್ರಿಜ್‌ನಲ್ಲಿ ಇಡಿ.
5. ಚಪಾತಿ ಅಥವಾ ಪೂರಿ ಮಾಡುವುದಾದರೆ ಹಿಂದಿನ ರಾತ್ರಿಯೇ ಹಿಟ್ಟನ್ನು ಕಲಸಿ ಇಟ್ಟುಕೊಳ್ಳಿ.
6. ಹೆಚ್ಚಲು ಹರಿತವಾದ ಚಾಕು, ಪ್ಯಾಕೆಟ್ ಕತ್ತರಿಸಲು ಕತ್ತರಿ ಕೈಗೆ ಸಿಗುವಂತಿರಲಿ.
7. ಮಕ್ಕಳ ಊಟದ ಡಬ್ಬಿಯು ರಾತ್ರಿಯ ವೇಳೆಗೆ ತೊಳೆದಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಬೆಳಿಗ್ಗೆ ಮುಚ್ಚಳ ಸಿಗುತ್ತಿಲ್ಲ, ಡಬ್ಬಿ ಕಾಣುತ್ತಿಲ್ಲ ಎಂದು ಹುಡುಕಾಡುವುದಕ್ಕೇ ಸಮಯ ಹೋಗಿರುತ್ತದೆ.
8. ಸಿದ್ಧಪಡಿಸಲು ಗಂಟೆಗಟ್ಟಲೆ ತೆಗೆದುಕೊಳ್ಳುವ ತಿಂಡಿಗಳನ್ನು ವಾರದ ರಜಾದಿನಕ್ಕೆ ಮುಂದೂಡಿ, ಅಲ್ಪ ಸಮಯದಲ್ಲಿ ತಯಾರಾಗುವ ತಿಂಡಿಗಳನ್ನೇ ಆಯ್ದುಕೊಳ್ಳುವುದು ಒಳ್ಳೆಯದು.
9. ಶಾರ್ಟ್ ಬ್ರೇಕ್‌ಗೆ ಜಂಕ್ ಫುಡ್ ಮೊರೆ ಹೋಗದಿರಿ. ಆದಷ್ಟೂ ಮನೆಯಲ್ಲಿ ಮಾಡಿದ ಕುರುಕಲು ತಿಂಡಿಗಳನ್ನೇ ಕೊಡಿ. ಜೊತೆಗೆ ಸಲಾಡ್, ಕೋಸಂಬರಿಯಂತಹ ತಿನಿಸುಗಳನ್ನು ಅಭ್ಯಾಸ ಮಾಡಿಸುವುದು ತುಂಬಾ ಒಳ್ಳೆಯದು.
10. ಬೆಳಿಗ್ಗೆ ಬೇಗ ಏಳದಿದ್ದರೆ ಏನೆಲ್ಲಾ ಪೂರ್ವಸಿದ್ಧತೆ ಇದ್ದರೂ ಪ್ರಯೋಜನ ಇರದು, ಧಾವಂತ ತಪ್ಪದು!

ಭೂಮಿಕಾಗೆ ಬರಹಗಳನ್ನು ಕಳುಹಿಸಬಹುದಾದ ಇ–ಮೇಲ್ ಐ.ಡಿ. bhoomika@prajavani.co.in

ಚಿಟಿಕೆ ಸುದ್ದಿ


‘ಕೈ’ ಸರ್ಕಾರದಲ್ಲಿ ಡೀಲರ್‌ಗಳ ನೆಟ್‌ವರ್ಕ್’


ನಿಖಿಲ್

ರಾಯಚೂರು: ‘ರಾಜ್ಯದ ಕಾಂಗ್ರೆಸ್ ಸರ್ಕಾರದಲ್ಲಿ ಡೀಲರ್‌ಗಳ ನೆಟ್‌ವರ್ಕ್ ಇದೆ. ಮಂತ್ರಿಗಳು ಸೇರಿದಂತೆ ಹಲವರು ಪಾಲುದಾರರಾಗಿದ್ದಾರೆ’ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪಿಸಿದರು.

‘ರಾಜ್ಯದಲ್ಲಿ ಸರ್ಕಾರದ ಯೋಜನೆಯ ಲಾಭ ಪಡೆದುಕೊಳ್ಳಲು ಬ್ರೋಕರ್‌ಗಳನ್ನೇ ಅವಲಂಬಿಸಬೇಕಾಗಿದೆ. ನೇರವಾಗಿ ಯಾವುದೇ ಕೆಲಸ ಆಗುವುದಿಲ್ಲ’ ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

‘ಶಾಸಕರ ಹಕ್ಕು ಕಸಿದುಕೊಂಡ ರಾಜ್ಯ ಸರ್ಕಾರ’


ದೇವೇಗೌಡ

ದೇವದುರ್ಗ: (ರಾಯಚೂರು ಜಿಲ್ಲೆ) ‘ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆ ಕೊಟ್ಟು ಶಾಸಕರ ಹಕ್ಕುಗಳನ್ನು ಕಸಿದುಕೊಂಡಿದೆ. ಹಾಗಾಗಿ ಸ್ವಪಕ್ಷೀಯ ಶಾಸಕರೇ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದಾರೆ’ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಆರೋಪಿಸಿದರು.

ದೇವದುರ್ಗದಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಶಾಸಕರಿಗೆ ಶಾಸನಬದ್ಧ ಅನುದಾನವೂ ದೊರೆಯುತ್ತಿಲ್ಲ. ಕ್ಷೇತ್ರದ ಜನರಿಗೆ ಉತ್ತರಿಸದೆ ರಾಜ್ಯದ ಶಾಸಕರು ಅಸಹಾಯಕರಾಗಿದ್ದಾರೆ’ ಎಂದು ದೂರಿದರು.

‘ಕಾಂಗ್ರೆಸ್ ವೋಟ್ ಬ್ಯಾಂಕ್ ರಾಜಕಾರಣ ಮಾಡುತ್ತಿದೆ. ಅಲ್ಪಸಂಖ್ಯಾತರ ಮುಸ್ಲಿಮರಿಗೆ ಶೇ 4 ಮೀಸಲಾತಿ ಕಲ್ಪಿಸಿದ್ದು ನಾನು. ಜಾತ್ಯತೀತ ಬಗ್ಗೆ ಮಾತನಾಡುವ ನೈತಿಕತೆ ಕಾಂಗ್ರೆಸ್ ಇಲ್ಲ. ಹಿಮಾಚಲ ಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಜನರ ವಿಶ್ವಾಸ ಕಳೆದುಕೊಂಡಿದೆ’ ಎಂದು ಹೇಳಿದರು.

‘ಬಿಜೆಪಿ ಕೆಟ್ಟ ಆಡಳಿತದಿಂದ ಕಾಂಗ್ರೆಸ್‌ಗೆ ಸಮಸ್ಯೆ’

ಕೊಪ್ಪಳ: ‘ಹಿಂದೆ ಆಡಳಿತ ನಡೆಸಿದ ಬಿಜೆಪಿ ಬೇಕಾಬಿಟ್ಟಿಯಾಗಿ ಯೋಜನೆಗಳನ್ನು ಘೋಷಣೆ ಮಾಡಿ ಹಣ ಮೀಸಲಿಡದೇ ಹೋಗಿದ್ದರಿಂದ ಅದರ ಭಾರ ನಮ್ಮ ಮೇಲೆ ಬಿದ್ದಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಕ್ಕೆ ಬಂದ ಬಳಿಕ ಹಿಂದಿನ ಸರ್ಕಾರದ ಯೋಜನೆಗಳಿಗೆ ಅನುದಾನ ನೀಡಿ ಸರಿದೂಗಿಸಿದ್ದಾರೆ’ ಎಂದು ಸಂಸದ ರಾಜಶೇಖರ ಹಿಟ್ನಾಳ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಸಿದ್ದರಾಮಯ್ಯ 2013ರಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಕೇಳಿದ್ದಕ್ಕಿಂತಲೂ ಹೆಚ್ಚು ಯಥೇಚ್ಛವಾಗಿ ಅನುದಾನ ಕೊಟ್ಟಿದ್ದಾರೆ. ಈಗಲೂ ಗ್ಯಾರಂಟಿ ಯೋಜನೆಗಳ ಮೂಲಕ ಜನರ ಸಬಲೀಕರಣಕ್ಕೆ ಕ್ರಮ ವಹಿಸಿದ್ದಾರೆ. ಬಿಜೆಪಿ ಮಾಡಿದ ಯಡವಟ್ಟಿನಿಂದ ಈಗಿನ ಅವಧಿಯಲ್ಲಿ ಮೊದಲಿನ ಹಾಗೆ ಅಭಿವೃದ್ಧಿ ಕೆಲಸಕ್ಕೆ ಹಣ ಸಿಗುವುದು ವಿಳಂಬವಾಗುತ್ತಿದೆ’ ಎಂದರು.

ಮತ್ತೊಂದು ಹುಲಿ ಕಳೇಬರ ಪತ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಮಲೆ ಮಹದೇಶ್ವರ ಅರಣ್ಯದಲ್ಲಿ ಐದು ಹುಲಿಗಳ ಸಾವಿನ ಬೆನ್ನಲ್ಲೇ ಗುಂಡ್ಲುಪೇಟೆ ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ರೆ ಅರಣ್ಯದಲ್ಲಿ 4 ರಿಂದ 5 ವರ್ಷದ ಹೆಣ್ಣು ಹುಲಿಯ ಕಳೇಬರ ಪತ್ತೆಯಾಗಿದೆ.

‘ಶುಕ್ರವಾರ ಸಂಜೆ ಗಸ್ತಿನಲ್ಲಿದ್ದ ಸಿಬ್ಬಂದಿಗೆ ಮೃತದೇಹ ಕಂಡುಬಂತು. ಸಹಜವಾಗಿ ಮೃತಪಟ್ಟಿದೆ ಎಂದು ಮೇಲ್ನೋಟಕ್ಕೆ ಗೊತ್ತಾಗಿದೆ’ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಹಿಂದುಳಿದ ವರ್ಗಗಳ ಆಯೋಗಕ್ಕೆ ಐವರ ನೇಮಕ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಐವರು ಸದಸ್ಯರನ್ನು ನಾಮನಿರ್ದೇಶನ ಮಾಡಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ.

ಮೈಸೂರಿನ ವಕೀಲರಾದ ಶಿವಣ್ಣ ಗೌಡ, ಕಲಬುರಗಿ ವಕೀಲ ಚಂದ್ರಪ್ಪ, ಧಾರವಾಡದ ನಿವೃತ್ತ ಪ್ರಾಂಶುಪಾಲ ಸಿ.ಎಂ. ಕುಂದಗೋಳ, ನಿವೃತ್ತ ಐಎಫ್‌ಎಸ್ ಅಧಿಕಾರಿ ಜಿ.ಎನ್. ಶ್ರೀಕಂಠಯ್ಯ, ಮಂಗಳೂರಿನ ಪ್ರತಿಭಾ ಕುಳಾಯಿ ಅವರನ್ನು ನೇಮಕ ಮಾಡಲಾಗಿದೆ.

ಆಯೋಗದ ಅಧ್ಯಕ್ಷರನ್ನಾಗಿ ಮಾಜಿ ಅಡ್ವೊಕೇಟ್ ಜನರಲ್ ಮಧುಸೂದನ್ ಆರ್. ನಾಯಕ್ ಅವರನ್ನು ನೇಮಿಸಿ ಸರ್ಕಾರ ಜನವರಿ 31ರಂದು ಆದೇಶ ಹೊರಡಿಸಿತ್ತು.

ಪ್ರತಿಮೆಗೆ ಮಾತ್ರವೇ ಟೆಂಡರ್: ಎ.ಜಿ

‘ಕಾವೇರಿ ಆರತಿ’ ಪ್ರಶ್ನಿಸಿದ ಪಿಐಎಲ್ ವಿಚಾರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಕೃಷ್ಣರಾಜ ಸಾಗರ (ಕೆಆರ್‌ಎಸ್) ಅಣೆಕಟ್ಟೆ ಬಳಿ ಕಾವೇರಿ ಪ್ರತಿಮೆ ಸ್ಥಾಪನೆಗೆ ಮಾತ್ರ ಟೆಂಡರ್ ನೀಡಿದ್ದು ಪ್ರತಿಮೆ ಸ್ಥಾಪನೆಗೆ ಈಗಾಗಲೇ ತಾಂತ್ರಿಕ ತಜ್ಞರ ಅನುಮತಿ ಪಡೆಯಲಾಗಿದೆ’ ಎಂದು ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದರು.

‘ಗಂಗಾ ಆರತಿ’ ಮಾದರಿಯಲ್ಲಿ ‘ಕಾವೇರಿ ಆರತಿ’ ಆಯೋಜಿಸುವ ರಾಜ್ಯ ಸರ್ಕಾರದ ತೀರ್ಮಾನ ಪ್ರಶ್ನಿಸಿ ರೈತ ಸಂಘದ ನಾಯಕಿ ಮಂಡ್ಯ ಜಿಲ್ಲೆಯ ಸುನಂದಾ ಜಯರಾಂ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ್ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಂ.ಶಿವಪ್ರಕಾಶ್, ‘ಕೆಆರ್‌ಎಸ್ ಬಳಿ 120 ಅಡಿ ಎತ್ತರದ ಕಾವೇರಿ ಪ್ರತಿಮೆ ಸ್ಥಾಪಿಸಲಾಗುತ್ತಿದೆ. ಈ ಕುರಿತಂತೆ ನಡೆಯುತ್ತಿರುವ ಕಾಮಗಾರಿ ಚಟುವಟಿಕೆಗಳ ಫೋಟೊಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ’ ಎಂದು ವಿವರಿಸಿದರು.

ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು, ‘ಕಾವೇರಿ ಪ್ರತಿಮೆಗೆ ಮಾತ್ರವೇ ಟೆಂಡರ್ ನೀಡಲಾಗಿದೆ. ಮನರಂಜನಾ ಪಾರ್ಕ್‌ಗೆ ಇನ್ನೂ ಟೆಂಡರ್ ಪೂರ್ಣಗೊಂಡಿಲ್ಲ’ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಕಾಮಗಾರಿ ಚಟುವಟಿಕೆ ನಡೆಸುವ ಮೂಲಕ ನೆಲ ಅಗೆಯುವುದರಿಂದ ಜಲಾಶಯಕ್ಕೆ ಹಾನಿಯಾಗುವುದಿಲ್ಲವೇ? ಮನರಂಜನಾ ಪಾರ್ಕ್ ಕಾಮಗಾರಿಗೆ ತಾಂತ್ರಿಕ ತಜ್ಞರ ಅನುಮತಿ ಪಡೆಯಲಾಗಿದೆಯೇ? ಕಾವೇರಿ ಪ್ರತಿಮೆ ಸ್ಥಾಪಿಸುವಾಗ ತಜ್ಞರ ಸಲಹೆ ಪಾಲನೆ ಮಾಡಲಾಗಿದೆಯೇ? ಜಲಾಶಯ ಸುರಕ್ಷಾ ಸಮಿತಿಯ ಅನುಮತಿಯನ್ನು ಏಕೆ ಪಡೆದಿಲ್ಲ ಎಂಬ ಅಂಶಗಳ ಬಗ್ಗೆ ಎರಡು ವಾರಗಳಲ್ಲಿ ಪ್ರಮಾಣ ಪತ್ರ ಸಲ್ಲಿಸಿ’ ಎಂದು ರಾಜ್ಯ ಸರ್ಕಾರ ಮತ್ತು ಕಾವೇರಿ ನೀರಾವರಿ ನಿಗಮಕ್ಕೆ ನಿರ್ದೇಶಿಸಿತು.

ಅಂತೆಯೇ, ಕೇಂದ್ರ ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ, ರಾಷ್ಟ್ರೀಯ ಅಣೆಕಟ್ಟು ಸುರಕ್ಷಾ ಪ್ರಾಧಿಕಾರದ ಅಧ್ಯಕ್ಷ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕಾವೇರಿ ನೀರಾವರಿ ನಿಗಮದ ಎಂ.ಡಿ, ಜಿಲ್ಲಾಡಳಿತ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಮತ್ತೊಂದು ಪಿಐಎಲ್: ಕೆಆರ್‌ಎಸ್ ಅಣೆಕಟ್ಟೆ ಸುತ್ತಮುತ್ತಲ ಪ್ರದೇಶದ 198 ಎಕರೆ ಕೃಷಿ ಜಮೀನು ವಶಪಡಿಸಿಕೊಂಡು, ಅಲ್ಲಿ ₹2,615 ಕೋಟಿಗೂ ಹೆಚ್ಚಿನ ವೆಚ್ಚದಲ್ಲಿ ಅಮ್ಯೂಸ್ ಮೆಂಟ್ ಮತ್ತು ಥೀಮ್ ಪಾರ್ಕ್ (ಮನರಂಜನೆ ಉದ್ಯಾನ) ನಿರ್ಮಿಸುವ ಉದ್ದೇಶದಿಂದ ಕರೆಯ ಲಾಗಿರುವ ಟೆಂಡರ್ ಪ್ರಶ್ನಿಸಿ ಮಂಡ್ಯ ತಾಲ್ಲೂಕಿನ ಗೋಪಾಲಪುರ ಗ್ರಾಮದ ಕೃಷಿಕ ಕೆ.ಬೋರಯ್ಯ ಸೇರಿದಂತೆ ಒಟ್ಟು ಐವರು ಮತ್ತೊಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ.

ಈ ಅರ್ಜಿಗೆ ಸಂಬಂಧಿಸಿದಂತೆ ಇದೇ ನ್ಯಾಯಪೀಠ ಈಗಾಗಲೇ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೆ ಆದೇಶಿಸಿದೆ.

ಈ ಎರಡೂ ಪ್ರತ್ಯೇಕ ಪ್ರಕರಣಗಳನ್ನು ಒಟ್ಟಿಗೇ ಕೈಗೆತ್ತಿಕೊಂಡಿರುವ ನ್ಯಾಯಪೀಠ ವಿಚಾರಣೆಯನ್ನು ಜುಲೈ 27ಕ್ಕೆ ಮುಂದೂಡಿದೆ.

ಬೊಮ್ಮಾಯಿ ವಿರುದ್ಧದ ಪ್ರಕರಣ ರದ್ದು

ವಕ್ಫ್ ಆಸ್ತಿ ವಿಚಾರವಾಗಿ ಎದ್ದಿದ್ದ ವಿವಾದದ ಹಿನ್ನೆಲೆಯಲ್ಲಿ ಪ್ರಚೋದನಕಾರಿ ಹೇಳಿಕೆ ನೀಡಿದ ಹಾಗೂ ಮುಸ್ಲಿಂ ಸಮುದಾಯವನ್ನು ಕೆರಳಿಸುವ ರೀತಿಯಲ್ಲಿ ಭಾಷಣ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಸಂಸದ ಬಸವರಾಜ ಬೊಮ್ಮಾಯಿ ವಿರುದ್ಧ ಹಾವೇರಿ ಜಿಲ್ಲೆಯ ಸವಣೂರು ಮತ್ತು ಶಿಗ್ಗಾವಿ ಠಾಣೆಗಳಲ್ಲಿ ದಾಖಲಾಗಿದ್ದ ಎರಡು ಪ್ರತ್ಯೇಕ ಕ್ರಿಮಿನಲ್ ಪ್ರಕರಣಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

‘ಸವಣೂರಿನಲ್ಲಿ ನಿಂತು ಎಲ್ಲೇ ಕಲ್ಲೆಸದರೂ ಅದು ಬಿದ್ದ ಜಾಗ ವಕ್ಫ್ ಆಸ್ತಿ ಎನ್ನುವಂತಾಗಿದೆ ಎಂಬ ಹೇಳಿಕೆ ಆಧರಿಸಿ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 196(1)(ಎ) ಅಡಿ ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಬಸವರಾಜ ಬೊಮ್ಮಾಯಿ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಬೊಮ್ಮಾಯಿ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, ‘ಎಸೆದ ಕಲ್ಲು ಬೀಳುವ ಕಡೆಯೆಲ್ಲೆಲ್ಲಾ ವಕ್ಫ್ ಆಸ್ತಿ ಇದೆ ಎಂದಷ್ಟೇ ಬೊಮ್ಮಾಯಿ ಹೇಳಿದ್ದಾರೆ. ಬಾಲ ಬಿಚ್ಚಿದರೆ... ಎಂಬ ಉಲ್ಲೇಖ ಇಲ್ಲ. ಅವರೊಬ್ಬ ಮಾಜಿ ಮುಖ್ಯಮಂತ್ರಿ. ಪ್ರಕರಣಗಳನ್ನು ಈ ರೀತಿ ಮುಂದುವರಿಸುವುದು ಸೂಕ್ತವಲ್ಲ’ ಎಂದರು.

ಇದಕ್ಕೆ ಹೆಚ್ಚುವರಿ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ದೂರಿನಲ್ಲಿ ಅಪರಾಧದ ಅಂಶಗಳಿವೆ. ಹೀಗಾಗಿ, ಈ ಹಂತದಲ್ಲಿ ನ್ಯಾಯಾಲಯ ಮಧ್ಯಪ್ರವೇಶ ಮಾಡಬಾರದು’ ಎಂದು ಮನವಿ ಮಾಡಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಕಲ್ಲೆಸೆದ ಕಡೆಯಲ್ಲಾ ವಕ್ಫ್ ಆಸ್ತಿ... ಎಂಬ ಹೇಳಿಕೆಯೊಂದನ್ನು ಹೊರತುಪಡಿಸಿದರೆ ಅಪರಾಧವಾಗುವಂತಹ ಗುರುತರ ಅಂಶಗಳಿಲ್ಲ. ಹೀಗಾಗಿ, ಅರ್ಜಿದಾರರ ವಿರುದ್ಧ ನ್ಯಾಯಿಕ ಪ್ರಕ್ರಿಯೆ ಮುಂದುವರಿಸುವುದು ಕಾನೂನಿನ ದುರ್ಬಳಕೆಯಾಗಲಿದೆ’ ಎಂಬ ಅಭಿಪ್ರಾಯದೊಂದಿಗೆ ದೂರು ವಜಾಗೊಳಿಸಿ ಆದೇಶಿಸಿತು.

‘ವಿಚಾರಣೆ ವಿಳಂಬಕ್ಕೆ ಪ್ರಜ್ವಲ್ ಕಾರಣ’

‘ಮನೆ ಕೆಲಸದಾಕೆ ಮೇಲೆ ಅತ್ಯಾಚಾರ ಎಸಗಿದ ಆರೋಪದ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆ ವಿಳಂಬವಾಗಲು ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಪ್ರಜ್ವಲ್ ರೇವಣ್ಣ ನೇರ ಕಾರಣರಾಗಿದ್ದಾರೆ’ ಎಂದು ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಹೈಕೋರ್ಟ್‌ಗೆ ಅರುಹಿದರು.

ನ್ಯಾಯಾಂಗ ಬಂಧನದಲ್ಲಿರುವ ಆರೋಪಿ ಪ್ರಜ್ವಲ್ ರೇವಣ್ಣ ಅವರು, ಎರಡನೇ ಬಾರಿಗೆ ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಆದ ಪದಾಂಕಿತ ಹಿರಿಯ ವಕೀಲ ಕೆ.ರವಿವರ್ಮ ಕುಮಾರ್, ‘ಪ್ರಕರಣವನ್ನು ವಿಚಾರಣೆಗೆ ಅಣಿಗೊಳಿಸಲು ಪ್ರಜ್ವಲ್ ನ್ಯಾಯಾಲಯಕ್ಕೆ ಅವಕಾಶವನ್ನೇ ನೀಡಿಲ್ಲ. ಅವರ ಈ ನಡತೆಯಿಂದಾಗಿ ವಿಚಾರಣೆ ಮಂದಗತಿಯಲ್ಲಿ ಸಾಗುತ್ತಿದೆ’ ಎಂದು ಆರೋಪಿಸಿದರು.

‘ಅಷ್ಟಕ್ಕೂ, ವಿಚಾರಣಾ ನ್ಯಾಯಾಲಯ ಜಾಮೀನು ಅರ್ಜಿ ತಿರಸ್ಕರಿಸಿದ ಬಳಿಕವಷ್ಟೇ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕು. ಆದರೆ, ಪ್ರಜ್ವಲ್ ಈ ಪ್ರಕ್ರಿಯೆ ಅನುಸರಿಸದೇ ನೇರವಾಗಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಇದಕ್ಕೆ ಯಾವುದೇ ವಿಶೇಷ ಕಾರಣ ನೀಡಿಲ್ಲ. ಹೀಗಾಗಿ, ಈ ಹಂತದಲ್ಲಿ ಆರೋಪಿಗೆ ಜಾಮೀನು ನೀಡಬಾರದು’ ಎಂದು ಪ್ರತಿಪಾದಿಸಿದರು. ವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಜುಲೈ 2ಕ್ಕೆ ಮುಂದೂಡಿದೆ.



ಮಲ್ಲೇಶ್ವರದಲ್ಲಿರುವ ಬಿಎಚ್‌ಇಎಲ್ ಆವರಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ನಡೆದ ಕಾರ್ಯಕ್ರಮದಲ್ಲಿ ಬಿಎಚ್‌ಇಎಲ್ ಪ್ರಧಾನ ವ್ಯವಸ್ಥಾಪಕ ಮತ್ತು ಮುಖ್ಯಸ್ಥ ರಮೇಶ್ ಕುಮಾರ್ ಎನ್. ಅವರು ಸಚಿವ ಪ್ರಿಯಾಂಕ್ ಖರ್ಗೆಯವರಿಗೆ ಶುಭ ಹಾರೈಸಿದರು. ಕರ್ನಾಟಕ ಶೋಷಿತ ಸಮುದಾಯಗಳ ಒಕ್ಕೂಟದ ಸಂಚಾಲಕ ಮಾವಳ್ಳಿ ಶಂಕರ್ ಭಾಗವಹಿಸಿದ್ದರು

ಕಸಾಪ ಸರ್ವಸದಸ್ಯರ ಸಂಡೂರು ಸಭೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಇದೇ 29ಕ್ಕೆ ನಿಗದಿಯಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಸರ್ವ ಸದಸ್ಯರ ಸಭೆಯನ್ನು ರದ್ದುಪಡಿಸಿ ಸಹಕಾರ ಇಲಾಖೆ ಆದೇಶವನ್ನು ಹೊರಡಿಸಿದೆ.

ಈ ಸಭೆಗೆ ಗೊತ್ತುಪಡಿಸಿದ ಸ್ಥಳವು ಸೂಕ್ತವಾಗಿಲ್ಲ. ಪರಿಷತ್ತಿನ ಸರ್ವಸದಸ್ಯರ ಹಿತದೃಷ್ಟಿಯಿಂದ ಈ ಸಭೆಯನ್ನು ರದ್ದುಪಡಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳ ಸದಸ್ಯರು ಭಾಗವಹಿಸಲು ಅನುಕೂಲವಾಗುವಂತೆ, ಎಲ್ಲ ರೀತಿಯ ಸೌಲಭ್ಯಗಳನ್ನು ಹೊಂದಿರುವ ಸ್ಥಳದಲ್ಲಿ ಸಭೆ ನಡೆಸಬೇಕು ಎಂದು ಸೂಚಿಸಲಾಗಿದೆ.

ಈ ಸಭೆಯನ್ನು ರದ್ದುಪಡಿಸುವಂತೆ ಜಾಣಗೆರೆ ವೆಂಕಟರಾಮಯ್ಯ, ಡಾ.ವಸುಂಧರಾ ಭೂಪತಿ ಹಾಗೂ ಇತರರು ಸಹಕಾರ ಇಲಾಖೆಗೆ ಮನವಿ ಮಾಡಿದ್ದರು. ‘ಪರಿಷತ್ತಿನ ಲೆಕ್ಕಪತ್ರಕ್ಕೆ ವಾಮಮಾರ್ಗದ ಮೂಲಕ ಅನುಮೋದನೆ ಪಡೆದುಕೊಳ್ಳಲು ಕಸಾಪ ಅಧ್ಯಕ್ಷರು ಪ್ರಯತ್ನಿಸುತ್ತಿದ್ದಾರೆ. ಈ ಸಭೆಯ ಬಗ್ಗೆ ಆಜೀವ ಸದಸ್ಯರಿಗೆ ನೋಟಿಸ್ ಕೂಡ ನೀಡಿಲ್ಲ. ಮೂಲ ಸೌಕರ್ಯ ಇಲ್ಲದ ಸ್ಥಳದಲ್ಲಿ ಈ ಸಭೆ ನಡೆಸುತ್ತಿದ್ದು, ಪರಿಷತ್ತಿನ ಬೈ-ಲಾಕ್ಕೆ ವಾಮ ಮಾರ್ಗದಲ್ಲಿ ತಿದ್ದುಪಡಿಗೆ ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ಈ ಸಭೆಯನ್ನು ಮೂಲಸೌಕರ್ಯ ಇರುವ ಪ್ರದೇಶದಲ್ಲಿ ನಡೆಸಬೇಕು’ ಎಂದು ಮನವಿ ಮಾಡಿದ್ದರು. ಈ ಬಗ್ಗೆ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ಇತರರು ಕೂಡ ದೂರು ನೀಡಿ, ಕಸಾಪ ಅಧ್ಯಕ್ಷರ ನಡೆ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು.

ಸಂಡೂರು ಸಭೆ ನಡೆಸಲು ಯೋಗ್ಯವಾದ ಸ್ಥಳವಲ್ಲ ಎಂದು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಅವರು ತಾಲ್ಲೂಕು ದಂಡಾಧಿಕಾರಿಗೆ ವರದಿ ಸಲ್ಲಿಸಿದ್ದರು. ಈ ವರದಿ ಆಧಾರದಲ್ಲಿ ಸಭೆಗೆ ಅವಕಾಶ ನೀಡದಂತೆ ಜಿಲ್ಲಾಧಿಕಾರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವರದಿ ಸಲ್ಲಿಸಿದ್ದರು



ಬೆಂಗಳೂರಿನಲ್ಲಿ ಶುಕ್ರವಾರ ನಡೆದ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಕಾರ್ಯಕ್ರಮದಲ್ಲಿ ‘ನಾಡಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ’ಯನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಪಿ.ಕೆ.ಎಂ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ವ್ಯವಸ್ಥಾಪಕ ನಿರ್ದೇಶಕ ಹರಿ ಮರಾರ್ ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಕೌಶಾಲ್ ವರ್ಮಾ ಅವರಿಗೆ ಪ್ರದಾನ ಮಾಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಅಧಿಸೂಚನೆ ರದ್ದತಿಗೆ ಅಹೋರಾತ್ರಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿ ವ್ಯಾಪ್ತಿಯಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಹೊರಡಿಸಿರುವ ಅಂತಿಮ ಅಧಿಸೂಚನೆ ರದ್ದುಪಡಿಸುವಂತೆ ಆಗ್ರಹಿಸಿ ಸಂಯುಕ್ತ ಹೋರಾಟ–ಕರ್ನಾಟಕ ನೇತೃತ್ವದಲ್ಲಿ ರೈತರು ಶುಕ್ರವಾರದಿಂದ ಅಹೋರಾತ್ರಿ ಧರಣಿ ಆರಂಭಿಸಿದ್ದಾರೆ.



ಭೂಸ್ವಾಧೀನಕ್ಕೆ ಸಂಬಂಧಿಸಿದ ಅಂತಿಮ ಅಧಿಸೂಚನೆ ರದ್ದುಪಡಿಸುವಂತೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸಂಯುಕ್ತ ಹೋರಾಟ–ಕರ್ನಾಟಕದ ನೇತೃತ್ವದಲ್ಲಿ ರೈತರು ಅಹೋರಾತ್ರಿ ಧರಣಿ ಆರಂಭಿಸಿದ್ದಾರೆ –ಪ್ರಜಾವಾಣಿ ಚಿತ್ರ

ಚನ್ನರಾಯಪಟ್ಟಣ ಸೇರಿದಂತೆ 13 ಹಳ್ಳಿಗಳ 1,777 ಫಲವತ್ತಾದ ಜಮೀನನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿ ಹೆಸರಿನಲ್ಲಿ ಭೂ ಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ. ರೈತರ ಒಪ್ಪಿಗೆ ಇಲ್ಲದಿದ್ದರೂ ಸರ್ಕಾರ ಪ್ರಭಾವಿಗಳ ಒತ್ತಡಕ್ಕೆ ಮಣಿದು ಜಮೀನು ಕಸಿಯಲು ಮುಂದಾಗಿದೆ ಎಂದು ಪ್ರತಿಭಟನಕಾರರು ದೂರಿದರು.

ಚನ್ನರಾಯಪಟ್ಟಣ ಹೋಬಳಿಯ ಚನ್ನರಾಯಪಟ್ಟಣ, ಗೋಕರೆ ಬಚ್ಚೇನಹಳ್ಳಿ, ಹಾಡ್ಯಳ, ಮಟ್ಟಬಾರ್ಲು, ಪಾಳ್ಯ, ಚೀಮಾಚನಹಳ್ಳಿ, ಪೋಲನಹಳ್ಳಿ, ಹರಳೂರು, ನಲ್ಲಪ್ಪನಹಳ್ಳಿ, ಮುದ್ದೇನಹಳ್ಳಿ, ಮಲ್ಲೇಪುರ ಮತ್ತು ನಲ್ಲೂರಿನಲ್ಲಿ ಭೂ ಸ್ವಾಧೀನಕ್ಕೆ ಹೊರಡಿಸಿರುವ ಅಂತಿಮ ಅಧಿಸೂಚನೆಯನ್ನು ಒಂದು ವಾರದೊಳಗೆ ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

‘ಕಾರ್ಪೊರೇಟ್ ಕಂಪನಿಗಳ ಪರ ನಿಲ್ಲುವುದನ್ನು ಬಿಟ್ಟು, ಕೃಷಿ ಭೂಮಿಯನ್ನು ಉಳಿಸಿಕೊಡಬೇಕು’ ಎಂದು ಪತ್ರಕರ್ತ ಇಂಧೂದರ ಹೊನ್ನಾಪುರ ಮನವಿ ಮಾಡಿದರು. ಧರಣಿಯಲ್ಲಿ ಹೋರಾಟಗಾರರಾದ ನೂರ್ ಶ್ರೀಧರ್, ವಿ.ನಾಗರಾಜ. ಎಸ್. ವರಲಕ್ಷ್ಮೀ, ಅಪ್ಪಣ್ಣ, ಸಿದ್ದನಗೌಡ ಪಾಟೀಲ್, ಟಿ.ಯಶವಂತ, ಪ್ರಭಾ ಎನ್, ಡಿ.ಎಚ್.ಪೂಜಾರ್, ಕುಮಾರ್ ಸಮತಳ ಹಾಗೂ ಚನ್ನರಾಯಪಟ್ಟಣ ಹೋಬಳಿ ವ್ಯಾಪ್ತಿಯ 13 ಹಳ್ಳಿಗಳ ನೂರಾರು ರೈತರು ಭಾಗವಹಿಸಿದ್ದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನೇತೃತ್ವದಲ್ಲಿ ಭಿನ್ನರು, ತಟಸ್ಥರ ಎರಡನೇ ಸಭೆ

ಬಿಜೆಪಿ: ‘ಸಾಮೂಹಿಕ ನಾಯಕತ್ವ’ ಮಂತ್ರ ಜಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿನ ಆಂತರಿಕ ಸಮಸ್ಯೆಗಳನ್ನು ತಿಳಿಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಶುಕ್ರವಾರ ಕರೆದಿದ್ದ ತಟಸ್ಥ ಮತ್ತು ಭಿನ್ನರ ಬಣದ ನಾಯಕರ ಸಭೆಯಲ್ಲಿ ‘ಸಾಮೂಹಿಕ ನಾಯಕತ್ವ’ದಲ್ಲಿ ಹೋರಾಟ ನಡೆಸುವ ತೀರ್ಮಾನ ತೆಗೆದುಕೊಳ್ಳಲಾಯಿತು.

‘ಪಕ್ಷದಲ್ಲಿ ಅನುಭವಿಗಳು, ಹಿರಿಯರು, ಶಕ್ತಿಶಾಲಿ ಯುವ ನಾಯಕರ ಪಡೆಯೇ ಇದೆ. ಸಾಮೂಹಿಕ ನಾಯಕತ್ವದಲ್ಲಿ ಮುನ್ನಡೆದಾಗ, ಬಿಜೆಪಿಯನ್ನು ಯಾರೂ ಅಲುಗಾಡಿಸಲು ಸಾಧ್ಯವಿಲ್ಲ. ಇದೇ ನಮ್ಮ ಶಕ್ತಿ ಮತ್ತು ಪರಮ ಉದ್ದೇಶವೂ ಆಗಬೇಕು ಎಂಬ ತೀರ್ಮಾನಕ್ಕೆ ಬರಲಾಯಿತು’ ಎಂದು ಮೂಲಗಳು ತಿಳಿಸಿವೆ.

ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರ ಮನೆಯಲ್ಲಿ ನಡೆದ ಈ ಸಭೆಯಲ್ಲಿ ಬಿ.ವೈ.ವಿಜಯೇಂದ್ರ, ಅರವಿಂದ ಲಿಂಬಾವಳಿ, ಸುನಿಲ್ ಕುಮಾರ್, ಡಿ.ವಿ.ಸದಾನಂದಗೌಡ, ಗೋವಿಂದ ಕಾರಜೋಳ, ಸಿ.ಟಿ.ರವಿ, ಎನ್.ರವಿಕುಮಾರ್ ಮತ್ತು ಇತರರು ಭಾಗವಹಿಸಿದ್ದರು.

ಪಕ್ಷದ ವರಿಷ್ಠರು ಮತ್ತು ಸಂಘದ ಪ್ರಮುಖರ ಸೂಚನೆಯ ಮೇರೆಗೆ ನಾಯಕರ ಮಧ್ಯೆ ಇರುವ ಭಿನ್ನಾಭಿಪ್ರಾಯವನ್ನು ನಿವಾರಿಸಿ, ಒಗ್ಗಟ್ಟು ಮೂಡಿಸುವ ನಿಟ್ಟಿನಲ್ಲಿ ಈ ಸಭೆ ಆಯೋಜಿಸಲಾಗಿತ್ತು. ಇದು ಎರಡನೇ ಸಭೆ.

‘ಪಕ್ಷ ಈಗ ಎದುರಿಸುತ್ತಿರುವ ಸವಾಲುಗಳು ಮತ್ತು ಕಾಂಗ್ರೆಸ್ ಸರ್ಕಾರದ ದುರಾಡಳಿದಿಂದ ಜನತೆ ಸಂಕಷ್ಟಕ್ಕೆ ಸಿಲುಕಿರುವ ವಿಚಾರಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. ಸಣ್ಣ–ಪುಟ್ಟ ಭಿನ್ನಾಭಿಪ್ರಾಯವನ್ನು ಬಗೆಹರಿಸಿಕೊಂಡು ಒಟ್ಟಿಗೆ ಮುನ್ನಡೆಯುವುದರಲ್ಲಿ ಎಲ್ಲರ ಹಿತ ಅಡಗಿದೆ ಎಂದು ಪ್ರಲ್ಹಾದ ಜೋಶಿ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಸದಾನಂದಗೌಡ ಅವರೂ ಸಹಮತ ಸೂಚಿಸಿದರು’ ಎಂದು ಮೂಲಗಳು ಹೇಳಿವೆ.

9–10 ತಂಡಗಳಲ್ಲಿ ಪ್ರವಾಸ: ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಹೋರಾಟ ನಡೆಸುವ ರೂಪುರೇಷೆಗಳ ಕುರಿತು ಇಂದಿನ ಸಭೆಯಲ್ಲಿ ಚರ್ಚಿಸಲಾಯಿತು ಎಂದು ಹೇಳಿದರು.

9–10 ತಂಡಗಳನ್ನು ರಚಿಸಿ ಜಿಲ್ಲೆಗಳಿಗೆ ಪ್ರವಾಸ ಮಾಡಬೇಕು. ಆ ಜಿಲ್ಲೆಯ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಜಿಲ್ಲಾ ಕೇಂದ್ರಗಳಲ್ಲೂ ಹೋರಾಟ ರೂಪಿಸಬೇಕು. ಪಕ್ಷದ ಜಿಲ್ಲಾ ಘಟಕಗಳಲ್ಲಿ ಇರಬಹುದಾದ ಸಣ್ಣಪುಟ್ಟ ಸಮಸ್ಯೆಗಳನ್ನು ಬಗೆಹರಿಸುವ ಕುರಿತು ಚರ್ಚಿಸಿದ್ದೇವೆ ಎಂದು ತಿಳಿಸಿದರು.

‘ಎಲ್ಲ ನಾಯಕರೂ ಒಗ್ಗಟ್ಟಿನಿಂದ ಒಂದಾಗಿ ಜನವಿರೋಧಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೀದಿಗಿಳಿದು ಹೋರಾಟ ಮಾಡುತ್ತೇವೆ. ಜನರಲ್ಲಿ ಜಾಗೃತಿ ಮೂಡಿಸುತ್ತೇವೆ. ಹಿರಿಯ ನಾಯಕರು ಸಭೆಗೆ ಬಂದಿದ್ದರು. ಇನ್ನೂ ಕೆಲವು ಪ್ರಮುಖರು ಬರಬೇಕಿತ್ತು. ಕಾರಣಾಂತರಗಳಿಂದ ಅವರು ಬರಲು ಸಾಧ್ಯವಾಗಿಲ್ಲ’ ಎಂದು ವಿಜಯೇಂದ್ರ ತಿಳಿಸಿದರು.

ಕೊನೆಗೂ ವರಿಷ್ಠರ ಕಂಡ ಆರ್.ಅಶೋಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಕ್ಷಣಾ ಸಚಿವ ರಾಜನಾಥ ಸಿಂಗ್, ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರನ್ನು ಭೇಟಿ ಮಾಡಿ ಸಮಾಲೋಚಿಸಿದರು.

ಮಂಗಳವಾರ ಮಧ್ಯಾಹ್ನವೇ ರಾಷ್ಟ್ರ ರಾಜಧಾನಿಗೆ ಧಾವಿಸಿದ್ದ ಅವರು ರಾಷ್ಟ್ರೀಯ ನಾಯಕರ ಭೇಟಿಗೆ ಪ್ರಯತ್ನಿಸಿದ್ದರು. ಬುಧವಾರವೂ ಭೇಟಿ ಸಾಧ್ಯವಾಗಿರಲಿಲ್ಲ. ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ನಡ್ಡಾ ಅವರನ್ನು ಭೇಟಿ ಮಾಡಲು ಗುರುವಾರ ಕಾಲಾವಕಾಶ ಕೇಳಿದ್ದರು. ಗುರುವಾರ ರಾತ್ರಿ 9ರ ವೇಳೆಗೆ ನಡ್ಡಾ ಅವರ ಜತೆಗೆ ಚರ್ಚೆ ನಡೆಸಿದರು.



ಜೆ.ಪಿ.ನಡ್ಡಾ ಅವರಿಗೆ ಆರ್.ಅಶೋಕ ಹೂಗುಚ್ಛ ನೀಡಿದರು

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಶೀಘ್ರ ಚುನಾವಣೆ ನಡೆಯಲಿದೆ. ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮುಂದುವರಿಕೆಗೆ ಭಿನ್ನರ ಹಾಗೂ ತಟಸ್ಥ ಬಣದ ವಿರೋಧ ಇದೆ. ಒಂದು ವೇಳೆ, ವಿಜಯೇಂದ್ರ ಅವರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮುಂದುವರಿಸಿದರೆ ಅಶೋಕ ಬದಲು ಬೇರೊಬ್ಬರನ್ನು ವಿರೋಧ ಪಕ್ಷದ ನಾಯಕರನ್ನಾಗಿ ನೇಮಿಸಲಾಗುತ್ತದೆ ಎಂಬ ಚರ್ಚೆ ಬಿಜೆಪಿ ವಲಯದಲ್ಲಿ ಆರಂಭವಾಗಿದೆ. ಹೀಗಾಗಿ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಿದ ಅಶೋಕ ಅವರು ವಿಪಕ್ಷ ನಾಯಕನಾಗಿ ಎರಡು ವರ್ಷಗಳ ಪ್ರಗತಿ ವರದಿಯನ್ನು ಸಲ್ಲಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅಶೋಕ, ‘ಎಲ್ಲ ನಾಯಕರ ಜತೆಗೆ ಸುದೀರ್ಘ ಮಾತುಕತೆ ನಡೆಸಿದ್ದೇನೆ. ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಗೊಂದಲದ ಬಗ್ಗೆ ಚರ್ಚೆ ನಡೆಸಿದ್ದೇನೆ’ ಎಂದರು.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಬಗ್ಗೆ ಚರ್ಚೆ ಆಗಿಲ್ಲ. ನಾನು ಆ ರೇಸ್‌ನಲ್ಲಿ ಇಲ್ಲ. ಜತೆಗೆ, ನಾನು ಯಾವುದೇ ಬಣದಲ್ಲಿ ಗುರುತಿಸಿಕೊಂಡಿಲ್ಲ. ಪ್ರತಿ ಮೂರು ತಿಂಗಳಿಗೊಮ್ಮೆ ಭೇಟಿ ಮಾಡುವಂತೆ ವರಿಷ್ಠರು ಸೂಚಿಸಿದ್ದರು. ಹಾಗಾಗಿ, ಬಂದಿದ್ದೇನೆ’ ಎಂದು ಹೇಳಿದರು.

ಸೌರ ವಿದ್ಯುತ್ ಘಟಕಗಳಲ್ಲಿ ಬ್ಯಾಟರಿ ಸ್ಟೋರೇಜ್ ವ್ಯವಸ್ಥೆ: ಕೆ.ಜೆ.ಜಾರ್ಜ್

ಪ್ರಜಾವಾಣಿ ವಾರ್ತೆ


ಕೆ.ಜೆ. ಜಾರ್ಜ್

ಬೆಂಗಳೂರು: ‘ರಾಜ್ಯದ ಎಲ್ಲಾ ಸೌರ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಬ್ಯಾಟರಿ ಸ್ಟೋರೇಜ್ ವ್ಯವಸ್ಥೆಯನ್ನು ಸ್ಥಾಪಿಸಲಾಗುವುದು’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ.

ಬಿಡದಿಯಲ್ಲಿ ಪೇಸ್ ಡಿಜಿಟೆಕ್-ಲಿನೇಜ್ ಪವರ್ ಸಂಸ್ಥೆ ಸ್ಥಾಪಿಸಿರುವ ಸಂಪೂರ್ಣ ಸ್ವಯಂಚಾಲಿತ 5 ಗಿಗಾವಾಟ್ ಅವರ್ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಂ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

‘ಸೌರ ವಿದ್ಯುತ್ ಅನ್ನು ರಾತ್ರಿ ವೇಳೆಯಲ್ಲೂ ಬಳಸುವಂತಾಗಬೇಕು. ಈ ನಿಟ್ಟಿನಲ್ಲಿ, ಕನಿಷ್ಠ 2 ತಾಸು ಬಳಸುವಷ್ಟು ಸೌರ ವಿದ್ಯುತ್ತಿನ ಸಂಗ್ರಹಣೆಗಾಗಿ ಎಲ್ಲಾ ಸೌರ ಘಟಕಗಳಲ್ಲಿ ಬ್ಯಾಟರಿ ಸ್ಟೋರೇಜ್ ವ್ಯವಸ್ಥೆ ಕಲ್ಪಿಸಲಾಗುವುದು’ ಎಂದರು.

‘ಸೌರ ಹಾಗೂ ಪವನ ವಿದ್ಯುತ್ ಉತ್ಪಾದನೆಯ ಪ್ರಮಾಣ ಗಣನೀಯವಾಗಿ ಹೆಚ್ಚಿದ್ದು, ಅವುಗಳಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಸಂಗ್ರಹಿಸಿ ಅಗತ್ಯವಿದ್ದಾಗ ಪೂರೈಸಲು ಬೇಕಾದ ಸೂಕ್ತ ಶೇಖರಣಾ ವ್ಯವಸ್ಥೆ ಮಾಡಿಕೊಳ್ಳುವುದು ಅನಿವಾರ್ಯ’ ಎಂದು ಹೇಳಿದರು.

‘ರಾಜ್ಯದಲ್ಲಿ ಬೇಡಿಕೆಗಿಂತ ಹೆಚ್ಚು ವಿದ್ಯುತ್ ಉತ್ಪಾದನೆ ಆದರೂ, ಸಂಗ್ರಹಣೆಗೆ ಅವಕಾಶ ಇಲ್ಲ. ಹೀಗಾಗಿ, ಶರಾವತಿ ಪಂಪ್ಡ್ ಸ್ಟೋರೇಜ್ ಮೂಲಕ 2000 ಮೆಗಾವಾಟ್, ವಾರಾಹಿ ಪಂಪ್ಡ್ ಸ್ಟೋರೇಜ್ ಮೂಲಕ 1500 ಮೆಗಾವಾಟ್, ಪಾವಗಡದಲ್ಲಿ 1000 ಮೆಗಾವಾಟ್ ಸಾಮರ್ಥ್ಯ ಹಾಗೂ ರ‍್ಯಾಪ್ಟೆಯಲ್ಲಿ 2000 ಮೆಗಾವಾಟ್ ಸಾಮರ್ಥ್ಯದ ಬ್ಯಾಟರಿ ಸ್ಟೋರೇಜ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ’ ಎಂದರು.

ಬ್ಯಾಟರಿ ಸ್ಟೋರೇಜ್ ಘಟಕವನ್ನು ಉದ್ಘಾಟಿಸಿದ ಕೇಂದ್ರದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ, ‘ಸೌರ ಮತ್ತು ಪವನ ವಿದ್ಯುತ್ ಲಭ್ಯವಿಲ್ಲದ ಸಮಯದಲ್ಲಿ ಇವುಗಳಿಂದ ಉತ್ಪಾದನೆಯಾದ ವಿದ್ಯುತ್ ಅನ್ನು ಸಂಗ್ರಹಿಸಿ ಬಳಸಲು ಕೇಂದ್ರ ಸರ್ಕಾರ ಹೆಚ್ಚಿನ ಆದ್ಯತೆ ನೀಡುತ್ತದೆ’ ಎಂದರು.

‘ಬ್ಯಾಟರಿ ಸ್ಟೋರೇಜ್ ಕ್ಷೇತ್ರದಲ್ಲಿ ಹೂಡಿಕೆಗೂ ವಿಪುಲ ಅವಕಾಶಗಳಿವೆ. ಉದ್ಯಮಿಗಳು ಈ ಬಗ್ಗೆ ಗಮನ ಹರಿಸಬೇಕು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕ್ರೆಡಲ್ ಅಧ್ಯಕ್ಷರೂ ಆದ ಶಾಸಕ ಟಿ.ಡಿ. ರಾಜೇಗೌಡ, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಮತ್ತಿತರರು ಉಪಸ್ಥಿತರಿದ್ದರು.

ವಿಷಪ್ರಾಶನದಿಂದಲೇ ಹುಲಿಗಳ ಸಾವು

ಒಂದನೇ ಪುಟದಿಂದ...

ಫೋರೆಟ್ ಕೀಟನಾಶಕ ಬಳಕೆ: ‘ಹಸುವಿನ ಕಳೇಬರದ ಮೇಲೆ ಫೋರೆಟ್ ಕೀಟನಾಶಕ ಹಾಕಲಾಗಿದ್ದು, ವಿಷಪೂರಿತ ಮಾಂಸ ತಿಂದು ಹುಲಿಮರಿಗಳು ಮೊದಲು ಮೃತಪಟ್ಟಿದ್ದು, ನಂತರ ತಾಯಿ ಹುಲಿ ಸತ್ತಿದೆ. ವಿಷಪ್ರಾಶನದಿಂದ ಹುಲಿಗಳು ಸತ್ತಿರುವುದು ಸ್ಪಷ್ಟವಾಗುತ್ತಿದ್ದಂತೆ ಮೀಣ್ಯಂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಪ್ಪ ಗ್ರಾಮದಲ್ಲಿ ಮೃತ ಜಾನುವಾರು ಮಾಲೀಕ ಸೇರಿ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಮೂಲಗಳು ಖಚಿತಪಡಿಸಿವೆ.

ವಿಶೇಷ ತನಿಖಾ ತಂಡ: ಎನ್‌ಟಿಸಿಎ ಕೂಡ ವಿಶೇಷ ತನಿಖಾ ತಂಡ ರಚಿಸಿದೆ. ಬೆಂಗಳೂರು ಪ್ರಾದೇಶಿಕ ಕಚೇರಿಯ ಎಐಜಿ ವಿ.ಹರಿಣಿ ಹಾಗೂ ದಕ್ಷಿಣ ವಿಭಾಗದ ಡಬ್ಲ್ಯುಸಿಸಿಬಿ ಆರ್‌ಡಿಡಿ ತೇನ್‌ಮೊಳಿ ತಂಡದಲ್ಲಿದ್ದು, ಎರಡು ವಾರಗಳೊಳಗೆ ವರದಿ ಸಲ್ಲಿಸುವಂತೆ ಎನ್‌ಟಿಸಿಎ ಡಿಐಜಿಎಫ್ ಜಿ.ಭಾನುಮತಿ ಆದೇಶಿಸಿದ್ದಾರೆ.

ಎನ್‌ಟಿಸಿಎ ಪ್ರಸ್ತಾವಕ್ಕೆ ವಿರೋಧ: ‘ಮಲೆ ಮಹದೇಶ್ವರ ವನ್ಯಜೀವಿ ವಿಭಾಗವನ್ನು ಹುಲಿ ಸಂರಕ್ಷಿತ ವಲಯ ಎಂದು ಘೋಷಿಸಲು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಹಸಿರು ನಿಶಾನೆ ತೋರಿದ್ದರೂ ಸರ್ಕಾರಗಳು ಹಾಗೂ ಜನಪ್ರತಿನಿಧಿಗಳ ವಿರೋಧದಿಂದ ಇದುವರೆಗೂ ಅನುಷ್ಠಾನಗೊಂಡಿಲ್ಲ’ ಎಂದು ಪರಿಸರವಾದಿಗಳು ಅಭಿಪ್ರಾಯಪಟ್ಟಿದ್ದಾರೆ.

‘ಎನ್‌ಟಿಸಿಎ ಅನುಮೋದನೆ ನೀಡಿರುವ ಕಡತ ಅರಣ್ಯ ಭವನದ ಎಸಿಎಸ್ ಕಚೇರಿಯಲ್ಲೇ ಹಲವು ವರ್ಷಗಳಿಂದ ಉಳಿದಿದೆ. ಈ ಪ್ರಸ್ತಾವಕ್ಕೆ ಹಿಂದಿನ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸೇರಿ ಕ್ಷೇತ್ರದ ಶಾಸಕರು ಬಹಿರಂಗ ವಿರೋಧ ವ್ಯಕ್ತಪಡಿಸಿ, ಶಿಫಾರಸು ಪರಿಗಣಿಸದಂತೆ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೇಲೆ ಒತ್ತಡ ಹೇರಿದ್ದರು. ಅಂದು ಸರ್ಕಾರ ಹುಲಿ ಸಂರಕ್ಷಿತ ಪ್ರದೇಶವಾಗಿ ಘೋಷಿಸಲು ಕ್ರಮ ಕೈಗೊಂಡಿದ್ದರೆ ಹುಲಿಗಳ ಸಾವು ತಪ್ಪಿಸಬಹುದಿತ್ತು’ ಎಂದಿದ್ದಾರೆ.

ಎಸ್‌ಪಿ ಪ್ರಸ್ತಾವ ಕಡೆಗಣನೆ

ಗೋಪಿನಾಥಮ್ ಹಾಗೂ ಪಾಲಾರ್ ಕೂಡುವ ಪ್ರದೇಶದಲ್ಲಿ ಪ್ರತ್ಯೇಕ ಚೆಕ್‌ಪೋಸ್ಟ್ ತೆರೆಯುವಂತೆ ಕೋರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ. ಕವಿತಾ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಜೂನ್ 6ರಂದು ಪತ್ರ ಬರೆದಿದ್ದರೂ ಸ್ಪಂದನೆ ದೊರೆತಿಲ್ಲ.

‘ತಮಿಳುನಾಡಿನ ಸೇಲಂ, ಕೃಷ್ಣಗಿರಿ, ಧರ್ಮಪುರಿಯಿಂದ ರಾಜ್ಯ ಸಂಪರ್ಕಿಸುವ ಈ ಜಾಗದಲ್ಲಿ ಚೆಕ್‌ಪೋಸ್ಟ್ ತೆರೆದರೆ ಅನುಮಾನಾಸ್ಪದ ವ್ಯಕ್ತಿಗಳ ತಪಾಸಣೆಗೆ ನೆರವಾಗಲಿದೆ. ತಮಿಳುನಾಡಿನ ಗೋವಿಂದಪಾಡಿ, ಶೆಟ್ಟಿಪಟ್ಟಿ, ಕರಂಗಲೂರು, ಕಾರೆಕಾಡು, ಕತ್ತರಿಮಲೆ ಗ್ರಾಮಗಳಲ್ಲಿರುವ ಕಳ್ಳಬೇಟೆಗಾರರ ಮೇಲೆ ನಿಗಾ ಇರಿಸಬಹುದು’ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದರು.

‘ಚೆಕ್‌ಪೋಸ್ಟ್ ತೆರೆದಿದ್ದರೆ ಈ ದುರ್ಘಟನೆಯನ್ನು ತಪ್ಪಿಸಬಹುದಿತ್ತು’ ಎಂದು ಅರಣ್ಯ ಇಲಾಖೆ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತವಾಗಿದೆ.

ದುಷ್ಕರ್ಮಿಗಳ ಬಂಧಿಸಿ: ಬಿವೈವಿ

ಬೆಂಗಳೂರು: ಮಲೆ ಮಹದೇಶ್ವರ ವನ್ಯಜೀವಿಧಾಮದ ಬಳಿ ತಾಯಿ ಹುಲಿ ಸೇರಿದಂತೆ ಐದು ಹುಲಿಗಳ ಸಾವಿನ ಪ್ರಕರಣದಲ್ಲಿ ಸರ್ಕಾರ ರಚಿಸಿರುವ ತನಿಖಾ ತಂಡ ಸತ್ಯಾಂಶವನ್ನು ಬಯಲಿಗೆಳೆದು ದುಷ್ಕರ್ಮಿಗಳನ್ನು ಬಂಧಿಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿದ್ದಾರೆ.

ಈ ಕುರಿತು ‘ಎಕ್ಸ್’ ಮೂಲಕ ಆತಂಕ ವ್ಯಕ್ತಪಡಿಸಿರುವ ಅವರು, ಮಲೆ ಮಹದೇಶ್ವರರ ವಾಹನವೆಂದು ಹುಲಿಯನ್ನು ಪೂಜಿಸುವ ಬೆಟ್ಟದ ಸನ್ನಿಧಿಯಲ್ಲೇ ಹುಲಿಗಳ ಸಾವಾಗಿದೆ. ಇದು ಅಮಾನವೀಯ ಮತ್ತು ಭಕ್ತರ ಮನಸ್ಸಿಗೆ ಗಾಸಿ ಉಂಟು ಮಾಡುವ ಘಟನೆ ಎಂದು ಹೇಳಿದ್ದಾರೆ.

‘ಹುಲಿಗಳ ಸಾವಿಗೆ ವಿಷ ಪ್ರಾಶನ ಕಾರಣವಾಗಿದ್ದರೆ, ಅದು ಹೇಯ ಮತ್ತು ಖಂಡನೀಯ. ಆದಷ್ಟು ಬೇಗ ಸತ್ಯಾಂಶವನ್ನು ಬಯಲಿಗೆಳೆಯಬೇಕು. ಮನುಕುಲದ ಅಸ್ತಿತ್ವ ವನ್ಯಜೀವಿಗಳ ಸಂರಕ್ಷಣೆಯಲ್ಲಿದೆ ಎಂಬ ಅರಿವು ಇನ್ನಷ್ಟು ವ್ಯಾಪಿಸಬೇಕಿದೆ. ಕಾಡಂಚಿನಲ್ಲಿ ವಾಸಿಸುವ ಜನರಲ್ಲಿ ಅರಣ್ಯ ಹಾಗೂ ವನ್ಯಜೀವಿಗಳ ಸಂರಕ್ಷಣೆಯ ಕುರಿತು ಜಾಗೃತಿ ಕಾರ್ಯಕ್ರಮ ಕೈಗೊಳ್ಳಬೇಕಿದೆ’ ಎಂದು ಒತ್ತಾಯಿಸಿದ್ದಾರೆ.

‘ಪ್ರತಿಯೊಂದು ವನ್ಯಜೀವಿಯೂ ಮನುಷ್ಯ ಸಮಾಜದ ಸಹಜೀವಿ ಹಾಗೂ ದೇಶದ ಸಂಪತ್ತು ಎಂಬ ನಿಟ್ಟಿನಲ್ಲಿ ವ್ಯಾಪಕ ಪ್ರಚಾರಾಂದೋಲನವನ್ನು ಸರ್ಕಾರ ಆರಂಭಿಸಬೇಕು. ಅದರಲ್ಲೂ ಹುಲಿ ಸಂತತಿ ರಾಜ್ಯದ ಅರಣ್ಯ ಪ್ರದೇಶದ ಹೆಮ್ಮೆಯ ಹೆಗ್ಗುರುತಾಗಿದೆ. ಹುಲಿಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಈ ನಿಟ್ಟಿನಲ್ಲಿ ಸರ್ಕಾರ ಹುಲಿ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರದ ಯೋಜನೆ ಬಳಸಿಕೊಂಡು ವಿಶೇಷ ಆದ್ಯತೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘ಐಎಫ್‌ಎಸ್ ಅಧಿಕಾರಿಗಳನ್ನು ಕಾಡಿಗೆ ಕಳಿಸಿ’

ಪ್ರಜಾವಾಣಿ ವಾರ್ತೆ


ಬಸವರಾಜ ಬೊಮ್ಮಾಯಿ

ಗದಗ: ‘ಐದು ಹುಲಿಗಳ ಸಾವಿನ ಪ್ರಕರಣದಲ್ಲಿ ಅರಣ್ಯ ಇಲಾಖೆ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಬೆಂಗಳೂರಿನಲ್ಲಿ ಬೇರೂರಿರುವ ಎಲ್ಲ ಐಎಫ್‌ಎಸ್ ಅಧಿಕಾರಿಗಳನ್ನೂ ಕಾಡಿಗೆ ಕಳಿಸಬೇಕು’ ಎಂದು ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.

‘ಒಂದು ಹುಲಿ ಆಕಸ್ಮಿಕವಾಗಿ ತೀರಿಕೊಂಡರೂ ಅದು ದೊಡ್ಡ ವಿಚಾರ. ಹಾಗಿದ್ದಾಗ, ನಾಲ್ಕು ಮರಿ, ಒಂದು ತಾಯಿ ಹುಲಿ ತೀರಿಕೊಂಡಿವೆ. ಹುಲಿ ರಕ್ಷಿತ ಪ್ರದೇಶದಲ್ಲಿ ಜನದಟ್ಟಣೆಗೆ ಅವಕಾಶ ಮಾಡಿಕೊಡಲಾಗಿದೆ. ರೆಸಾರ್ಟ್‌ಗೆ ಅನುಮತಿ ನೀಡಲಾಗಿದೆ. ಇಷ್ಟೆಲ್ಲಾ ಆದರೂ ಅರಣ್ಯ ಇಲಾಖೆ ಕಣ್ಮುಚ್ಚಿ ಕುಳಿತಿದೆ’ ಎಂದು ದೂರಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಾನು ಮುಖ್ಯಮಂತ್ರಿ ಇದ್ದಾಗ ಎಲ್ಲ ಐಎಫ್‌ಎಸ್ ಅಧಿಕಾರಿಗಳನ್ನೂ ಕಾಡಿಗೆ ಕಳಿಸಿದ್ದೆ. ಕಚೇರಿಗಳನ್ನು ಸ್ಥಳಾಂತರ ಮಾಡಿದ್ದೆ. ಆದರೆ, ಈಗ ಮತ್ತೆ ಅವರೆಲ್ಲ ಬೆಂಗಳೂರಿಗೆ ಬಂದಿದ್ದಾರೆ’ ಎಂದು ಹರಿಹಾಯ್ದರು.

ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ: ಶಿಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ

ಕಲಬುರಗಿ: ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿದ್ದ ಕಲಬುರಗಿ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಯೊಂದರ ಇಂಗ್ಲಿಷ್ ಭಾಷಾ ಶಿಕ್ಷಕ ಬಸವರಾಜ ದ್ಯಾಮಾ ಅವರನ್ನು ಅಮಾನತುಗೊಳಿಸಿ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೂರ್ಯಕಾಂತ ಮದಾನೆ ಶುಕ್ರವಾರ ಆದೇಶಿಸಿದ್ದಾರೆ.

ಶಿಕ್ಷಕ ಬಸವರಾಜ ದ್ಯಾಮಾ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರು ಹಾಗೂ ಹಳೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಕೇಳಿ ಬಂದಿತ್ತು. ಈ ಸಂಬಂಧ ತನಿಖೆಗೆ ಬಿಇಒ ಶಿವಗುಂಡಪ್ಪ ಸಿದ್ಧಣಗೋಳ ನೇತೃತ್ವದಲ್ಲಿ ಸದಸ್ಯರ ಸಮಿತಿ ರಚಿಸಲಾಗಿತ್ತು. ವಿಚಾರಣಾ ಸಮಿತಿಯು ಶಾಲೆಗೆ ಭೇಟಿ ವಿದ್ಯಾರ್ಥಿನಿಯರಿಂದ ಮಾಹಿತಿ ಪಡೆದಿತ್ತು. ಜೊತೆಗೆ ಆರೋಪ ಎದುರಿಸುತ್ತಿರುವ ಶಿಕ್ಷಕನಿಗೆ ನೋಟಿಸ್ ಕೊಟ್ಟು ಉತ್ತರ ಪಡೆಯಲಾಗಿತ್ತು.

'ಶಿಕ್ಷಕ ಬಸವರಾಜ ದ್ಯಾಮಾ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುವ ಮೂಲಕ ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ನು ಉಲ್ಲಂಘಿಸಿರುವುದು ಪ್ರಾಥಮಿಕ ತನಿಖೆಯಲ್ಲಿ ಮೇಲ್ನೋಟಕ್ಕೆ ಕಂಡು ಬಂದಿದೆ. ವಿಚಾರಣೆ ಕಾಯ್ದಿರಿಸಿ ಶಿಕ್ಷಕನನ್ನು ಅಮಾನತುಗೊಳಿಸಲಾಗಿದೆ' ಎಂದು ಕಲಬುರಗಿ ಡಿಡಿಪಿಐ ಸೂರ್ಯಕಾಂತ ಮದಾನೆ ತಿಳಿಸಿದ್ದಾರೆ.

ಬರಡು ಭೂಮಿಗೆ ಮರುಜೀವದ ಯತ್ನ

ರಾಜ್ಯದಲ್ಲಿ ಮೊದಲ ಬಾರಿಗೆ ಮನರೇಗಾ ಯೋಜನೆಯಡಿ ಪ್ರಯೋಗ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಬರಡಾಗಿರುವ ಭೂಮಿಯನ್ನು ಫಲವತ್ತಾಗಿಸುವ ಕೆಲಸ ಬಾಗಲಕೋಟೆ ಜಿಲ್ಲೆಯಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ನಡೆದಿದೆ. ಇದರಿಂದ ಭೂಮಿ ಮರುಜೀವ ಪಡೆಯುವುದಲ್ಲದೇ, ಆ ಹೊಲದ ಮಾಲೀಕನಾದ ರೈತನಿಗೆ 74 ದಿನಗಳ ಕಾಲ ಕೆಲಸವೂ ದೊರೆಯಲಿದೆ.

ಬಾಗಲಕೋಟೆ ಸೇರಿದಂತೆ ರಾಜ್ಯದ 11 ಜಿಲ್ಲೆಗಳಲ್ಲಿ ಪೈಲಟ್ ಯೋಜನೆಯಡಿ ಸವಳು ಜವಳಾಗಿರುವ ಭೂಮಿಯನ್ನು ಹಿಂದಿನಂತೆ ಫಲವತ್ತಾಗಿಸುವ ಕಾರ್ಯವನ್ನು ಮೊದಲ ಬಾರಿಗೆ ನರೇಗಾದಡಿ ಕೈಗೆತ್ತಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ₹9.54 ಕೋಟಿ ವೆಚ್ಚದಲ್ಲಿ 1,093 ಎಕರೆಯ ಸವಳು ತೆಗೆದು, ಮಣ್ಣಿನ ಫಲವತ್ತತೆ ಹೆಚ್ಚಿಸಲಾಗುತ್ತಿದೆ.

ಸವಳು ಜವಳು ನಿವಾರಣೆಗಾಗಿ ಪ್ರತಿ ಎಕರೆಗೆ ಅಂದಾಜು ವೆಚ್ಚ ನಿಗದಿಪಡಿಸಲಾಗಿದ್ದು, ಕೆಂಪು ಮಣ್ಣಿನ ಹೊಲಕ್ಕೆ ಪ್ರತಿ ಎಕರೆಗೆ ₹58 ಸಾವಿರ, ಕಪ್ಪು ಮಣ್ಣಿನ ಹೊಲಕ್ಕೆ ₹68 ಸಾವಿರ ನಿಗದಿ ಮಾಡಲಾಗಿದೆ. ನರೇಗಾದಡಿ ₹6.94 ಕೋಟಿ, ಕೃಷಿ ಇಲಾಖೆಯಿಂದ ₹2.60 ಕೋಟಿ ವೆಚ್ಚ ಮಾಡಲಾಗುತ್ತಿದೆ.



ಭೂಮಿ ಸವಳು ಜವಳಾಗಿರುವುದರಿಂದ ರೈತರಿಗೆ ಸಂಕಷ್ಟ. ಈ ಯೋಜನೆಯಿಂದ ಭೂಮಿಯಲ್ಲಿ ಹಸಿರು ನಳನಳಿಸಲಿದೆ. ರೈತರಿಗೂ ಆರ್ಥಿಕ ಬಲ ಬರಲಿದೆ
ಶಶಿಧರ ಕುರೇರ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬಾಗಲಕೋಟೆ

ಒಂದು ಕಾಲದಲ್ಲಿ ಫಲವತ್ತಾಗಿದ್ದ ಭೂಮಿಯು ಅತಿಯಾದ ರಸಗೊಬ್ಬರ ಬಳಕೆ, ಸತತವಾಗಿ ನೀರು ನಿಲ್ಲಿಸಿ ಒಂದೇ ಬೆಳೆ ಬೆಳೆಯುವುದು, ಜಲಾಶಯದ ಹಿನ್ನೀರಿನಿಂದಾಗಿ ಭೂಮಿ ಸವಳಾಗಿದ್ದು, ಫಸಲು ಬೆಳೆಯದಂತಾಗಿವೆ. ಇದರಿಂದಾಗಿ ಸಾವಿರಾರು ರೈತರ ಕುಟುಂಬಗಳು ಆದಾಯವಿಲ್ಲದೆ ಸಂಕಷ್ಟಕ್ಕೆ ಸಿಲುಕಿವೆ. ಅಂತಹ ಭೂಮಿಯ ಫಲವತ್ತತೆ ಮರಳಿಸಲು ಈ ಯೋಜನೆಯಡಿ ರೈತರಿಗೆ ನೆರವು ನೀಡಲಾಗುತ್ತಿದೆ.

'ಈಗಾಗಲೇ ಕೆಲವು ತಾಲ್ಲೂಕುಗಳಲ್ಲಿ ಕಾಮಗಾರಿ ಪೂರ್ಣಗೊಂಡಿದೆ. ಇನ್ನು ತಾಲ್ಲೂಕುಗಳಲ್ಲಿ ನಡೆದಿದೆ. 40 ಮೀಟರ್ ಅಂತರದಲ್ಲಿ ಬಸಿಗಾಲುವೆಗೆ ಪೈಪ್ ಹಾಕಲಾಗುತ್ತಿದೆ. ಕೆಲವು ರೈತರು ಯೋಜನೆಯೊಂದಿಗೆ ತಮ್ಮ ಹಣವನ್ನೂ ಸೇರಿಸಿ 10 ಮೀಟರ್ ಅಂತರದಲ್ಲಿ ಬಸಿಗಾಲುವೆ ನಿರ್ಮಿಸಿಕೊಳ್ಳುತ್ತಿದ್ದಾರೆ' ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ತಿಳಿಸಿದರು.

ಯಾವ ಜಿಲ್ಲೆಗಳು?: ಕಲಬುರಗಿ, ಯಾದಗಿರಿ, ಚಿತ್ರದುರ್ಗ, ಬೆಳಗಾವಿ, ವಿಜಯಪುರ, ಕೊಪ್ಪಳ, ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳಲ್ಲಿ ಸವಳು ಜವಳು ಆಗಿರುವ ಭೂಮಿಗೆ ಕಾಯಕಲ್ಪ ನೀಡುವ ಕೆಲಸ ನಡೆದಿದೆ.



ಬಾಗಲಕೋಟೆ ಜಿಲ್ಲೆಯ ಹೊಲವೊಂದರಲ್ಲಿ ಸವಳು ಜವಳಾಗಿರುವ ಭೂಮಿಯಲ್ಲಿ ಸವಳು ತೆಗೆಯಲು ಬಸಿಗಾಲುವೆ ನಿರ್ಮಿಸುತ್ತಿರುವುದು

ಸವಳು ಜವಳು ನಿವಾರಣೆ ಹೇಗೆ?

ಭೂಮಿ ಆಧರಿಸಿ 2 ರಿಂದ 3 ಅಡಿವರೆಗೆ ತೆಗ್ಗು ತೆಗೆದು ಬಸಿಗಾಲುವೆ ನಿರ್ಮಿಸಲಾಗುತ್ತದೆ. ತೆಗ್ಗಿನಿಂದ ತೆಗ್ಗಿಗೆ 40 ಮೀಟರ್ ಅಂತರವಿರುತ್ತದೆ. (ರೈತರು ಅಪೇಕ್ಷಿಸಿ ವೆಚ್ಚ ಭರಿಸಿದರೆ 10 ಮೀಟರ್ ಅಂತರದಲ್ಲಿ ನಿರ್ಮಿಸಲಾಗುತ್ತದೆ) ತೆಗ್ಗಿನ ತಳಭಾಗದಲ್ಲಿ ಕಡಿ (ಕಲ್ಲಿನ ಸಣ್ಣದಾದ ತುಂಡುಗಳು) ಹಾಕಿ ಅದರ ಮೇಲೆ ಜಿಯೊ ಸಿಂಥೆಟಿಕ್‌ನಿಂದ ಸುತ್ತಿರುವ ಪೈಪ್ ಅಳವಡಿಸಲಾಗುತ್ತದೆ. ಪೈಪ್‌ನುದ್ದಕ್ಕೂ ಅಲ್ಲಲ್ಲಿ ತೂತುಗಳಿರುತ್ತವೆ. ಜಿಯೊಸಿಂಥೆಟಿಕ್ ಮಣ್ಣನ್ನು ತಡೆದು ಉಪ್ಪಿನಂಶ ಇರುವ ನೀರು ಮಾತ್ರ ಪೈಪಿನೊಳಕ್ಕೆ ಹೋಗಲು ಅನುವು ಮಾಡಿಕೊಡುತ್ತದೆ. ಆ ಪೈಪ್‌ಲೈನ್‌ಗಳನ್ನೆಲ್ಲಾ ಮೇನ್‌ಲೈನ್ ಜೋಡಿಸಿ, ಉಪ್ಪು ನೀರನ್ನು ಹೊಲದಿಂದ ಹೊರಗೆ ಹಾಯಿಸಲಾಗುತ್ತದೆ.

ಸುದ್ದಿ 2 ನಿಮಿಷ

ಕೆಆರ್‌ಎಸ್‌ಗೆ ಸಿ.ಎಂ ಬಾಗಿನ 30ರಂದು: ಚಲುವರಾಯಸ್ವಾಮಿ

ಮಂಡ್ಯ: 'ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಅಣೆಕಟ್ಟೆ ಭರ್ತಿಯಾಗಿದ್ದು, ಜೂನ್ 30ರಂದು ಬೆಳಿಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜಿಲ್ಲೆಯ ಶಾಸಕರೊಂದಿಗೆ ಬಾಗಿನ ಅರ್ಪಿಸಲಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿ, '1960ರಿಂದ ಇದುವರೆಗೆ ಜೂನ್‌ನಲ್ಲೇ ಕೆಆರ್‌ಎಸ್ ಅಣೆಕಟ್ಟೆ ಭರ್ತಿಯಾಗಿರುವುದು ಇದೇ ಮೊದಲು. ಇದು ನಮ್ಮ ಭಾಗ್ಯ' ಎಂದರು.



'ನಾವು ಅಧಿಕಾರಕ್ಕೆ ಬಂದಾಗಲೆಲ್ಲ ಮಳೆ ಬರುವುದಿಲ್ಲ, ಬರ ಬರುತ್ತದೆ ಅಂತಿದ್ದವರಿಗೆ ಈಗ ಪಾಪ ನಿದ್ದೆ ಬರುತ್ತಿಲ್ಲ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಎಲ್ಲ ಕೆರೆಕಟ್ಟೆಗಳು ತುಂಬುತ್ತಿವೆ. ಇದರಿಂದ ಬೆಳೆ ಚೆನ್ನಾಗಿ ಆಗುತ್ತದೆಂದು ಕೆಲವರಿಗೆ ಸಂಕಟವಾಗುತ್ತಿದೆ' ಎಂದು ಬಿಜೆಪಿ ನಾಯಕರನ್ನು ಟೀಕಿಸಿದರು.

23 ವರ್ಷಗಳ ಬಳಿಕ ಪತ್ತೆಯಾದ ವೃದ್ಧನಿಗೆ ಜೀವಾವಧಿ ಶಿಕ್ಷೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಮೂರನೇ ಪತ್ನಿಯನ್ನು ಕೊಲೆ ಮಾಡಿ 23 ವರ್ಷಗಳಿಂದ ತಲೆ ಮರೆಸಿಕೊಂಡಿದ್ದ 75 ವಯಸ್ಸಿನ ನಿವೃತ್ತ ಸರ್ಕಾರಿ ನೌಕರನಿಗೆ ಇಲ್ಲಿನ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸಷೆನ್ಸ್ ನ್ಯಾಯಾಲಯ ಶುಕ್ರವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಹಾಲದಾಳ ಗ್ರಾಮದ ಹನುಮಂತ ಹುಸೇನಪ್ಪ ಶಿಕ್ಷೆಗೊಳಗಾದ ಅಪರಾಧಿ.

ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಸದಾನಂದ ನಾಗಪ್ಪ ನಾಯ್ಕ ಅವರು ಅಪರಾಧಿಗೆ ಜೀವಾವಧಿ ಶಿಕ್ಷೆ ಜೊತೆಗೆ ₹10 ಸಾವಿರ ದಂಡವನ್ನೂ ವಿಧಿಸಿದ್ದಾರೆ.

ಹನುಮಂತ ಪತ್ನಿಯ ಶೀಲ ಶಂಕಿಸಿ 2002ರಲ್ಲಿ ಕೊಲೆ ಮಾಡಿ ಮೃತದೇಹವನ್ನು ಗೋಣಿ ಚೀಲದಲ್ಲಿ ತುಂಬಿ ಸರ್ಕಾರಿ ಬಸ್‌ನಲ್ಲಿ ಸಾಗಿಸಿ ತಲೆಮರೆಸಿಕೊಂಡಿದ್ದ. ನ್ಯಾಯಾಲಯದಲ್ಲಿ ವಿಚಾರಣೆ ನಡೆದಾಗ ಹನುಮಂತನ ಮೇಲಿದ್ದ ಆರೋಪ ಸಾಬೀತಾಗಿತ್ತು. ನ್ಯಾಯಾಲಯ ಇದನ್ನು ಆದೇಶಿಸಿ ಶಿಕ್ಷೆಯ ಪ್ರಮಾಣ ನಿರ್ಧರಿಸಬೇಕು ಎನ್ನುವಷ್ಟರಲ್ಲಿ ಪರಾರಿಯಾಗಿ ಎರಡು ತಿಂಗಳ ಹಿಂದೆ ಸ್ವಗ್ರಾಮಕ್ಕೆ ಬಂದಿದ್ದ. ಇದನ್ನು ನೋಡಿದ್ದ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಎರಡು ದಿನಗಳ ಹಿಂದೆ ಪೊಲೀಸರು ಆತನನ್ನು ಬಂಧಿಸಿ, ಇಲ್ಲಿನ ನ್ಯಾಯಾಲಯಕ್ಕೆ ಒಪ್ಪಿಸಿದ್ದರು.



ದಾವಣಗೆರೆ ಸಮೀಪ 'ವಂದೇ ಭಾರತ್' ರೈಲಿನಲ್ಲಿ ಕಾಣಿಸಿಕೊಂಡ ಬೆಂಕಿಯನ್ನು ನಂದಿಸಿದಾಗ ಸ್ಥಳದಲ್ಲಿ ಜಮಾಯಿಸಿದ ಪ್ರಯಾಣಿಕರು

ವಂದೇ ಭಾರತ್: ಚಕ್ರದಲ್ಲಿ ಬೆಂಕಿ

ದಾವಣಗೆರೆ: ಧಾರವಾಡದಿಂದ ಬೆಂಗಳೂರಿನತ್ತ ಹೊರಟಿದ್ದ 'ವಂದೇ ಭಾರತ್' ರೈಲಿನ ಚಕ್ರವೊಂದರಲ್ಲಿ ದಾವಣಗೆರೆ ಸಮೀಪ ಬೆಂಕಿ ಕಾಣಿಸಿಕೊಂಡಿದ್ದು, ಲೋಕೊ ಪೈಲಟ್ ಸಮಯಪ್ರಜ್ಞೆಯಿಂದಾಗಿ ಸಂಭವನೀಯ ಅಪಘಾತವೊಂದು ತಪ್ಪಿದೆ. ಈ ರೈಲು ಸಂಚಾರವನ್ನು ರದ್ದುಪಡಿಸಿದ ರೈಲ್ವೆ ಇಲಾಖೆ, ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿತು.

ಶುಕ್ರವಾರ ಮಧ್ಯಾಹ್ನ 3.30ಕ್ಕೆ ಹರಿಹರ ಮತ್ತು ದಾವಣಗೆರೆ ನಡುವೆ ರೈಲು ಸಂಚರಿಸುತ್ತಿದ್ದಾಗ ಈ ಅವಘಡ ಸಂಭವಿಸಿದೆ. ತಕ್ಷಣ ಜಾಗೃತರಾದ ರೈಲ್ವೆ ಸಿಬ್ಬಂದಿ, ಚಲಿಸುತ್ತಿದ್ದ ರೈಲು ನಿಲುಗಡೆ ಮಾಡಿ ಬೆಂಕಿ ಆರಿಸಿದ್ದಾರೆ. ಈ ರೈಲಿನಲ್ಲಿ 502 ಜನ ಪ್ರಯಾಣಿಕರಿದ್ದರು.

'ವಂದೇ ಭಾರತ್' ರೈಲಿನ 'ಸಿ-4' ಕೋಚ್‌ನ ಗಾಲಿಯೊಂದರ 'ಹಾಟ್ ಎಕ್ಸೆಲ್'ನಿಂದ ಬೆಂಕಿ ಕಿಡಿ ಹೊತ್ತಿಕೊಂಡಿದೆ. ತಕ್ಷಣ ಆವರಿಸಿಕೊಂಡ ಹೊಗೆ ಆವರಿಸಿದ ಬಗ್ಗೆ ಎಂಜಿನ್‌ಗೆ ಸಂದೇಶ ರವಾನೆಯಾಗಿದೆ. ಅಂದಾಜು 100 ಕಿ.ಮೀ ವೇಗದಲ್ಲಿ ಚಲಿಸುತ್ತಿದ್ದ ರೈಲನ್ನು ನಿಲುಗಡೆ ಮಾಡಿ ಬೆಂಕಿಯ ಕಿಡಿಯನ್ನು ನಂದಿಸಲಾಗಿದೆ. ತಾಂತ್ರಿಕ ತೊಂದರೆಯನ್ನು ಸರಿಪಡಿಸಿಕೊಂಡು ದಾವಣಗೆರೆ ನಿಲ್ದಾಣದವರೆಗೆ ರೈಲನ್ನು ತರಲಾಗಿದೆ ಎಂದು ರೈಲ್ವೆ ಇಲಾಖೆಯ ಮೂಲಗಳು ತಿಳಿಸಿವೆ.

ರೈಲನ್ನು ಪರಿಶೀಲಿಸಿದ ತಾಂತ್ರಿಕ ತಂಡ ಸಂಚಾರವನ್ನು ರದ್ದುಪಡಿಸಿದೆ. ಇದೇ ಮಾರ್ಗದಲ್ಲಿ ಸಂಚರಿಸುತ್ತಿದ್ದ 'ಜನಶತಾಬ್ದಿ', 'ಜೋಧ್‌ಪುರ ಎಕ್ಸ್‌ಪ್ರೆಸ್' ರೈಲುಗಳಲ್ಲಿ ಪ್ರಯಾಣಿಕರನ್ನು ಕಳುಹಿಸಿಕೊಡಲಾಗಿದೆ. ನಂತರ ಹರಿಹರದಲ್ಲಿರುವ ವರ್ಕ್‌ಶಾಪ್‌ಗೆ ರೈಲನ್ನು ಕಳುಹಿಸಲಾಗಿದೆ.

'ರೈಲಿನಲ್ಲಿ ಬೆಂಕಿಯ ಕಿಡಿ ಕಾಣಿಸಿಕೊಂಡಿದ್ದು ನಿಜ. ಇದು ಹೆಚ್ಚು ಗಾಬರಿಪಡುವಂತಹದ್ದಲ್ಲ. ಪ್ರಯಾಣದಲ್ಲಿ ವ್ಯತ್ಯಯ ಉಂಟಾಗಿ ತೊಂದರೆ ಅನುಭವಿಸಿದ ಪ್ರಯಾಣಿಕರಿಗೆ ಟಿಕೆಟ್ ದರ ಹಿಂದಿರುಗಿಸಲಾಗುವುದು' ಎಂದು ಇಲಾಖೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಗಿರೀಶ್ ತಿಳಿಸಿದ್ದಾರೆ.

ಮೆಟ್ಟಿಲು ಹತ್ತಿ ಬಂದವರಿಗೆ ಸಿಗದ ನೇರ ದರ್ಶನ • ಅವ್ಯವಸ್ಥೆಗೆ ಜನ ಹೈರಾಣ

ಚಾಮುಂಡಿ ದರ್ಶನಕ್ಕೆ ಸುಸ್ತಾದ ಭಕ್ತರು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಚಾಮುಂಡಿ ಬೆಟ್ಟದಲ್ಲಿ ಆಷಾಢ ಮೊದಲನೇ ಶುಕ್ರವಾರದ ಪ್ರಯುಕ್ತ ಸರದಿ ಸಾಲಿನಲ್ಲಿ ಗಂಟೆಗಟ್ಟಲೇ ಕಾದರೂ ದರ್ಶನ ಸಿಗದೇ ಹಲವು ಭಕ್ತರು ನಿರಾಶರಾಗಿ ವಾಪಸಾದರು.

ಶಿವಮೊಗ್ಗ, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಭಕ್ತರು ಬೆಟ್ಟದ ಪಾದದ ಮೂಲಕ ಹತ್ತಿ ಬಂದರೂ, ಜಿಲ್ಲಾಡಳಿತವು ಹೇಳಿದಂತೆಯೇ ನೇರ ದರ್ಶನದ ಅವಕಾಶವನ್ನು ವ್ಯವಸ್ಥಿತವಾಗಿ ಮಾಡಲಿಲ್ಲ. ಏಳೆಂಟು ಗಂಟೆ ಕಾದವರಿಗೂ ದೇಗುಲದ ನವರಂಗದಲ್ಲಿ ಪೊಲೀಸರು ಕೇವಲ 'ಐದು ಸೆಕೆಂಡ್'ನ ದರ್ಶನವಕಾಶ ನೀಡಿದ್ದು, ಅಸಮಾಧಾನಕ್ಕೂ ಕಾರಣವಾಯ್ತು. ಗರ್ಭಗುಡಿಯ ಹಿಂಭಾಗ ಹಾಗೂ ದೇಗುಲದ ಹೊರ ಬಂದು ಕುಳಿತ ಹಲವರು ನೋವು ನುಂಗಿಕೊಂಡರು.

ಜನಜಂಗುಳಿ: ಬೆಟ್ಟದ ಪಾದದಿಂದ, 1,101 ಮೆಟ್ಟಿಲು ಹತ್ತಿ ಬಂದವರಿಗೆ ನೇರ ದರ್ಶನದ ಅವಕಾಶ ಕಲ್ಪಿಸಲು, ಪ್ರತ್ಯೇಕ ಸರದಿ ಸಾಲನ್ನು ಮಾಡಲಾಗಿದೆ' ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಹೇಳಿದ್ದರು. ಅದರಿಂದ ಮುಂಜಾನೆಯಿಂದಲೇ ಉತ್ಸಾಹದಿಂದ ಸಾವಿರಾರು ಭಕ್ತರು ಹರಿದು ಬಂದಿದ್ದರು.

'ಕೊನೆಯ 100 ಮೆಟ್ಟಿಲು ಇರುವಾಗ ಹೆಚ್ಚು ಜನಸಂದಣಿ ಉಂಟಾಯಿತು. ಕಿರಿದಾದ ಬ್ಯಾರಿಕೇಡ್ ಹಾಕಿದ್ದರಿಂದ ಭಕ್ತರಿಗೆ ಉಸಿರಾಡಲು ಕಷ್ಟವಾಯಿತು. ಹೀಗಾಗಿ ಹಲವರು ದೇಗುಲದ ಹೊರ ಗೋಡೆಯ ಆವರಣಕ್ಕೆ ಬರಲು ಎರಡೂವರೆ ಗಂಟೆಯಾಯಿತು. ಒಳಕ್ಕೆ ಹೋಗಲು ಮತ್ತೆ ಕಾಯಬೇಕು, ಬ್ಯಾರಿಕೇಡ್ ಒಳಗೇ ನೂಕುನುಗ್ಗಲಾಗುವ ಹೆದರಿಕೆಯಿಂದ ದರ್ಶನ ಮಾಡದೇ ವಾಪಸಾದೆವು' ಎಂದು ಭಕ್ತರಾದ ಬನ್ನಿಮಂಟಪದ ಸುಮಾ, ಪೂರ್ಣಿಮಾ ಬೇಸರ ವ್ಯಕ್ತಪಡಿಸಿದರು.

ಸಿಗದ ಹಾಲು, ಡ್ರೈಫ್ರೂಟ್ಸ್: ಧರ್ಮದರ್ಶನದ ಸಾಲಿನಲ್ಲಿ ಬರುವವರಿಗೆ ಉಚಿತವಾಗಿ ಡ್ರೈಫ್ರೂಟ್ಸ್ ಪಾಕೆಟ್, ಬಾದಾಮಿ ಹಾಲು ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಾಗಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ಹೇಳಿತ್ತು. ಆ ವ್ಯವಸ್ಥೆಯೂ ಆಗಲಿಲ್ಲ. ಆದರೆ, ದರ್ಶನ ಪಡೆದ ಮಹಿಳೆಯರಿಗೆ ಕುಂಕುಮ, ಮುತ್ತೈದೆಯರಿಗೆ ಮಡಿಲಕ್ಕಿ, ಲಾಡು ಪ್ರಸಾದ ಪ್ಯಾಕೆಟ್‌ಗಳನ್ನು ಮಾತ್ರ ಉಚಿತವಾಗಿ ನೀಡಲಾಯಿತು.

'ರೀಲ್ಸ್' ಮಾಡಿದರೆ ಫೋನ್ ವಶಪಡಿಸಿಕೊಳ್ಳಲಾಗುವುದೆಂದು ಹೇಳಲಾಗಿತ್ತು. ಆದರೆ, ದೇವಾಲಯದಲ್ಲಿ ಗರ್ಭಗುಡಿ ಹೊರತುಪಡಿಸಿ, ಉಳಿದೆಲ್ಲ ಕಡೆ ಹಲವರು ಮೊಬೈಲ್ ಫೋನ್ ಹಾಗೂ ಕ್ಯಾಮೆರಾದಲ್ಲಿ ಫೋಟೊ ತೆಗೆಯುವುದರ ಜೊತೆಗೆ ರೀಲ್ಸ್ ಮಾಡುತ್ತಿದ್ದರು. ₹2 ಸಾವಿರದ ಟಿಕೆಟ್ ವ್ಯವಸ್ಥೆಯಿದ್ದವರೂ ದರ್ಶನಕ್ಕೆ ಒಂದೂವರೆ ಗಂಟೆ ಸರದಿಯಲ್ಲಿ ಕಾದಿದ್ದರು. ವಿವಿಐಪಿ ಸಾಲಿನಲ್ಲಿ ಜಿಲ್ಲಾಧಿಕಾರಿಯೂ ಕೆಲವು ನಿಮಿಷ ಕಾದದ್ದು, ಅವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿತ್ತು.

ಮುಖ್ಯಾಂಶಗಳು

- ದೇವಿಯ ದರ್ಶನ ಐದೇ ಸೆಕೆಂಡ್
- ಕಿರಿದಾದ ಬ್ಯಾರಿಕೇಡ್‌ಗಳಲ್ಲಿ ಇಕ್ಕಟ್ಟು
- ಭಕ್ತರಿಗೆ ಉಸಿರಾಡಲೂ ತೊಂದರೆ

ಮೆಟ್ಟಿಲು ಹತ್ತಿ ಬಂದವರಿಗೆ ನೇರ ದರ್ಶನ ಸಿಗಲಿಲ್ಲ. ಜನರನ್ನು ದಾರಿ ತಪ್ಪಿಸಿದ್ದಾರೆ. ಬಾದಾಮಿ ಹಾಲಿರಲಿ ಕುಡಿಯುವ ನೀರು ಸಿಗಲಿಲ್ಲ. ಮೊದಲಿನಂತೆಯೇ ಬೆಟ್ಟ ಇರಲು ಬಿಡಿ
ಸಂತೋಷ್, ಶಿವಮೊಗ್ಗ

ದರ್ಶನಕ್ಕೆ ₹ 2 ಸಾವಿರ ಟಿಕೆಟ್ ಪಡೆದಿದ್ದೆವು. ಜನರು ಹೆಚ್ಚಿದ್ದರಿಂದ ಒಂದೂವರೆ ಗಂಟೆ ಕಾದೆವು
ಭೂಮಿಕಾ, ಗಿರಿನಗರ, ಬೆಂಗಳೂರು



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಆಷಾಢ ಮಾಸದ ಮೊದಲನೇ ಶುಕ್ರವಾರ ಪ್ರಯುಕ್ತ ಹರಿದು ಬಂದ ಭಕ್ತರು ದರ್ಶನಕ್ಕೆ ಸರದಿ ಸಾಲಿನಲ್ಲಿ ನಿಂತಿದ್ದರು
– ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಆರ್‌ಟಿಒ: ಮೂವರ ಅಮಾನತು

ಪ್ರಜಾವಾಣಿ ವಾರ್ತೆ

ಮಂಗಳೂರು: ಕಾರಿನ ತಾತ್ಕಾಲಿಕ ನೋಂದಣಿಯ ವಿವರ ಮಾರ್ಪಾಡು ಮಾಡುವ ಜೊತೆಗೆ ಅದರ ಮೌಲ್ಯ ಕಡಿಮೆ ನಮೂದಿಸಿ ಕಡಿಮೆ ತೆರಿಗೆ ಆಕರಿಸುವಂತೆ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಿದ ಆರೋಪದ ಮೇರೆಗೆ ಇಲ್ಲಿಯ ಉಪ ಸಾರಿಗೆ ಆಯುಕ್ತರ ಕಚೇರಿಯ ಮೂವರನ್ನು ಅಮಾನತುಗೊಳಿಸಲಾಗಿದೆ.

ಮಂಗಳೂರು ಉಪ ಸಾರಿಗೆ ಆಯುಕ್ತರ ಕಚೇರಿಯ ಕೇಂದ್ರ ಸ್ಥಾನೀಯ ಸಹಾಯಕಿ ಸರಸ್ವತಿ, ಅಧೀಕ್ಷಕಿ ರೇಖಾ ನಾಯಕ್, ಪ್ರಥಮ ದರ್ಜೆ ಸಹಾಯಕ ನೀಲಪ್ಪ ಕೆ.ಎಚ್. ಅಮಾನತುಗೊಂಡವರು. ಮರ್ಸಿಡಿಸ್ ಬೆನ್ಜ್ ಕಾರಿಗೆ ಸಂಬಂಧಿಸಿದಂತೆ 01.01.2017ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಅವರ ಎಲೆಕ್ಟ್ರಾನಿಕ್ ಸಿಟಿ ಕಚೇರಿಯಿಂದ ಮಂಗಳೂರು ಕಚೇರಿಗೆ ತಾತ್ಕಾಲಿಕ ನೋಂದಣಿ ಪತ್ರವನ್ನು ನಿಹಾಲ್ ಅಹಮದ್ ಹೆಸರಿನಲ್ಲಿ₹1,96,95,-000ಕ್ಕೆ ಇನ್‌ವಾಯಿಸ್ ನೀಡಲಾಗಿದೆ. ಈ ತಾತ್ಕಾಲಿಕ ನೋಂದಣಿಯ ವಿವರಗಳನ್ನು 24.12.2024ರಂದು ಮಂಗಳೂರು ಕಚೇರಿಯಲ್ಲಿ ಮಾರ್ಪಾಡುಗೊಳಿಸಿ, ಈ ಕಾರಿನ ಮಾರಾಟ ಮೊತ್ತ ₹32,15,000 ಎಂದು ನಮೂದಿಸಲಾಗಿದೆ. ಈ ಅಕ್ರಮ ವೆಸಗಿದ ಕಾರಣಕ್ಕಾಗಿ ಈ ಮೂವರ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗಿದೆ ಎಂದು ಸಾರಿಗೆ ಆಯುಕ್ತ ಯೋಗೀಶ್ ಎ.ಎಂ. ಅವರು ಹೊರಡಿಸಿರುವ ಅಮಾನತು ಆದೇಶದಲ್ಲಿ ತಿಳಿಸಿದ್ದಾರೆ.

ಅಮಾನತು ಅವಧಿಯ ನಂತರ ನೀಲಪ್ಪ ಕೆ.ಎಚ್. ಅವರ ಹುದ್ದೆಯ ಲೀನ್‌ಅನ್ನು ಶಿವಮೊಗ್ಗ, ರೇಖಾ ನಾಯಕ್ ಅವರ ಹುದ್ದೆಯ ಲೀನ್ ಅನ್ನು ಚಿಕ್ಕಮಗಳೂರು, ಸರಸ್ವತಿ ಅವರ ಹುದ್ದೆಯ ಲೀನ್ ಅನ್ನು ಬೆಂಗಳೂರು (ಉತ್ತರ) ಕಚೇರಿಗೆ ಸ್ಥಳಾಂತರಿಸಲಾಗಿದೆ.

ಬೆಂಗಳೂರಿನ ಹೆಚ್ಚುವರಿ ಸಾರಿಗೆ ಆಯುಕ್ತರು (ಆಡಳಿತ) ಮಂಗಳೂರು ಕಚೇರಿಗೆ ಭೇಟಿ ನೀಡಿ ವಾಹನ ಸಂಖ್ಯೆ ಕೆಎ20 ಎಂಎಚ್0888ಕ್ಕೆ ಸಂಬಂಧಿಸಿದ ತಾತ್ಕಾಲಿಕ ನೋಂದಣಿಯ ವಿವರವನ್ನು ಮಾರ್ಪಾಡು ಮಾಡಿದ್ದನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದರು ಎಂದು ತಿಳಿಸಲಾಗಿದೆ.

ದ್ವೇಷ ಭಾಷಣ: ಅಂಕುಶಕ್ಕೆ ತಾಕೀತು

ಒಂದನೇ ಪುಟದಿಂದ...

'ದಕ್ಷಿಣ ಕನ್ನಡ ಜಿಲ್ಲೆಯ ನೆಮ್ಮದಿ ಕೆಡಿಸುವವರನ್ನು ಮೂಲದಿಂದಲೇ ಪತ್ತೆಹಚ್ಚಿ, ಅವರು ಯಾರೇ ಇದ್ದರೂ ಕಠಿಣ ಕಾನೂನು ಕ್ರಮ ಕೈಗೊಳ್ಳಿ' ಎಂದು ಮುಖ್ಯಮಂತ್ರಿ ಸೂಚನೆ ನೀಡಿದರು.



ಸಿದ್ದರಾಮಯ್ಯ

'ನಾವು ವ್ಯವಸ್ಥೆಯನ್ನು ದೂಷಿಸಿಕೊಂಡು ಕೈ–ಕಟ್ಟಿಕೊಂಡು ಕೂರುವುದಿಲ್ಲ. ಪೊಲೀಸ್ ಠಾಣೆಗಳು ಜನಸ್ನೇಹಿ ಆಗುವ ಜತೆಗೆ ಅಪರಾಧ ಮನಃಸ್ಥಿತಿಯವರಿಗೆ ಕಾನೂನಿನ ಬಗ್ಗೆ ಭಯ ಇರುವ ವಾತಾವರಣ ಸೃಷ್ಟಿಸಬೇಕು' ಎಂದು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗೃಹ ಸಚಿವ ಜಿ.ಪರಮೇಶ್ವರ ಮಾತನಾಡಿ, 'ಕರಾವಳಿ ಭಾಗದಲ್ಲಿ ಸೌಹಾರ್ದ ಕಾಪಾಡಲು ವಿವಿಧ ಧಾರ್ಮಿಕ ಸಂಘಟನೆಗಳ ಮುಖಂಡ ಜತೆಗೆ ಸಭೆ ನಡೆಸಬೇಕು. ದ್ವೇಷ ಭಾಷಣ, ಪ್ರಚೋದನಾತ್ಮಕ ಭಾಷಣ ಮಾಡುವವರ ವಿರುದ್ಧ ಮುಲಾಜಿಲ್ಲದೆ ಕ್ರಮ ಜರುಗಿಸಬೇಕು. ಇದೇ ಕಾರಣದಿಂದ ಆ ಭಾಗದ ಜನ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ. ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಮಂಗಳೂರು ಬಿಟ್ಟು ಬೆಂಗಳೂರು, ಮೈಸೂರಿಗೆ ಕಳುಹಿಸುತ್ತಿದ್ದಾರೆ' ಎಂದು ಹೇಳಿದರು.

'ಎಸ್‌ಸಿ, ಎಸ್‌ಟಿ ಸಮುದಾಯಗಳ ಜನರೊಂದಿಗೆ ಕಾಟಾಚಾರಕ್ಕೆ ಸಭೆಗಳನ್ನು ಮಾಡುವುದು ಸರಿಯಲ್ಲ. ಶೋಷಿತರು, ಬಡವರ ಸಮಸ್ಯೆಗಳನ್ನು ಬಗೆಹರಿಸುವುದರಿಂದ ನೀವು ಏನು ಕಳೆದುಕೊಳ್ಳುತ್ತೀರಿ? ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಶೇ 2ರಷ್ಟಿದೆ. ಈ ಪ್ರಕರಣಗಳಲ್ಲಿ ತ್ವರಿತವಾಗಿ ದೋಷಾರೋಪ ಪಟ್ಟಿ ದಾಖಲಿಸುತ್ತಿಲ್ಲ. ಇದೇ ಕಾರಣಕ್ಕೆ ಸಾಕ್ಷ್ಯ ನಾಶವಾಗುತ್ತದೆ. ಈ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಿದೆ ಎಂದು ಗೃಹ ಸಚಿವರು ಸೂಚಿಸಿದರು.

ಟೆಂಡರ್ ರದ್ದಾದರೂ ಮಂಚ

ಒಂದನೇ ಪುಟದಿಂದ...

ಸಮಾಜ ಕಲ್ಯಾಣ ಇಲಾಖೆ ಅಧೀನದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ ₹5 ಕೋಟಿ ಹಾಗೂ ₹9.5 ಕೋಟಿ ಮೊತ್ತದಲ್ಲಿ ಎರಡು ಸ್ತರದ ಮಂಚಗಳನ್ನು (ಟೂ–ಟೈರ್ ಕಾಟ್) ಪೂರೈಸಲು ಅರ್ಹ ತಯಾರಕರು, ಸರಬರಾಜುದಾರರಿಂದ ಇದೇ ವರ್ಷದ ಮಾರ್ಚ್‌ನಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿತ್ತು.



ಟೆಂಡರ್ ಪ್ರಕ್ರಿಯೆಯಲ್ಲಿ ಏಳು ಮಂದಿ ಬಿಡ್‌ದಾರರು ಭಾಗವಹಿಸಿದ್ದರು. ಹಲವು ಅರ್ಹ ಕಂಪನಿಗಳು ಇದ್ದರೂ, ನಿಯಮಗಳನ್ನು ಉಲ್ಲಂಘಿಸಿ ನಿಗದಿತ ಅರ್ಹತೆ ಪಡೆಯದ 'ಛಾಯ್ಸ್ ಫರ್ನ್ ಟೆಕ್ ಎಲ್‌ಎಲ್‌ಪಿ' ಕಂಪನಿಗೆ ಮೊದಲ ಹಂತದಲ್ಲಿ ₹5 ಕೋಟಿ ಮೊತ್ತಕ್ಕೆ (ಆಯ್ಕೆಯಾದ ಗುತ್ತಿಗೆ ಕಂಪನಿ ನಮೂದಿಸಿದ ಮೊತ್ತ ₹4.76 ಕೋಟಿ) ಮಂಚಗಳನ್ನು ಪೂರೈಸಲು ಅವಕಾಶ ನೀಡಲಾಗಿದೆ.

ಅರ್ಹ ಕಂಪನಿಗಳಿಂದ ದೂರು ಸಲ್ಲಿಕೆ: 'ಯಾವುದೇ ಸಾಮಗ್ರಿಯನ್ನು ಸರಬರಾಜು ಮಾಡಲು ಇ-ಟೆಂಡರ್‌ಗೆ ಅರ್ಜಿ ಸಲ್ಲಿಸುವ ಕಂಪನಿಗಳು ಸರ್ಕಾರ ಹಾಗೂ ಸರ್ಕಾರದ ಸಂಸ್ಥೆಗಳಿಗೆ, ನಿಗಮಗಳಿಗೆ ನಿಗದಿತ ಸಾಮಗ್ರಿಗಳನ್ನು ಪೂರೈಸಿದ ಅನುಭವ ಪ್ರಮಾಣಪತ್ರ ಹೊಂದಿರಬೇಕು. ಆದರೆ, ಆಯ್ಕೆಯಾದ ಕಂಪನಿಗೆ ಅಂತಹ ಯಾವುದೇ ಅರ್ಹತೆ ಇಲ್ಲ. ಬೇರೆ ಕಂಪನಿಗಳ ಜತೆ ಒಪ್ಪಂದ ಮಾಡಿಕೊಂಡು ಉಪಗುತ್ತಿಗೆ ಪಡೆದು ಸಾಮಗ್ರಿ ಪೂರೈಸುತ್ತಿದೆ. ತಾಂತ್ರಿಕ ಪರಿಶೀಲನೆಗೆ ಬೇರೆಬೇರೆ ರೀತಿಯ ಮಂಚಗಳ ಮಾದರಿಗಳನ್ನು ನೀಡಿದೆ. ಟೆಂಡರ್‌ನಲ್ಲಿ ನಮೂದಿಸಿದ ಷರತ್ತುಗಳನ್ನು ಪೂರೈಸಿಲ್ಲ. ಈ ಮಾದರಿಗಳಲ್ಲಿ ಹಲವು ನ್ಯೂನತೆ, ವ್ಯತ್ಯಾಸಗಳಿವೆ. ಅಂತಹ ಮಂಚಗಳನ್ನು ಪೂರೈಸಿದರೆ ವಿದ್ಯಾರ್ಥಿಗಳ ದೈಹಿಕ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಹಾಗಾಗಿ, ಟೆಂಡರ್ ರದ್ದು ಮಾಡಬೇಕು' ಎಂದು ಕರ್ನಾಟಕ ಸರ್ಕಾರದ ಉದ್ಯಮವಾದ ಬೆಂಗಳೂರು ನಗರ ಜಿಲ್ಲಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ ಸೇರಿದಂತೆ ಹಲವು ಕಂಪನಿಗಳು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದರು.

ತಾಂತ್ರಿಕ ಅನುಮತಿಯಲ್ಲೂ ಭಿನ್ನ ಪತ್ರ

ಸರ್ಕಾರದ ಇಲಾಖೆಗಳು, ಸಂಸ್ಥೆ, ನಿಗಮ ಮಂಡಳಿಗೆ ಸಾಮಗ್ರಿ ಸರಬರಾಜು ಮಾಡುವ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿನಿಯಮದ ಪ್ರಕಾರ ನಿಗದಿತ ನಮೂನೆಯ ಮಾದರಿಗಳನ್ನು ಸಲ್ಲಿಸಬೇಕು. ಅವುಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆ ನಿಯೋಜಿಸಿದ ತಾಂತ್ರಿಕ ಪರಿಶೀಲನಾ ಸಮಿತಿ ಪರಿಶೀಲಿಸಿ, ಪ್ರಮಾಣಪತ್ರ ನೀಡುತ್ತದೆ. ನಂತರವೇ ಆರ್ಥಿಕ ಬಿಡ್ ತೆರೆಯಲಾಗುತ್ತದೆ.

ತಾಂತ್ರಿಕ ಸಮಿತಿ ಪರಿಶೀಲನೆಯ ವೇಳೆ 'ಛಾಯ್ಸ್ ಫರ್ನ್ ಟೆಕ್ ಎಲ್‌ಎಲ್‌ಪಿ ಕಂಪನಿ' ನಿಗದಿಪಡಿಸಿದ ಮಾದರಿಗಳನ್ನು ನೀಡಿಲ್ಲ ಎಂದು ಪ್ರಮಾಣಪತ್ರ ನೀಡಿದೆ. ಕೆಲ ದಿನಗಳ ನಂತರ ಮತ್ತೆ ಅದೇ ಕಂಪನಿಯ ಮಾದರಿಗಳನ್ನು ಅನುಮೋದಿಸಿ ಸಮಿತಿ ಮತ್ತೊಂದು ಪತ್ರ ನೀಡಿದೆ.

ಚಿಟಿಕೆ ಸುದ್ದಿ

ಪಕ್ಷದಲ್ಲಿ ಆಂತರಿಕ ಜಗಳವಿಲ್ಲ: ಸಿ.ಎಂ

ಬೆಂಗಳೂರು: ಪಕ್ಷದಲ್ಲಿ ಆಂತರಿಕ ಜಗಳ ಇಲ್ಲ. ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಹೇಳಿಕೆ ನಿರ್ಲಕ್ಷಿಸುವುದೇ ಒಳ್ಳೆಯದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯ ರಾಜಕೀಯದಲ್ಲಿ ಬೆಳವಣಿಗೆಯಾಗಬಹುದು ಎಂದು ರಾಜಣ್ಣ ಹೇಳಿದ್ದರೆ, ಇಂಥದ್ದೇ ಆಗುತ್ತದೆ ಎಂದು ಹೇಳಿಲ್ಲ. ಇಂತಹ ಹೇಳಿಕೆಗಳನ್ನು ಹೇಗಾದರೂ ಅರ್ಥೈಸಿಕೊಳ್ಳಬಹುದು ಎಂದರು.


'ಸಿ.ಎಂ ದುರ್ಬಲರಲ್ಲ'

ಬೆಂಗಳೂರು: ಯಾರೋ ಪದೇ ಪದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ದುರ್ಬಲ ಎಂದು ಹೇಳುತ್ತಿರುವ ಕಾರಣ ಅವರು ದುರ್ಬಲರಂತೆ ಬಿಂಬಿತರಾಗಿದ್ದಾರೆ. ವಾಸ್ತವದಲ್ಲಿ ಅವರು ದುರ್ಬಲರಲ್ಲ ಎಂದು ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	121.00	52,829	40,000
ಹಾರಂಗಿ	2,859	2,850.84	7,445	7,833
ಕಬಿನಿ	2,284.00	2,279.40	31,847	30,000
ಹೇಮಾವತಿ	2,922	2,915.91	37,258	36,105
ಲಿಂಗನಮಕ್ಕಿ	1,819	1,783.20	37,635	3,989
ಸೂಪಾ (ಮೀ)	564	537.54	17,467	3,800.40
ಮಾಣಿ	595	582.72	5,694	-
ತುಂಗಭದ್ರಾ	1,633	1,618.32	44,569	201
ಮಲಪ್ರಭಾ	2,079.5	2,059.35	10,032	194
ಘಟಪ್ರಭಾ	2175	2,139.00	23,910	100
ಭದ್ರಾ *	186	159.6	26,646	1,287
ಆಲಮಟ್ಟಿ (ಮೀ)	519.6	516.97	1,20,861	90,000
ನಾರಾಯಣಪುರ (ಮೀ)	492.25	490.63	70,000	65,180

* ನೆಲಮಟ್ಟದಿಂದ



ಕೊಡಗು ಜಿಲ್ಲೆಯ ಶಾಲಾ ಕಾಲೇಜುಗಳಿಗೆ ಶನಿವಾರ ರಜೆ ಘೋಷಣೆ

'ಮಹಾ' ಮಳೆ: ಕೃಷ್ಣೆಯಲ್ಲಿ 1.19 ಲಕ್ಷ ಕ್ಯೂಸೆಕ್ ಹರಿವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರ ಹಾಗೂ ಜಿಲ್ಲೆಯಲ್ಲಿ ಶುಕ್ರವಾರ ಮಳೆ ಪ್ರಮಾಣ ಮತ್ತಷ್ಟು ತಗ್ಗಿದೆ. ಆದರೆ, ಮಹಾರಾಷ್ಟ್ರದಲ್ಲಿ ಸುರಿಯುತ್ತಿರುವ ಮಳೆಯ ಪರಿಣಾಮ, ಜಿಲ್ಲೆಯಲ್ಲಿ ಕೃಷ್ಣಾ ಹಾಗೂ ಉಪನದಿಗಳಲ್ಲಿ 1.19 ಲಕ್ಷ ಕ್ಯೂಸೆಕ್ ನೀರು ಹರಿದುಬರುತ್ತಿದೆ.

ಕೊಲ್ಹಾಪುರ ಜಿಲ್ಲೆಯ ರಾಜಾಪುರ ಬ್ಯಾರೇಜಿನಿಂದ ಕೃಷ್ಣಾ ನದಿಗೆ 84,500 ಕ್ಯೂಸೆಕ್ ಹೊರ ಹರಿವು ಇದ್ದು, ಸದಲಗಾ ಪಟ್ಟಣದ ಬಳಿಯಲ್ಲಿ ದೂಧಗಂಗಾ ನದಿಗೆ 26,400 ಕ್ಯೂಸೆಕ್ ಒಳ ಹರಿವು ಇದೆ. ಮುಳುಗಡೆಯಾದ 8 ಸೇತುವೆಗಳು ಇನ್ನೂ ತೆರವುಗೊಂಡಿಲ್ಲ.

'ಹುಕ್ಕೇರಿ ತಾಲ್ಲೂಕಿನಲ್ಲಿ ಮಳೆ ಮುಂದುವರಿದಿದ್ದು ಘಟಪ್ರಭಾ, ಹಿರಣ್ಯಕೇಶಿ ಮತ್ತು ಮಾರ್ಕಂಡೇಯ ನದಿಗಳ ಹರಿವು ಹೆಚ್ಚಾಗಿದೆ. ತಾಲ್ಲೂಕಿನ ಶಿರೂರ ಬಳಿ ಮಾರ್ಕಂಡೇಯ ನದಿಗೆ ನಿರ್ಮಿಸಿದ 'ಶಿರೂರ ಡ್ಯಾಂ'ನ 4 ಕ್ರಸ್ಟ್ ಗೇಟ್ ಮೂಲಕ ನದಿಗೆ 2,500 ಕ್ಯೂಸೆಕ್ ನೀರು ಶುಕ್ರವಾರ ಹರಿಸಲಾಗಿದೆ' ಎಂದು ಎಂಜಿನಿಯರ್ ಪ್ರವೀಣ ಅರಳಿಕಟ್ಟಿ ತಿಳಿಸಿದ್ದಾರೆ.

ಹಿಡಕಲ್ ಜಲಾನಯದಲ್ಲಿ ಒಂದೇ ದಿನ 4 ಅಡಿ ನೀರು ಸಂಗ್ರಹವಾಗಿದೆ. ಶುಕ್ರವಾರ ಬೆಳಿಗ್ಗೆ 23,910 ಕ್ಯೂಸೆಕ್ ಒಳಹರಿವು ಇತ್ತು.

ತುಂಗಭದ್ರಾ: 44 ಸಾವಿರ ಕ್ಯೂಸೆಕ್ ಒಳಹರಿವು

ಹೊಸಪೇಟೆ (ವಿಜಯನಗರ) ವರದಿ: ಶಿವಮೊಗ್ಗ ಭಾಗದಲ್ಲಿ ಉತ್ತಮ ಮಳೆಯಾಗುತ್ತಿದ್ದು ತುಂಗಭದ್ರಾ ಜಲಾಶಯದ ಒಳಹರಿವು ಪ್ರಮಾಣ 44,569 ಕ್ಯೂಸೆಕ್‌ನಷ್ಟಿದ್ದು, ಸದ್ಯ ಜಲಾಶಯದಲ್ಲಿ 56.74 ಟಿಎಂಸಿ ಅಡಿ ನೀರು ಸಂಗ್ರಹವಿದೆ. 'ಜೂನ್ ತಿಂಗಳಲ್ಲಿ ಜಲಾಶಯದಲ್ಲಿ 56 ಟಿಎಂಸಿ ಅಡಿಗಳಷ್ಟು ನೀರು ತುಂಬಿದ್ದು ಮೂರು ದಶಕಗಳಲ್ಲಿ ಇದೇ ಮೊದಲು' ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

ಆಲಮಟ್ಟಿ ವರದಿ: ಆಲಮಟ್ಟಿ ಜಲಾಶಯದ ಒಳಹರಿವು ಶುಕ್ರವಾರ ಸಂಜೆ 1.20 ಲಕ್ಷ ಕ್ಯೂಸೆಕ್ ಗೆ ಹೆಚ್ಚಳವಾಗಿದ್ದರಿಂದ ರಾತ್ರಿ 7.30 ರಿಂದ ಹೊರಹರಿವನ್ನು 90 ಸಾವಿರ ಕ್ಯೂಸೆಕ್ ಗೆ ಹೆಚ್ಚಿಸಲಾಗಿದೆ. ಮಹಾರಾಷ್ಟ್ರದ ಕೃಷ್ಣಾ ಕಣಿವೆಯಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಜಲಾಶಯದ ಒಳಹರಿವು ದಿನೇ ದಿನೇ ಏರಿಕೆಯಾಗುತ್ತಿದೆ.

ಕೊಡಗು: ನಿಲ್ಲದ ಹಾನಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಶುಕ್ರವಾರ ಮಳೆ ನಿಯಂತ್ರಣಕ್ಕೆ ಬಂದಿದೆ. ಆದರೂ, ಹಲವೆಡೆ ಹಾನಿ ಮುಂದುವರಿದಿದೆ. ಗುರುವಾರ ಸುರಿದ ಮಳೆಯಿಂದ ಇನ್ನೂ ಜಿಲ್ಲೆಯ ನದಿ, ತೊರೆಗಳು ತುಂಬಿ ಹರಿಯುತ್ತಿವೆ.

ಜಿಲ್ಲೆಯ ಎಲ್ಲಾ ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜಿಗೆ ಜೂನ್ 28ರಂದು ರಜೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ಅವರು ತಿಳಿಸಿದ್ದಾರೆ.

ಪ್ರವಾಹಪೀಡಿತ ನಾಪೋಕ್ಲು ಹೋಬಳಿಯ ಕೆಲವೆಡೆ ರಸ್ತೆಗಳಲ್ಲಿ ನೀರು ಕಡಿಮೆಯಾಗಿದೆ. ಇನ್ನೂ ಕೆಲವೆಡೆ ನೀರು ಹರಿಯುತ್ತಿದೆ. ಮಳೆ ಇಳಿಮುಖವಾಗಿರುವುದರಿಂದ ಶನಿವಾರ ಸಹಜ ಸ್ಥಿತಿಗೆ ಬರುವ ನಿರೀಕ್ಷೆ ಇದೆ.



ಕುಮಾರಳ್ಳಿ ಬಾಚಳ್ಳಿ ಗ್ರಾಮದ ಕುಂದಳ್ಳಿ ಪುಷ್ಪಗಿರಿ ಸಂಪರ್ಕಿಸುವ ರಸ್ತೆಗೆ ಮಣ್ಣು ಕುಸಿದಿದೆ

ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿ ಹೋಬಳಿಯ ಕುಮಾರಳ್ಳಿ ಬಾಚಳ್ಳಿಯ ಕುಂದಳ್ಳಿ - ಪುಷ್ಪಗಿರಿ ಸಂಪರ್ಕಿಸುವ ರಸ್ತೆಯ ಮೇಲೆ ಮಣ್ಣು ಕುಸಿದು, ವಿದ್ಯುತ್ ಕಂಬಗಳು ಮುರಿದಿವೆ.

ಬೆಳಗಾವಿ: ಮೇಯರ್ ಸದಸ್ಯತ್ವ ರದ್ದು

ಸ್ವಂತ ಲಾಭಕ್ಕೆ ನಗರದ ಮಳಿಗೆ ದುರ್ಬಳಕೆ • ಪಾಲಿಕೆ ಸದಸ್ಯನ ಸದಸ್ಯತ್ವವೂ ರದ್ದು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಮೇಯರ್ ಮಂಗೇಶ ಪವಾರ ಹಾಗೂ ಪಾಲಿಕೆ ಸದಸ್ಯ ಜಯಂತ ಜಾಧವ ಅವರ ಸದಸ್ಯತ್ವ ರದ್ದುಗೊಳಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

‘ಪಾಲಿಕೆಯ ಬಿಜೆಪಿಯ ಸದಸ್ಯರಾದ ಜಯಂತ ಜಾಧವ (ವಾರ್ಡ್ ಸಂಖ್ಯೆ-23) ಮತ್ತು ಮಂಗೇಶ ಪವಾರ (ವಾರ್ಡ್ ಸಂಖ್ಯೆ-41) ಅವರು ನಗರದ ತಿನಿಸುಕಟ್ಟೆಯ ಮಳಿಗೆಗಳನ್ನು ತಮ್ಮ ಪತ್ನಿಯರ ಹೆಸರಿನಲ್ಲಿ ಬಾಡಿಗೆಗೆ ಪಡೆದು, ಸ್ವಯಂ ಲಾಭ ಮಾಡಿಕೊಂಡಿದ್ದಾರೆ. ಈ ಅಕ್ರಮದ ಕಾರಣಕ್ಕಾಗಿ ಅವರ ಸದಸ್ಯತ್ವ ರದ್ದು ಮಾಡಬೇಕು’ ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಸುಜಿತ್ ಮುಳಗುಂದ 2024ರ ನವೆಂಬರ್‌ನಲ್ಲಿ ದೂರು ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಪ್ರಾದೇಶಿಕ ಆಯುಕ್ತ ಸಂಜಯ ಶೆಟ್ಟೆಣ್ಣವರ, ಇಬ್ಬರ ಸದಸ್ಯತ್ವ ರದ್ದುಗೊಳಿಸಿದ್ದರು. ಇದನ್ನು ಪ್ರಶ್ನಿಸಿ ಇಬ್ಬರೂ ಹೈಕೋರ್ಟ್ ಮೊರೆ


ಮಂಗೇಶ ಪವಾರ


ಜಯಂತ ಜಾಧವ

ಹೋಗಿದ್ದರು. ಆದೇಶ ತಡೆಹಿಡಿದ ಹೈಕೋರ್ಟ್, 2025ರ ಮಾರ್ಚ್ 15ರಂದು ನಡೆದ ಮೇಯರ್, ಉಪ ಮೇಯರ್ ಚುನಾವಣೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿತ್ತು. ಮಂಗೇಶ ಪವಾರ ಅವಿರೋಧವಾಗಿ ಮೇಯರ್ ಆಗಿ ಆಯ್ಕೆಯಾದರು.

ಈ ಪ್ರಕರಣದ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಹೈಕೋರ್ಟ್‌ನ ಧಾರವಾಡ ಪೀಠ ಸರ್ಕಾರಕ್ಕೆ ಆದೇಶ ನೀಡಿತ್ತು. ವಿಚಾರಣೆ ನಡೆಸಿದ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ದೀಪಾ ಚೋಳನ್, ಪ್ರಾದೇಶಿಕ ಆಯುಕ್ತರ ಆದೇಶವನ್ನೇ ಸಮರ್ಥನೆ ಮಾಡಿದ್ದಾರೆ.

‘ಈ ಇಬ್ಬರೂ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗುವ ಮುನ್ನ ತಮ್ಮ ಪತ್ನಿಯರ ಹೆಸರಿನಲ್ಲಿ ವಾಣಿಜ್ಯ ಮಳಿಗೆ ಪಡೆದಿದ್ದರು. ಚುನಾಯಿತರಾದ ಬಳಿಕ ಅವುಗಳನ್ನು ಬಿಟ್ಟುಕೊಡಬೇಕಿತ್ತು. ಆದರೆ, ಇಬ್ಬರೂ ಕರ್ನಾಟಕ ಮುನ್ಸಿಪಲ್ ಕಾಯ್ದೆ (ಕೆಎಂಸಿ) ಉಲ್ಲಂಘಿಸಿದ್ದಾರೆ. ಇವರ ಸದಸ್ಯತ್ವ ರದ್ದು ಮಾಡಲಾಗಿದೆ’ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಮೆಟ್ಟಿಲು ಹತ್ತಿ ಬಂದವರಿಗೆ ಸಿಗದ ನೇರ ದರ್ಶನ • ಅವ್ಯವಸ್ಥೆಗೆ ಜನ ಹೈರಾಣ

ಚಾಮುಂಡಿ ದರ್ಶನಕ್ಕೆ ಸುಸ್ತಾದ ಭಕ್ತರು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಚಾಮುಂಡಿ ಬೆಟ್ಟದಲ್ಲಿ ಆಷಾಢ ಮೊದಲನೇ ಶುಕ್ರವಾರದ ಪ್ರಯುಕ್ತ ಸರದಿ ಸಾಲಿನಲ್ಲಿ ಗಂಟೆಗಟ್ಟಲೇ ಕಾದರೂ ದರ್ಶನ ಸಿಗದೇ ಹಲವು ಭಕ್ತರು ನಿರಾಶರಾಗಿ ವಾಪಸಾದರು.

ಶಿವಮೊಗ್ಗ, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಭಕ್ತರು ಬೆಟ್ಟದ ಪಾದದ ಮೂಲಕ ಹತ್ತಿ ಬಂದರೂ, ಜಿಲ್ಲಾಡಳಿತವು ಹೇಳಿದಂತೆಯೇ ನೇರ ದರ್ಶನದ ಅವಕಾಶವನ್ನು ವ್ಯವಸ್ಥಿತವಾಗಿ ಮಾಡಲಿಲ್ಲ. ಏಳೆಂಟು ಗಂಟೆ ಕಾದವರಿಗೂ ದೇಗುಲದ ನವರಂಗದಲ್ಲಿ ಪೊಲೀಸರು ಕೇವಲ ‘ಐದು ಸೆಕೆಂಡ್’ನ ದರ್ಶನವಕಾಶ ನೀಡಿದ್ದು, ಅಸಮಾಧಾನಕ್ಕೂ ಕಾರಣವಾಯ್ತು. ಗರ್ಭಗುಡಿಯ ಹಿಂಭಾಗ ಹಾಗೂ ದೇಗುಲದ ಹೊರ ಬಂದು ಕುಳಿತ ಹಲವರು ನೋವು ನುಂಗಿಕೊಂಡರು.

ಜನಜಂಗುಳಿ: ಬೆಟ್ಟದ ಪಾದದಿಂದ, 1,101 ಮೆಟ್ಟಿಲು ಹತ್ತಿ ಬಂದವರಿಗೆ ನೇರ ದರ್ಶನದ ಅವಕಾಶ ಕಲ್ಪಿಸಲು, ಪ್ರತ್ಯೇಕ ಸರದಿ ಸಾಲನ್ನು ಮಾಡಲಾಗಿದೆ’ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಹೇಳಿದ್ದರು. ಅದರಿಂದ ಮುಂಜಾನೆಯಿಂದಲೇ ಉತ್ಸಾಹದಿಂದ ಸಾವಿರಾರು ಭಕ್ತರು ಹರಿದು ಬಂದಿದ್ದರು.

‘ಕೊನೆಯ 100 ಮೆಟ್ಟಿಲು ಇರುವಾಗ ಹೆಚ್ಚು ಜನಸಂದಣಿ ಉಂಟಾಯಿತು. ಕಿರಿದಾದ ಬ್ಯಾರಿಕೇಡ್ ಹಾಕಿದ್ದರಿಂದ ಭಕ್ತರಿಗೆ ಉಸಿರಾಡಲು ಕಷ್ಟವಾಯಿತು. ಹೀಗಾಗಿ ಹಲವರು ದೇಗುಲದ ಹೊರ ಗೋಡೆಯ ಆವರಣಕ್ಕೆ ಬರಲು ಎರಡೂವರೆ ಗಂಟೆಯಾಯಿತು. ಒಳಕ್ಕೆ ಹೋಗಲು ಮತ್ತೆ ಕಾಯಬೇಕು, ಬ್ಯಾರಿಕೇಡ್ ಒಳಗೇ ನೂಕುನುಗ್ಗಲಾಗುವ ಹೆದರಿಕೆಯಿಂದ ದರ್ಶನ ಮಾಡದೇ ವಾಪಸಾದೆವು’ ಎಂದು ಭಕ್ತರಾದ ಬನ್ನಿಮಂಟಪದ ಸುಮಾ, ಪೂರ್ಣಿಮಾ ಬೇಸರ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ದೇವಿಯ ದರ್ಶನ ಐದೇ ಸೆಕೆಂಡ್
- ಕಿರಿದಾದ ಬ್ಯಾರಿಕೇಡ್‌ಗಳಲ್ಲಿ ಇಕ್ಕಟ್ಟು
- ಭಕ್ತರಿಗೆ ಉಸಿರಾಡಲೂ ತೊಂದರೆ

ಮೆಟ್ಟಿಲು ಹತ್ತಿ ಬಂದವರಿಗೆ ನೇರ ದರ್ಶನ ಸಿಗಲಿಲ್ಲ. ಜನರನ್ನು ದಾರಿ ತಪ್ಪಿಸಿದ್ದಾರೆ. ಬಾದಾಮಿ ಹಾಲಿರಲಿ ಕುಡಿಯುವ ನೀರು ಸಿಗಲಿಲ್ಲ. ಮೊದಲಿನಂತೆಯೇ ಬೆಟ್ಟ ಇರಲು ಬಿಡಿ
ಸಂತೋಷ್, ಶಿವಮೊಗ್ಗ

ದರ್ಶನಕ್ಕೆ ₹ 2 ಸಾವಿರ ಟಿಕೆಟ್ ಪಡೆದಿದ್ದೆವು. ಜನರು ಹೆಚ್ಚಿದ್ದರಿಂದ ಒಂದೂವರೆ ಗಂಟೆ ಕಾದೆವು
ಭೂಮಿಕಾ, ಗಿರಿನಗರ, ಬೆಂಗಳೂರು


ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಆಷಾಢ ಮಾಸದ ಮೊದಲನೇ ಶುಕ್ರವಾರ ಪ್ರಯುಕ್ತ ಹರಿದು ಬಂದ ಭಕ್ತರು ದರ್ಶನಕ್ಕೆ ಸರದಿ ಸಾಲಿನಲ್ಲಿ ನಿಂತಿದ್ದರು
– ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಸಿಗದ ಹಾಲು, ಡ್ರೈಫ್ರೂಟ್ಸ್: ಧರ್ಮದರ್ಶನದ ಸಾಲಿನಲ್ಲಿ ಬರುವವರಿಗೆ ಉಚಿತವಾಗಿ ಡ್ರೈಫ್ರೂಟ್ಸ್ ಪಾಕೆಟ್, ಬಾದಾಮಿ ಹಾಲು ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಾಗಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ಹೇಳಿತ್ತು. ಆ ವ್ಯವಸ್ಥೆಯೂ ಆಗಲಿಲ್ಲ. ಆದರೆ, ದರ್ಶನ ಪಡೆದ ಮಹಿಳೆಯರಿಗೆ ಕುಂಕುಮ, ಮುತ್ತೈದೆಯರಿಗೆ ಮಡಿಲಕ್ಕಿ, ಲಾಡು ಪ್ರಸಾದ ಪ್ಯಾಕೆಟ್‌ಗಳನ್ನು ಮಾತ್ರ ಉಚಿತವಾಗಿ ನೀಡಲಾಯಿತು.

‘ರೀಲ್ಸ್’ ಮಾಡಿದರೆ ಫೋನ್ ವಶಪಡಿಸಿಕೊಳ್ಳಲಾಗುವುದೆಂದು ಹೇಳಲಾಗಿತ್ತು. ಆದರೆ, ದೇವಾಲಯದಲ್ಲಿ ಗರ್ಭಗುಡಿ ಹೊರತುಪಡಿಸಿ, ಉಳಿದೆಲ್ಲ ಕಡೆ ಹಲವರು ಮೊಬೈಲ್ ಫೋನ್ ಹಾಗೂ ಕ್ಯಾಮೆರಾದಲ್ಲಿ ಫೋಟೊ ತೆಗೆಯುವುದರ ಜೊತೆಗೆ ರೀಲ್ಸ್ ಮಾಡುತ್ತಿದ್ದರು. ₹2 ಸಾವಿರದ ಟಿಕೆಟ್ ವ್ಯವಸ್ಥೆಯಿದ್ದವರೂ ದರ್ಶನಕ್ಕೆ ಒಂದೂವರೆ ಗಂಟೆ ಸರದಿಯಲ್ಲಿ ಕಾದಿದ್ದರು. ವಿವಿಐಪಿ ಸಾಲಿನಲ್ಲಿ ಜಿಲ್ಲಾಧಿಕಾರಿಯೂ ಕೆಲವು ನಿಮಿಷ ಕಾದದ್ದು, ಅವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿತ್ತು.

ಗಡಿಯಲ್ಲಿ ಶಾಂತಿ ಸ್ಥಾಪನೆ; ಚರ್ಚೆ

ಚಿಂಗ್‌ಡಾವ್‌ನಲ್ಲಿ ಭಾರತ– ಚೀನಾ ರಕ್ಷಣಾ ಸಚಿವರ ಮಾತುಕತೆ

ಚಿಂಗ್‌ಡಾವ್/ನವದೆಹಲಿ (ಪಿಟಿಐ): ಭಾರತ ಮತ್ತು ಚೀನಾ ನಡುವಿನ ವಿವಾದಗಳನ್ನು ವ್ಯವಸ್ಥಿತ ಯೋಜನೆ ಮೂಲಕ ಬಗೆಹರಿಸಲು ಎರಡೂ ದೇಶಗಳು ಮುಂದಾಗಬೇಕು ಎಂಬ ಪ್ರಸ್ತಾವವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಚೀನಾದ ರಕ್ಷಣಾ ಸಚಿವ ಡಾಂಗ್ ಜುನ್ ಅವರ ಮುಂದಿಟ್ಟಿದ್ದಾರೆ.

ಶಾಂಫೈ ಸಹಕಾರ ಒಕ್ಕೂಟದ (ಎಸ್‌ಸಿಒ) ಶೃಂಗಸಭೆಯ ಸಂದರ್ಭದಲ್ಲಿ ರಾಜನಾಥ್ ಮತ್ತು ಡಾಂಗ್ ಅವರು ಚೀನಾದ ಚಿಂಗ್‌ಡಾವ್‌ನಲ್ಲಿ ಗುರುವಾರ ದ್ವಿಪಕ್ಷೀಯ ಮಾತುಕತೆ ನಡೆಸಿದರು. ವಾಸ್ತವ ನಿಯಂತ್ರಣ ರೇಖೆಯುದ್ದಕ್ಕೂ (ಎಲ್‌ಎಸಿ) ಶಾಂತಿ ಕಾಪಾಡುವ ಅಗತ್ಯತೆ ಕುರಿತು ಇಬ್ಬರೂ ಈ ವೇಳೆ ವಿಸ್ತೃತ ಚರ್ಚೆ ನಡೆಸಿದ್ದಾರೆ.

ಡಾಂಗ್ ಜತೆಗಿನ ಮಾತುಕತೆ 'ರಚನಾತ್ಮಕ'ವಾಗಿತ್ತು ಎಂದು ರಾಜನಾಥ್ ಅವರು ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

'ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ದ್ವಿಪಕ್ಷೀಯ ಸಂಬಂಧಗಳ ಕುರಿತ ವಿಷಯಗಳ ಬಗ್ಗೆ ನಾವು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡಿದ್ದೇವೆ. ಸುಮಾರು ಆರು ವರ್ಷಗಳ ನಂತರ ಕೈಲಾಸ ಮಾನಸ ಸರೋವರ ಯಾತ್ರೆ ಪುನರಾರಂಭಗೊಂಡಿರುವುದಕ್ಕೆ ನನ್ನ ಸಂತಸವನ್ನು ಅವರಲ್ಲಿ ವ್ಯಕ್ತಪಡಿಸಿದೆ' ಎಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ಗಡಿಯಲ್ಲಿ ಉದ್ವಿಗ್ನತೆ ಕಡಿಮೆ ಮಾಡಲು ಮತ್ತು ಗಡಿ ರೇಖೆ ಗುರುತಿಸಲು ಅಸ್ತಿತ್ವದಲ್ಲಿರುವ ಕಾರ್ಯವಿಧಾನಗಳನ್ನು ಮರುಸ್ಥಾಪಿಸುವುದೂ ಒಳಗೊಂಡಿರುವ ವ್ಯವಸ್ಥಿತ ಯೋಜನೆ ಮೂಲಕ ವಿವಾದಗಳನ್ನು ಬಗೆಹರಿಸಬೇಕೆಂಬ ನಿಲುವು ವ್ಯಕ್ತಪಡಿಸಿದ್ದೇನೆ' ಎಂದಿದ್ದಾರೆ.

> ಭಾರತ– ಚೀನಾ ದ್ವಿಪಕ್ಷೀಯ ಸಂಬಂಧದಲ್ಲಿ ಹೊಸ ವಿವಾದಗಳು ಉಂಟಾಗದಂತೆ ನೋಡಿಕೊಳ್ಳುವುದು ಎರಡೂ ಕಡೆಯವರ ಜವಾಬ್ದಾರಿಯಾಗಿದೆ
> **ರಾಜನಾಥ್ ಸಿಂಗ್,** ರಕ್ಷಣಾ ಸಚಿವ

ಮುಖ್ಯಾಂಶಗಳು

- ವಿವಾದ ಇತ್ಯರ್ಥಕ್ಕೆ ವ್ಯವಸ್ಥಿತ ಯೋಜನೆ
- ಡಾಂಗ್ ಜುನ್ ಜತೆ ಮಾತುಕತೆ



ರಾಜನಾಥ್ ಸಿಂಗ್ ಅವರು ಡಾಂಗ್ ಜುನ್ ಅವರನ್ನು ಭೇಟಿಯಾದರು –ಪಿಟಿಐ ಚಿತ್ರ

'ಸಂಘರ್ಷ ಬಯಸುವುದಿಲ್ಲ'

ಪಹಲ್ಗಾಮ್ ಭಯೋತ್ಪಾದಕರ ದಾಳಿ ಹಾಗೂ ಭಾರತವು ಕೈಗೊಂಡ 'ಆಪರೇಷನ್ ಸಿಂಧೂರ'ದ ಬಗ್ಗೆ ರಾಜನಾಥ್ ಅವರು ಡಾಂಗ್ ಅವರಿಗೆ ವಿವರಿಸಿದ್ದಾರೆ ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

'ಭಾರತವು ಚೀನಾದೊಂದಿಗೆ ಸಂಘರ್ಷವನ್ನು ಬಯಸುವುದಿಲ್ಲ. ಪರಸ್ಪರ ಮಾತುಕತೆ ಮೂಲಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು, ಸಂವಹನ ಹೆಚ್ಚಿಸಲು ಮತ್ತು ದ್ವಿಪಕ್ಷೀಯ ಸಂಬಂಧ ಬಲಪಡಿಸಲು ಸಿದ್ಧವಾಗಿದೆ' ಎಂದು ರಾಜನಾಥ್ ಅವರು ಡಾಂಗ್ ಅವರೊಂದಿಗಿನ ಮಾತುಕತೆ ವೇಳೆ ತಿಳಿಸಿದ್ದಾರೆ' ಎಂದು ಚೀನಾ ರಕ್ಷಣಾ ಸಚಿವಾಲಯದ ಪ್ರಕಟಣೆ ಹೇಳಿದೆ.

'ಸುಖೋಯ್' ಮೇಲ್ದರ್ಜೆಗೆ ಮಾತುಕತೆ

ನವದೆಹಲಿ (ಪಿಟಿಐ): ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ಮಹತ್ವದ ಪಾತ್ರವಹಿಸಿದ್ದ ಸುಖೋಯ್–30 ಎಂಕೆಐ ಯುದ್ಧವಿಮಾನಗಳನ್ನು ಮೇಲ್ದರ್ಜೆಗೇರಿಸುವ ಕುರಿತಂತೆ ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ರಷ್ಯಾದ ರಕ್ಷಣಾ ಸಚಿವ ಆಂಡ್ರೆ ಬೆಲೊಸೊವ್ ಚೀನಾದಲ್ಲಿ ಗುರುವಾರ ದ್ವಿಪಕ್ಷೀಯ ಚರ್ಚೆ ನಡೆಸಿದ್ದಾರೆ.

ಚಿಂಗ್‌ಡಾವ್‌ನಲ್ಲಿ ನಡೆದ ಶಾಂಘೈ ಸಹಕಾರ ಒಕ್ಕೂಟದ (ಎಸ್‌ಸಿಒ) ಶೃಂಗಸಭೆಯಲ್ಲಿ ಭಾಗಿಯಾಗಿದ್ದ ಎರಡೂ ದೇಶದ ರಕ್ಷಣಾ ಸಚಿವರು ಮಾತುಕತೆ ನಡೆಸಿದ್ದು, ಇದೇ ಸಂದರ್ಭ ಕ್ಷಿಪಣಿಗಳ ತಯಾರಿಕೆ ಸೇರಿದಂತೆ ಎಸ್–400 ವಾಯು ರಕ್ಷಣಾ ವ್ಯವಸ್ಥೆಯ ಇನ್ನೆರಡು ಘಟಕಗಳ ತ್ವರಿತ ಪೂರೈಕೆಯ ಬಗ್ಗೆಯೂ ಪ್ರಸ್ತಾಪವಾಗಿದೆ ಎಂದು ರಕ್ಷಣಾ ಸಚಿವಾಲಯವು ಶುಕ್ರವಾರ ತಿಳಿಸಿದೆ.

ಭಾರತೀಯ ವಾಯುಪಡೆಯಲ್ಲಿ ಸುಮಾರು 260 ಸುಖೋಯ್ 30–ಎಂಕೆಐ ಜೆಟ್‌ಗಳಿದ್ದು, ಇವುಗಳನ್ನು ಉನ್ನತೀಕರಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಹೊಂದಲಾಗಿದೆ.

ಪ್ರಸ್ತುತ ಭೌಗೋಳಿಕ ರಾಜಕೀಯ ಸನ್ನಿವೇಶಗಳು, ಗಡಿಯಾಚೆಗಿನ ಭಯೋತ್ಪಾದನೆ ಹಾಗೂ ಭಾರತ–ರಷ್ಯಾ ನಡುವಿನ ರಕ್ಷಣಾ ಸಹಕಾರಕ್ಕೆ ಸಂಬಂಧಿಸಿದ ಹಲವು ವಿಷಯಗಳ ಕುರಿತಂತೆ ಇಬ್ಬರೂ ರಕ್ಷಣಾ ಸಚಿವರು ಸುದೀರ್ಘ ಚರ್ಚೆ ನಡೆಸಿದ್ದಾರೆ ಎಂದಿದೆ.

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿ ಹಾಗೂ ಇದಕ್ಕೆ ಪ್ರತಿಯಾಗಿ ಭಾರತವು ಕೈಗೊಂಡ ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಕುರಿತಂತೆ ರಾಜನಾಥ್ ಸಿಂಗ್ ಅವರು ಆಂಡ್ರೆ ಅವರಿಗೆ ಮಾತುಕತೆಯ ವೇಳೆ ವಿವರಿಸಿದರು ಎಂದು ಹೇಳಿದೆ.

'ಭಾರತಕ್ಕೆ ಒಪ್ಪಿಗೆಯಾಗದು'

ನವದೆಹಲಿ(ಪಿಟಿಐ): ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ರಕ್ಷಣಾ ಮಂತ್ರಿಗಳ ಸಭೆ ನಂತರ ಬಿಡುಗಡೆ ಮಾಡಲಾದ ಜಂಟಿ ಹೇಳಿಕೆಯಲ್ಲಿ ಭಯೋತ್ಪಾದನೆ ಕುರಿತಂತೆ ಉಲ್ಲೇಖವೇ ಇಲ್ಲ. ಹೀಗಾಗಿ, ಇಂತಹ ಹೇಳಿಕೆಯನ್ನು ಭಾರತ ಒಪ್ಪುವುದಿಲ್ಲ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಶುಕ್ರವಾರ ಹೇಳಿದ್ದಾರೆ.

'ಭಯೋತ್ಪಾದನೆ ಕುರಿತ ಉಲ್ಲೇಖ ಇರುವ ಹೇಳಿಕೆಯು ಸಂಘಟನೆಯ ಒಂದು ಸದಸ್ಯ ರಾಷ್ಟ್ರಕ್ಕೆ ಒಪ್ಪಿಗೆಯಾಗುತ್ತಿಲ್ಲ' ಎಂದು ಅವರು ಪರೋಕ್ಷವಾಗಿ ಪಾಕಿಸ್ತಾನವನ್ನು ಕುಟುಕಿದ್ದಾರೆ.

'ಭಯೋತ್ಪಾದನೆ ವಿರುದ್ಧದ ಹೋರಾಟವೇ ಶಾಂಘೈ ಸಹಕಾರ ಸಂಘಟನೆಯ ಮುಖ್ಯ ಉದ್ದೇಶ. ಭಯೋತ್ಪಾದನೆ ಕುರಿತಂತೆ ಭಾರತದ ಆತಂಕಗಳನ್ನು ಎಸ್‌ಸಿಒ ಹೇಳಿಕೆಯಲ್ಲಿ ಉಲ್ಲೇಖಿಸಿಲ್ಲ. ಹೀಗಾಗಿ, ಈ ವಿಚಾರವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ತೆಗೆದುಕೊಂಡ ನಿಲುವು ಸರಿಯಾಗಿಯೇ ಇದೆ' ಎಂದು ಅವರು ಹೇಳಿದ್ದಾರೆ.

ಸಭೆ ನಂತರ, ಎಸ್‌ಸಿಒ ಗುರುವಾರ ಜಂಟಿ ಹೇಳಿಕೆ ಬಿಡುಗಡೆ ಮಾಡಿತ್ತು. ಪಹಲ್ಗಾಮ್ ಉಗ್ರರ ದಾಳಿ ಬಗ್ಗೆ ಪ್ರಸ್ತಾಪ ಇಲ್ಲದಿರುವುದು ಹಾಗೂ ಪಾಕಿಸ್ತಾನ ಬೆಂಬಲಿತ ಗಡಿಯಾಚೆಯ ಭಯೋತ್ಪಾದನೆ ಕುರಿತ ಭಾರತದ ಕಳವಳವನ್ನು ಒಪ್ಪಿಕೊಳ್ಳದ ಧೋರಣೆ ಖಂಡಿಸಿ, ಜಂಟಿ ಹೇಳಿಕೆಗೆ ಸಹಿ ಹಾಕಲು ರಾಜನಾಥ್ ಸಿಂಗ್ ನಿರಾಕರಿಸಿದ್ದರು.

ಚಿಟಿಕೆ ಸುದ್ದಿ

'ಮಣಿಪುರ: ಕಿಡಿಗೇಡಿಗಳನ್ನು ನಮ್ಮ ವಶಕ್ಕೆ ನೀಡಿ'

ಇಂಫಾಲ್ (ಪಿಟಿಐ): ಬುರುಲ್ ಜಿಲ್ಲೆಗೆ ತೆರಳುತ್ತಿದ್ದ ವಾಹನವೊಂದನ್ನು ಅಡ್ಡಗಟ್ಟಿ ಅದರ ಚಾಲಕ ಹಾಗೂ ಮಹಿಳಾ ಪ್ರಯಾಣಿಕರೊಬ್ಬರ ಮೇಲೆ ದೌರ್ಜನ್ಯ ಎಸಗಿದವರನ್ನು 24 ಗಂಟೆಗಳ ಒಳಗೆ ತಮಗೆ ಒಪ್ಪಿಸುವಂತೆ ಟ್ಯಾಂಗ್‌ಖುಲ್ ನಾಗಾ ಸಮುದಾಯದ ಸಂಘಟನೆಗಳು ಕುಕಿ ಬುಡಕಟ್ಟು ಸಮುದಾಯದಕ್ಕೆ ಶುಕ್ರವಾರ ಗಡುವು ನೀಡಿವೆ.

ಮಣಿಪುರದ ಈ ಜಿಲ್ಲೆಯಲ್ಲಿ ನಾಗಾ ಬುಡಕಟ್ಟು ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಜಿಲ್ಲೆಗೆ ಅಂಟಿಕೊಂಡಿರುವ ಪ್ರದೇಶಗಳಲ್ಲಿ ಕುಕಿ ಬುಡಕಟ್ಟು ಸಮುದಾಯದವರು ವಾಸಿಸುತ್ತಾರೆ. 'ಕುಕಿ ಬುಡಕಟ್ಟು ಸಮುದಾಯದವರು ಇದೇ ಮೊದಲ ಬಾರಿಗೆ ಇಂಥ ಕೃತ್ಯ ಎಸಗಿದ್ದಾರೆ' ಎಂದು ಸಂಘಟನೆಗಳು ಹೇಳಿವೆ.

ತುರ್ತು ಪರಿಸ್ಥಿತಿಗೆ 50 ವರ್ಷ ವಿಚಾರ ಸಂಕಿರಣ

ನವದೆಹಲಿ (ಪಿಟಿಐ): ತುರ್ತು ಪರಿಸ್ಥಿತಿ ಜಾರಿಯಾಗಿ 50 ವರ್ಷವಾಗಿರುವ ಪ್ರಯುಕ್ತ ದೆಹಲಿ ವಿಧಾನಸಭೆಯು ವಿಶೇಷ ವಿಚಾರ ಸಂಕಿರಣ ಆಯೋಜಿಸಿದೆ. ವಿಧಾನಸಭೆಯ ಆವರಣದಲ್ಲಿ ಶನಿವಾರ ಈ ಕಾರ್ಯಕ್ರಮ ನಡೆಯಲಿದೆ ಎಂದು ದೆಹಲಿ ವಿಧಾನಸಭೆ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

ಸಂವಿಧಾನ ಹತ್ಯಾ ದಿವಸ ಎಂಬ ವಿಚಾರದ ಅನ್ವಯ 'ಭಾರತೀಯ ಲೋಕತಂತ್ರ ಹಾಗೂ ಸಂವಿಧಾನದ ಅತ್ಯಂತ ಅಂಧಕಾರದ ಅವಧಿ: ಮರೆಯುವುದೂ ಇಲ್ಲ, ಕ್ಷಮಿಸುವುದೂ ಇಲ್ಲ' ಎಂಬ ಶೀರ್ಷಿಕೆಯ ಅಡಿಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಮಾಜಿ ಸಚಿವ ಸತ್ಯನಾರಾಯಣ ಜತಿಯಾ ಭಾಗವಹಿಸುವರು.

ಮಹಾಘಟಬಂಧನ ಸಿ.ಎಂ ಅಭ್ಯರ್ಥಿ ತೇಜಸ್ವಿ: ಕನ್ಹಯ್ಯ

ನವದೆಹಲಿ (ಪಿಟಿಐ): ಮುಂಬರಲಿರುವ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು 'ಮಹಾಘಟಬಂಧನ' ಮೈತ್ರಿಯ ಮುಖ್ಯಮಂತ್ರಿ ಅಭ್ಯರ್ಥಿ ಎಂಬುದರಲ್ಲಿ ಯಾವುದೇ ಗೊಂದಲಗಳಿಲ್ಲ ಎಂದು ಕಾಂಗ್ರೆಸ್ ನಾಯಕ ಕನ್ಹಯ್ಯ ಕುಮಾರ್ ಶುಕ್ರವಾರ ತಿಳಿಸಿದರು.

'ಮಹಾಘಟಬಂಧನ' ಬಹುಮತ ಪಡೆದರೆ ಮುಖ್ಯಮಂತ್ರಿ ಸ್ಥಾನ ಆರ್‌ಜೆಡಿ ಪಕ್ಷದ ಪಾಲಾಗಲಿದೆ ಎಂದು ಅವರು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದರು.

ಸಾರ್ವತ್ರಿಕ ಚುನಾವಣೆಗಳಲ್ಲಿ ಜನರ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯ ಪ್ರಮುಖವಾಗಿ ಚರ್ಚೆಯಾಗಬೇಕೇ ಹೊರತು ಮುಖ್ಯಮಂತ್ರಿ ಸ್ಥಾನದ ವಿಷಯವಲ್ಲ. ಪ್ರತಿಸ್ಪರ್ಧಿಗಳು ಜನರ ಗಮನ ಬೇರೆಡೆ ಸೆಳೆಯಲು ಮುಖ್ಯಮಂತ್ರಿ ಸ್ಥಾನದ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ. ಆದರೆ ಈ ಪಿತೂರಿ ನಡೆಯುವುದಿಲ್ಲ ಎಂದು ಅವರು ತಿಳಿಸಿದರು.

ಒಂದು ವೇಳೆ ಬಿಜೆಪಿಯವರಿಗೆ ಅಧಿಕಾರ ದೊರೆತರೆ ಅವರು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಬದಲಿಸಿ, ತಮ್ಮ ನಾಯಕನನ್ನು ಆ ಸ್ಥಾನದಲ್ಲಿ ಕೂರಿಸುತ್ತಾರೆ. ಬಿಜೆಪಿ ಯಾವಾಗಲೂ, ಮೊದಲಿಗೆ ಪ್ರಾದೇಶಿಕ ಪಕ್ಷಗಳಿಗೆ ಬೆಂಬಲ ನೀಡಿ, ಕ್ರಮೇಣ ಅವುಗಳನ್ನು ನುಂಗಿ ಬಿಡುತ್ತದೆ ಎಂದು ಅವರು ಆರೋಪಿಸಿದರು.

ದೊಡ್ಡ ಪಕ್ಷಕ್ಕೆ ಹೆಚ್ಚಿನ ಜವಾಬ್ದಾರಿ: ಬಿಹಾರದಲ್ಲಿ ಮಹಾಘಟಬಂಧನ ಮೈತ್ರಿಯಲ್ಲಿ ಹೆಚ್ಚು ಶಾಸಕರನ್ನು ಹೊಂದಿರುವ ಆರ್‌ಜೆಡಿ ಸಹಜವಾಗಿಯೇ ದೊಡ್ಡ ಪಕ್ಷವಾಗಿದೆ. ಪ್ರಸ್ತುತ ವಿರೋಧ ಪಕ್ಷದ ನಾಯಕರೂ ಆರ್‌ಜೆಡಿಯವರೇ ಆಗಿದ್ದಾರೆ. ಹೀಗಾಗಿ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳನ್ನು ಪಡೆಯುವ ನಿಟ್ಟಿನಲ್ಲಿ ಅವರ ಮೇಲೆ ಜವಾಬ್ದಾರಿ ಹೆಚ್ಚಿರುತ್ತದೆ ಎಂದು ಅವರು ಪ್ರತಿಪಾದಿಸಿದರು.

ಬಿಹಾರದ 243 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಎಷ್ಟರಲ್ಲಿ ಸ್ಪರ್ಧಿಸುತ್ತದೆ ಎಂಬ ಪ್ರಶ್ನೆಗೆ, 'ಮಹಾಘಟಬಂಧನ'ದ ಎಲ್ಲ ಪಕ್ಷಗಳು ಎಲ್ಲ ಕ್ಷೇತ್ರಗಳಲ್ಲೂ ಸ್ಪರ್ಧಿಸಲಿವೆ ಎಂದು ಪ್ರತಿಕ್ರಿಯಿಸಿದರು.

'ಆರ್‌ಜೆಡಿ, ಕಾಂಗ್ರೆಸ್, ಎಡ ಪಕ್ಷಗಳು ಮತ್ತು ಮುಕೇಶ್ ಸಹಾನಿ ಅವರ ವಿಕಾಸಶೀಲ ಇನ್ಸಾನ್ ಪಕ್ಷಗಳು ಒಗ್ಗಟ್ಟಿನಿಂದ 243 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ. ಯಾರು ಮುಖ್ಯಮಂತ್ರಿ ಆಗಬೇಕು ಎಂಬುದನ್ನು ಜನರು ನಿರ್ಧರಿಸುತ್ತಾರೆ. ಸಹಜವಾಗಿಯೇ ಮೈತ್ರಿ ಪಕ್ಷಗಳ ಪೈಕಿ ಆರ್‌ಜೆಡಿ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದು, ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ. ಹೀಗಾಗಿ ಅದು ಮುಖ್ಯಮಂತ್ರಿ ಸ್ಥಾನ ಕೇಳುವುದರಲ್ಲಿ ತಪ್ಪೇನೂ ಇಲ್ಲ' ಎಂದು ಅವರು ಉತ್ತರಿಸಿದರು.

ಗೊಂದಲ ಇರುವುದು ಎನ್‌ಡಿಎಯಲ್ಲಿ: 'ಮಹಾಘಟಬಂಧನದಲ್ಲಿ ಮುಖ್ಯಮಂತ್ರಿ ಸ್ಥಾನದ ಆಯ್ಕೆಯ ಪ್ರಕ್ರಿಯೆ ಸ್ವಯಂಚಾಲಿತವಾಗಿ ನಡೆಯುತ್ತದೆ, ಅದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ನಿತೀಶ್ ಕುಮಾರ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಬೇಕೋ, ಬೇಡವೋ ಎಂಬ ಗೊಂದಲದಲ್ಲಿ ಎನ್‌ಡಿಎ ಇದೆ. ಅಂಥಯೇ ಎನ್‌ಡಿಎಯಲ್ಲಿ ಯಾವ ಪಕ್ಷಗಳು ಎಷ್ಟು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ ಎಂಬುದೂ ಸ್ಪಷ್ಟವಿಲ್ಲ' ಎಂದು ಹೇಳಿದರು.

'ಪಕ್ಷ ಸೂಚಿಸಿದರೆ ಸ್ಪರ್ಧೆ'

'ಪಕ್ಷ ಸೂಚಿಸಿದರೆ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತೇನೆ' ಎಂದು ಕಾಂಗ್ರೆಸ್ ನಾಯಕ ಕನ್ಹಯ್ಯ ಕುಮಾರ್ ಪ್ರತಿಕ್ರಿಯಿಸಿದರು.

'ಚುನಾವಣೆಯಲ್ಲಿ ಸ್ಪರ್ಧಿಸುವುದು, ಇತರರ ಪರ ಪ್ರಚಾರ ಮಾಡುವುದೂ ಸೇರಿದಂತೆ ಪಕ್ಷ ನಿಗದಿಪಡಿಸುವ ಜವಾಬ್ದಾರಿಗಳನ್ನು ನಿರ್ವಹಿಸುತ್ತೇನೆ' ಎಂದು ಅವರು ಉತ್ತರಿಸಿದರು.

'ಬಲವಂತದ ಕ್ರಮ ಬೇಡ'

ಅಮರಾವತಿ (ಪಿಟಿಐ): ವೈಎಸ್‌ಆರ್ ಕಾಂಗ್ರೆಸ್‌ನ ಅಧ್ಯಕ್ಷ ವೈ.ಎಸ್. ಜಗನ್ ಮೋಹನ್ ರೆಡ್ಡಿ ವಿರುದ್ಧ ಜುಲೈ 1ರವರೆಗೆ ಬಲವಂತದ ಕ್ರಮ ಕೈಗೊಳ್ಳದಂತೆ ಆಂಧ್ರಪ್ರದೇಶ ಹೈಕೋರ್ಟ್ ಪೊಲೀಸರಿಗೆ ಶುಕ್ರವಾರ ಸೂಚಿಸಿದೆ.

ಆತ್ಮಹತ್ಯೆ ಮಾಡಿಕೊಂಡಿದ್ದ ತಮ್ಮ ಪಕ್ಷದ ಮುಖಂಡರೊಬ್ಬರ ಕುಟುಂಬದವರನ್ನು ಭೇಟಿ ಮಾಡಲು ಜೂನ್ 18ರಂದು ಜಗನ್ ತೆರಳಿದ್ದರು. ಗ್ರಾಮದಲ್ಲಿ ಭಾರಿ ಜನರು ಜಮಾಯಿಸಿದ್ದರು. ಈ ವೇಳೆ ಜಗನ್ ಅವರ ಕಾರಿನ ಚಕ್ರಗಳಿಗೆ ವ್ಯಕ್ತಿಯೊಬ್ಬರು ಸಿಕ್ಕಿ ಮೃತಪಟ್ಟಿದ್ದರು. ಈ ಬಗ್ಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಅನ್ನು ರದ್ದು ಮಾಡುವಂತೆ ಕೋರಿ ಜಗನ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿಯ ವಿಚಾರಣೆಯು ಜುಲೈ 1ರಂದು ನಡೆಯಲಿದೆ. ಅಲ್ಲಿಯವರೆಗೂ ಪೊಲೀಸರು ಕ್ರಮ ಕೈಗೊಳ್ಳದಂತೆ ಪೊಲೀಸರಿಗೆ ಸೂಚನೆ ನೀಡುವಂತೆ ಜಗನ್ ಪರ ವಕೀಲರು ಕೋರ್ಟ್‌ಗೆ ಮನವಿ ಸಲ್ಲಿಸಿದ್ದರು.

ಮೃತ ವ್ಯಕ್ತಿಯ ವೀರ್ಯ ಸಂರಕ್ಷಿಸಲು ನಿರ್ದೇಶನ



ಮುಂಬೈ (ಪಿಟಿಐ): ಮೃತ ಅವಿವಾಹಿತ ವ್ಯಕ್ತಿಯ ಹೆಪ್ಪುಗಟ್ಟಿದ ವೀರ್ಯವನ್ನು ಸಂರಕ್ಷಿಸುವಂತೆ ನಗರದ ಫರ್ಟಿಲಿಟಿ ಕೇಂದ್ರಕ್ಕೆ ಬಾಂಬೆ ಹೈಕೋರ್ಟ್ ತನ್ನ ಮಧ್ಯಂತರ ಆದೇಶದಲ್ಲಿ ನಿರ್ದೇಶನ ನೀಡಿದೆ.

ವಂಶವನ್ನು ಮುಂದುವರಿಸುವ ಉದ್ದೇಶದಿಂದ ಮಗನ ವೀರ್ಯ ನೀಡುವಂತೆ ಕೋರಿ ತಾಯಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಮನೀಶ್ ಪಿತಾಲೆ ನೇತೃತ್ವದ ಪೀಠವು ಜೂನ್ 25ರಂದು ನಡೆಸಿತು.

ಕೃತಕ ಸಂತಾನೋತ್ಪತ್ತಿ ತಂತ್ರಜ್ಞಾನ (ನಿಯಂತ್ರಣ) ಕಾಯ್ದೆ 2021ರ ಅಡಿಯಲ್ಲಿ, ಮೃತ ವ್ಯಕ್ತಿಯ ವೀರ್ಯವನ್ನು ಸಂರಕ್ಷಿಸುವ ವಿಧಾನದ ಕುರಿತು ನ್ಯಾಯಮೂರ್ತಿ ಮನೀಶ್ ಪಿಟಾಲೆ ನೇತೃತ್ವದ ಪೀಠವು ಹಲವು ಪ್ರಶ್ನೆಗಳನ್ನು ಎತ್ತಿದೆ. ಅರ್ಜಿಯ ಮುಂದಿನ ವಿಚಾರಣೆಯನ್ನು ಜುಲೈ 30ಕ್ಕೆ ನಿಗದಿಪಡಿಸಿದ್ದು, ಅರ್ಜಿ ವಿಲೇವಾರಿ ಆಗುವವರೆಗೂ ವೀರ್ಯವನ್ನು ಸಂರಕ್ಷಿಸಿಡುವಂತೆ ಫರ್ಟಿಲಿಟಿ ಕೇಂದ್ರಕ್ಕೆ ನಿರ್ದೇಶಿಸಿದೆ.

ಏನಿದು ಪ್ರಕರಣ?: ಕ್ಯಾನ್ಸರ್‌ನಿಂದ ಬಳಲುತ್ತಿದ್ದ ವ್ಯಕ್ತಿಯು ಫೆಬ್ರುವರಿಯಲ್ಲಿ ಮೃತಪಟ್ಟಿದ್ದರು. ಅವರು, ಕಿಮೊಥೆರಪಿ ಚಿಕಿತ್ಸೆ ಪಡೆಯುವ ವೇಳೆ, ಶೀಥಲೀಕರಣ ಘಟಕದಲ್ಲಿ ಹೆಪ್ಪುಗಟ್ಟಿದ ಸ್ಥಿತಿಯಲ್ಲಿ ಸಂರಕ್ಷಿಸಿಡಲಾದ ತನ್ನ ವೀರ್ಯವನ್ನು ಮರಣಾನಂತರ ನಾಶಪಡಿಸುವಂತೆ ಅರ್ಜಿಯಲ್ಲಿ ನಮೂದಿಸಿದ್ದರು. ಆ ವೀರ್ಯವನ್ನು ಮುಂಬೈ ಮೂಲದ ಫರ್ಟಿಲಿಟಿ ಕೇಂದ್ರದಿಂದ ಗುಜರಾತ್ ಮೂಲದ ಐವಿಎಫ್ ಕೇಂದ್ರಕ್ಕೆ ವರ್ಗಾಯಿಸುವಂತೆ ಮೃತ ವ್ಯಕ್ತಿಯ ತಾಯಿ ಕೋರಿದ್ದರು. ಆದರೆ, ಎಆರ್‌ಟಿ ಕಾಯ್ದೆ ಪ್ರಕಾರ ನ್ಯಾಯಾಲಯದ ಅನುಮತಿ ಇಲ್ಲದೆ ವರ್ಗಾಯಿಸಲು ಸಾಧ್ಯವಿಲ್ಲ ಎಂದು ಮುಂಬೈನ ಐವಿಎಫ್ ಕೇಂದ್ರವು ಹೇಳಿತ್ತು. ಹೀಗಾಗಿ, ಮಹಿಳೆಯು ಹೈಕೋರ್ಟ್ ಮೊರೆ ಹೋಗಿದ್ದರು.

'ಮಗನು ಕುಟುಂಬದ ಸದಸ್ಯರ ಜೊತೆ ಸಮಾಲೋಚಿಸದೇ ಒಪ್ಪಿಗೆ ಪತ್ರಕ್ಕೆ ಸಹಿ ಮಾಡಿದ್ದಾನೆ. ಸಂರಕ್ಷಿಸಿಡಲಾದ ವೀರ್ಯವನ್ನು ತನ್ನ ಮರಣಾನಂತರ ನಾಶಪಡಿಸಲು ಆಗ ಒಪ್ಪಿಗೆ ನೀಡಿದ್ದ. ಆದರೆ, ಕುಟುಂಬದ ವಂಶವನ್ನು ಮುಂದುವರಿಸಲು ಮಗನ ವೀರ್ಯವನ್ನು ನೀಡಬೇಕು' ಎಂದು ಮೃತರ ತಾಯಿ ಅರ್ಜಿಯಲ್ಲಿ ಕೋರಿದ್ದಾರೆ.

ಮೊಹರಂ: ಹಲವರಿಗೆ ನಿರ್ಬಂಧ

ಸಂಭಲ್ (ಪಿಟಿಐ): ಮೊಹರಂ ಸಂದರ್ಭದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಲು, ಉತ್ತರ ಪ್ರದೇಶದ ಸಂಭಲ್ ಜಿಲ್ಲಾಡಳಿತವು 900ಕ್ಕೂ ಹೆಚ್ಚು ಜನರ ಮೇಲೆ ನಿರ್ಬಂಧ ಹೇರಿದೆ.

'ಕೋಮು ಸಾಮರಸ್ಯಕ್ಕೆ ಧಕ್ಕೆ ತರುವ ಸಾಧ್ಯತೆ ಇರುವ 900ಕ್ಕೂ ಹೆಚ್ಚು ಜನರಿಗೆ ನಿರ್ಬಂಧ ವಿಧಿಸಲಾಗಿದೆ. ಇನ್ನೂ ಹಲವರ ಅಪರಾಧ ಹಿನ್ನಲೆ ಪರಿಶೀಲನೆ ನಡೆಯುತ್ತಿದ್ದು, ಈ ಸಂಖ್ಯೆ ಹೆಚ್ಚಬಹುದು. ನಿರ್ಬಂಧಕ್ಕೆ ಒಳಗಾಗಿರುವ ವ್ಯಕ್ತಿಗಳು ಕಾನೂನು ಉಲ್ಲಂಘಿಸಿದರೆ ಜಿಲ್ಲಾಡಳಿತವು ಅವರ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 163ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಿದೆ' ಎಂದು ಸಂಭಲ್ ಜಿಲ್ಲಾಧಿಕಾರಿ ರಾಜೇಂದ್ರ ಪೆನ್ಸಿಯಾ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಪಂಜಾಬ್: 'ಬಿಕೆಐ'ನ ಮೂವರ ಬಂಧನ

ಚಂಡೀಗಢ (ಪಿಟಿಐ): ಪಾಕಿಸ್ತಾನದ ಐಎಸ್‌ಐ ಜತೆಗೆ ಸಂಪರ್ಕ ಹೊಂದಿರುವ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ (ಬಿಕೆಐ) ಸಂಘಟನೆಯ ಮೂವರನ್ನು ಪಂಜಾಬ್ ಪೊಲೀಸರು ಶುಕ್ರವಾರ ವಿಶೇಷ ಕಾರ್ಯಾಚರಣೆ ಮೂಲಕ ಬಂಧಿಸಿದ್ದಾರೆ.

'ಅಮೃತಸರ ಕೇಂದ್ರವಾಗಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ ಘಟಕವನ್ನು ಬ್ರಿಟನ್‌ನ ನಿಶಾನ್ ಸಿಂಗ್, ಪಾಕಿಸ್ತಾನ ಮೂಲದ ಉಗ್ರ ಹರ್ವಿಂದರ್ ರಿಂದಾ ಮುನ್ನಡೆಸುತ್ತಿದ್ದರು. ಅಮೃತಸರದ ರಾಮ್‌ದಾಸ್ ಪ್ರದೇಶದ ಸೆಹಜ್‌ಪಾಲ್ ಸಿಂಗ್, ವಿಕ್ರಂಜಿತ್ ಸಿಂಗ್ ಬಂಧಿತ ಆರೋಪಿಗಳು. ಬಂಧಿತರಲ್ಲಿ ಒಬ್ಬ ಬಾಲಕನೂ ಸೇರಿದ್ದಾನೆ.

4,415 ಭಾರತೀಯರು ತಾಯ್ನಾಡಿಗೆ

ಇರಾನ್ –ಇಸ್ರೇಲ್ ಸಂಘರ್ಷ 'ಆಪರೇಷನ್ ಸಿಂಧೂ' ಕಾರ್ಯಾಚರಣೆ

ನವದೆಹಲಿ (ಪಿಟಿಐ): 'ಆಪರೇಷನ್ ಸಿಂಧೂ' ಕಾರ್ಯಾಚರಣೆ ಮೂಲಕ ಇರಾನ್ ಮತ್ತು ಇಸ್ರೇಲ್‌ನಿಂದ ಇಲ್ಲಿಯವರೆಗೆ 4,415 ಭಾರತೀಯರನ್ನು ಕರೆತರಲಾಗಿದೆ ಎಂದು ಭಾರತೀಯ ವಿದೇಶಾಂಗ ಇಲಾಖೆ ಮಾಹಿತಿ ನೀಡಿದೆ.

ಇರಾನ್ ಮತ್ತು ಇಸ್ರೇಲ್ ನಡುವಿನ ಸೇನಾ ಸಂಘರ್ಷದಿಂದ ಸಂಕಷ್ಟಕ್ಕೆ ಸಿಲುಕಿದ್ದ ಭಾರತೀಯರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ಜೂನ್ 18ರಂದು 'ಆಪರೇಷನ್ ಸಿಂಧೂ' ಕಾರ್ಯಾಚರಣೆ ಭಾರತ ಸರ್ಕಾರ ಆರಂಭಿಸಿತು.

ಇರಾನ್‌ನಿಂದ ಗುರುವಾರ ತಡರಾತ್ರಿ ದೆಹಲಿಗೆ ಬಂದ ವಿಮಾನದಲ್ಲಿ 173 ಭಾರತೀಯರು ತಾಯ್ನಾಡಿಗೆ ಮರಳಿದ್ದಾರೆ ಎಂದು ಎಂಇಎ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

19 ವಿಶೇಷ ವಿಮಾನ ಬಳಕೆ



'ಆಪರೇಷನ್ ಸಿಂಧೂ' ಕಾರ್ಯಾಚರಣೆ ಮೂಲಕ ಇರಾನ್‌ನಿಂದ 3,597 ಹಾಗೂ ಇಸ್ರೇಲ್‌ನಿಂದ 818 ಮಂದಿ ಸೇರಿದಂತೆ ಈವರೆಗೂ 4,415 ಭಾರತೀಯರನ್ನು ಕರೆತರಲಾಗಿದೆ. ಇದಕ್ಕಾಗಿ 19 ವಿಶೇಷ ವಿಮಾನಗಳು ಹಾಗೂ ವಾಯುಪಡೆಯ ಮೂರು ವಿಮಾನಗಳನ್ನು ಬಳಕೆ ಮಾಡಲಾಗಿದೆ ಎಂದು ವಿದೇಶಾಂಗ ಇಲಾಖೆ ಮಾಹಿತಿ ನೀಡಿದೆ.

14 ವಿದೇಶಿಯರನ್ನು ಕರೆತರಲಾಗಿದೆ. ಇದರಲ್ಲಿ ನೇಪಾಳದ ಒಂಬತ್ತು, ಶ್ರೀಲಂಕಾದ ನಾಲ್ವರು ಮತ್ತು ಭಾರತದ ಪ್ರಜೆಯೊಬ್ಬರ ಇರಾನ್ ಮೂಲದ ಪತ್ನಿಯೂ ಸೇರಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸಮಾಜದಲ್ಲಿನ ಅನ್ಯಾಯ ಕಂಡು ಸುಮ್ಮನಿರುವವನಿಗಿಂತ ಹೋರಾಟಕ್ಕಿಳಿದವನೇ ಉತ್ತಮ.

-ಸ್ವಾಮಿ ವಿವೇಕಾನಂದ

ಸಂಪಾದಕೀಯ

ನಾಡು-ನುಡಿ ಚಟುವಟಿಕೆ ನಿಲ್ಲದಿರಲಿ ಸರ್ಕಾರದ ನೆರವು ಅರ್ಹರಿಗೆ ಸಿಗಲಿ


ಸಾಂಸ್ಕೃತಿಕ ವಾತಾವರಣವನ್ನು ರೂಪಿಸುವ ಸಂಘ- ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯನ್ನು ಮುಂದುವರಿಸುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ಧಾರ ಸ್ವಾಗತಾರ್ಹ. ಅನುದಾನದ ಕೊರತೆಯಿಂದಾಗಿ 2024-25ನೇ ಸಾಲಿನಲ್ಲಿ ಸಂಘ- ಸಂಸ್ಥೆಗಳಿಗೆ ಇಲಾಖೆಯ ನೆರವು ದೊರೆತಿರಲಿಲ್ಲ. 2023-24ನೇ ಸಾಲಿನಲ್ಲಿ ಕೂಡ ಧನಸಹಾಯ ಯೋಜನೆ ನಿಯಮಿತವಾಗಿರದೆ, ಆರ್ಥಿಕ ನೆರವನ್ನು ನಾಲ್ಕು ಕಂತುಗಳಲ್ಲಿ ನೀಡಲಾಗಿತ್ತು. ಕಳೆದ ವರ್ಷ ಯೋಜನೆ ಸಂಪೂರ್ಣ ಸ್ಥಗಿತಗೊಂಡು, ಸಂಘ- ಸಂಸ್ಥೆಗಳ ಚಟುವಟಿಕೆಗಳು ಕುಂಠಿತಗೊಂಡಿದ್ದವು. ಸ್ವಂತ ಆದಾಯ ಮೂಲಗಳಿಲ್ಲದೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವನ್ನೇ ನೆಚ್ಚಿಕೊಂಡ ಸಂಘ- ಸಂಸ್ಥೆಗಳು ತಮ್ಮ ಚಟುವಟಿಕೆಗಳನ್ನು ಸ್ಥಗಿತಗೊಳಿಸುವ ಪರಿಸ್ಥಿತಿ ರೂಪುಗೊಂಡಿತ್ತು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಆರ್ಥಿಕ ನೆರವು ಒದಗಿಸುವ ಯೋಜನೆಗೆ ₹5 ಕೋಟಿ ಅನುದಾನ ಮೀಸಲಿಡಲಾಗಿದೆ. ಸಂಘ- ಸಂಸ್ಥೆಗಳ ಅರ್ಜಿ ಸಲ್ಲಿಕೆಯ ನಂತರ ಅಗತ್ಯವಿದ್ದಲ್ಲಿ ಹೆಚ್ಚುವರಿ ಅನುದಾನ ನೀಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲು ಇಲಾಖೆಯು ಉದ್ದೇಶಿಸಿದೆ. ರಾಜ್ಯದಲ್ಲಿ ಸುಮಾರು ಏಳು ಸಾವಿರಕ್ಕೂ ಹೆಚ್ಚಿನ ಸಂಘ-ಸಂಸ್ಥೆಗಳಿದ್ದು, ಅವುಗಳಲ್ಲಿ ಸುಮಾರು ಒಂದೂವರೆ ಸಾವಿರ ಸಂಘಟನೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯ ಯೋಜನೆಯ ಫಲಾನುಭವಿಗಳಾಗಿವೆ. ಅಸಂಘಟಿತ ಕಲಾವಿದರ ಪಾಲಿಗಂತೂ ಇಲಾಖೆಯ ಯೋಜನೆ ಜೀವಜಲ ಇದ್ದಂತೆ. ವೇಷಭೂಷಣ ಹಾಗೂ ವಾದ್ಯಗಳ ಖರೀದಿಗೆ ಇಲಾಖೆಯ ಆರ್ಥಿಕ ಸಹಾಯ ಸಹಕಾರಿಯಾಗಿದೆ. ಕೊರೊನಾ ನಿಯಂತ್ರಣಕ್ಕಾಗಿ ಹೇರಲಾಗಿದ್ದ ಲಾಕ್‌ಡೌನ್ ಸಂದರ್ಭದಲ್ಲಿ ಸಾಂಸ್ಕೃತಿಕ ಸಂಸ್ಥೆಗಳ ಸಾರ್ವಜನಿಕ ಕಾರ್ಯಕ್ರಮಗಳು ಸಂಪೂರ್ಣ ಸ್ಥಗಿತಗೊಂಡಿದ್ದವು. ಕೊರೊನಾ ನಂತರದಲ್ಲಿ ಕೂಡ ಸರ್ಕಾರದ ನೆರವು ದೊರೆಯದೆ ಬಹುತೇಕ ಸಾಂಸ್ಕೃತಿಕ ಸಂಘ- ಸಂಸ್ಥೆಗಳು ನಿಷ್ಕ್ರಿಯವಾಗಿದ್ದವು. ನಾಡು- ನುಡಿಗೆ ಸಂಬಂಧಿಸಿದ ಅಕಾಡೆಮಿ ಮತ್ತು ಪ್ರಾಧಿಕಾರಗಳಿಗೆ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ನೇಮಕಗೊಳ್ಳದೆ ಹೋದುದು ಕೂಡ ಸಾಂಸ್ಕೃತಿಕ ಕ್ಷೇತ್ರ ಬಸವಳಿಯಲಿಕ್ಕೆ ಕಾರಣವಾಗಿತ್ತು. 2024ರ ಮಾರ್ಚ್‌ನಲ್ಲಿ ಅಧ್ಯಕ್ಷರು ಹಾಗೂ ಸದಸ್ಯರ ನೇಮಕದ ಮೂಲಕ ಅಕಾಡೆಮಿ, ಪ್ರಾಧಿಕಾರಗಳು ಪುನಶ್ಚೇತನಗೊಂಡಿವೆ. ಆದರೆ, ಸಂಘ- ಸಂಸ್ಥೆಗಳ ಚಟುವಟಿಕೆಗೆ ದೊರೆಯುತ್ತಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ನೆರವು ಮತ್ತೆ ಆರಂಭಗೊಂಡಿರಲಿಲ್ಲ. ಗ್ಯಾರಂಟಿ ಯೋಜನೆಗಳಿಗೆ ಹೆಚ್ಚು ಸಂಪನ್ಮೂಲಗಳನ್ನು ಒದಗಿಸಬೇಕಾದ ಸವಾಲು ಸರ್ಕಾರದ ಮುಂದಿರುವುದರಿಂದ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಇನ್ನು ಮುಂದೆ ಹಣ ದೊರೆಯುವುದು ಕಷ್ಟ ಎಂದು ಹೇಳಲಾಗುತ್ತಿತ್ತು. ಆ ಊಹಾಪೋಹಗಳನ್ನು ಸುಳ್ಳು ಮಾಡುವಂತೆ, ಸಂಸ್ಕೃತಿ ಇಲಾಖೆಗೆ ಅನುದಾನ ದೊರೆತಿದ್ದು, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವ ಸಂಘ- ಸಂಸ್ಥೆಗಳಿಗೆ ಆಶಾಭಾವ ಮರಳುವಂತಾಗಿದೆ.



ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕ ಮುಗಿಯುತ್ತಾ ಬಂದಿದೆ. ಹಾಗಾಗಿ, ಸಂಘ-ಸಂಸ್ಥೆಗಳಿಗೆ ನೆರವು ಒದಗಿಸುವ ಯೋಜನೆಯ ಅನುಷ್ಠಾನ ಮತ್ತಷ್ಟು ವಿಳಂಬ ಆಗಬಾರದು

ನಾಡು-ನುಡಿಗೆ ಸಂಬಂಧಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ನೆರವು ನೀಡುವುದು ಸರ್ಕಾರದ ಹೊಣೆಗಾರಿಕೆ. ಸಾರ್ವಜನಿಕರ ತೆರಿಗೆ ಹಣ ಪೋಲಾಗದಂತೆ ಎಚ್ಚರಿಕೆ ವಹಿಸುವುದು ಹಾಗೂ ಅರ್ಹರಿಗಷ್ಟೇ ನೆರವು ದೊರೆಯುವಂತೆ ನೋಡಿಕೊಳ್ಳುವುದೂ ಅಗತ್ಯ. ಕಾರ್ಯಕ್ರಮ ಮಾಡದೆಯೇ ಹಣ ಪಡೆಯುವ 'ಲೆಟರ್‌ಹೆಡ್' ಸಂಸ್ಥೆಗಳೂ ಇವೆ. ಇಲಾಖೆಯ ಆರ್ಥಿಕ ನೆರವು ದೊರಕಿಸಿಕೊಡುವ ಮಧ್ಯವರ್ತಿಗಳೂ ಇದ್ದಾರೆ. ನಾಡು-ನುಡಿ ಹೆಸರಿನಲ್ಲಿ ನಡೆಯುವ ಅವ್ಯವಹಾರಗಳಿಗೆ ಕಡಿವಾಣ ಹಾಕುವುದು ಹಾಗೂ ಸಾಂಸ್ಕೃತಿಕ ದಲ್ಲಾಳಿಗಳಿಂದ ದೂರವಿರುವುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರೋಗ್ಯಕ್ಕೆ ಅಗತ್ಯ. ಜನರ ತೆರಿಗೆ ಹಣ ಅರ್ಹ ಸಂಸ್ಥೆಗಳಿಗೆ ಹಾಗೂ ಕಲಾವಿದರಿಗೆ ತಲುಪುವಂತೆ ಮಾಡುವುದು ಇಲಾಖೆಯ ಹೊಣೆಗಾರಿಕೆ. ಇಲಾಖೆಯ ನೆರವಿನಿಂದ ಸಂಘ- ಸಂಸ್ಥೆಗಳು ನಡೆಸಿದ ಕಾರ್ಯಕ್ರಮಗಳ ಪರಿಣಾಮದ ಬಗ್ಗೆಯೂ ಪರಾಮರ್ಶೆ ನಡೆಯುವಂತಾಗಬೇಕು. ಹಣ ಖರ್ಚು ಮಾಡುವುದೇ ಮುಖ್ಯವಾಗಿ, ಸೃಜನಶೀಲ ಸಾಧ್ಯತೆಗಳು ಗೌಣವಾಗಿರುವ ಕಾರ್ಯಕ್ರಮಗಳಿಂದ ಸಾರ್ವಜನಿಕರ ಹಣ ಪೋಲಾಗುತ್ತದೆ. ಅರ್ಥಪೂರ್ಣ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಕನ್ನಡ ನಾಡಿನ ಸಾಂಸ್ಕೃತಿಕ ಪರಿಸರವನ್ನು ಜೀವಂತವಾಗಿಡುವ ಸಂಘ- ಸಂಸ್ಥೆಗಳಿಗೆ ಸಂಸ್ಕೃತಿ ಇಲಾಖೆಯ ನೆರವು ಸುಲಭವಾಗಿ ದೊರಕುವಂತೆ ಆಗುವುದೂ ಅಗತ್ಯ. ಆರ್ಥಿಕ ನೆರವು ಪಡೆಯುವ ಸಂಘ- ಸಂಸ್ಥೆಗಳ ಆಯ್ಕೆಯಲ್ಲಿ ಪಾರದರ್ಶಕತೆ ತರುವುದಕ್ಕಾಗಿ, ಯೋಜನೆಯ ಮಾರ್ಗಸೂಚಿಯನ್ನು ಪರಿಷ್ಕರಿಸಲಾಗುತ್ತಿದೆ ಎಂದು ಸಂಸ್ಕೃತಿ ಇಲಾಖೆ ಹೇಳಿದೆ. ಈ ಪರಿಷ್ಕಾರ ಆದಷ್ಟು ಬೇಗ ಪೂರ್ಣಗೊಂಡು, ಸಂಘ-ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸುವ ಪ್ರಕ್ರಿಯೆ ಆರಂಭಗೊಳ್ಳಬೇಕು. ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕ ಮುಗಿಯುತ್ತಾ ಬಂದಿರುವುದರಿಂದ, ಸಂಘ-ಸಂಸ್ಥೆಗಳಿಗೆ ನೆರವು ಒದಗಿಸುವ ಯೋಜನೆಯ ಅನುಷ್ಠಾನ ಮತ್ತಷ್ಟು ವಿಳಂಬ ಆಗಬಾರದು. ಸಾಂಸ್ಕೃತಿಕ ಚಟುವಟಿಕೆಗಳ ಪುನಶ್ಚೇತನಕ್ಕೆ ಮುಂದಾಗಿರುವ ಸರ್ಕಾರ, ಆರೇಳು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ರಾಜ್ಯ ಚಲನಚಿತ್ರ ಪ್ರಶಸ್ತಿಗಳ ಪ್ರದಾನವನ್ನೂ ಆದ್ಯತೆಯಾಗಿ ಪರಿಗಣಿಸಬೇಕು.

ರಟ್ಟಾದ 'ಒಳ'ಗುಟ್ಟು!



ಅನುಸಂಧಾನ

ರವೀಂದ್ರ ಭಟ್ಟ

ಮಹಾಭಾರತದ್ದು ಎನ್ನಲಾದ ಕತೆಯೊಂದು ಹೀಗಿದೆ. ಕುರುಕ್ಷೇತ್ರ ಯುದ್ಧ ಮುಗಿದು ಧರ್ಮರಾಜ ಹಸ್ತಿನಾವತಿಯ ರಾಜನಾಗಿದ್ದ. ಒಂದು ದಿನ ವ್ಯಕ್ತಿಯೊಬ್ಬ ಕೃಷ್ಣನಲ್ಲಿಗೆ ಬಂದು 'ನಾನು ಯಾವಾಗ ಬೇಡಿಕೊಂಡರೂ ನೀರು ಮತ್ತು ಆಹಾರ ಸಿಗುವಂತೆ ವರ ಕೊಡು' ಎಂದು ಬೇಡಿಕೊಂಡ. ಅದಕ್ಕೆ ಕೃಷ್ಣ ತಥಾಸ್ತು ಎಂದ.

ಆಮೇಲೆ ಕೆಲ ದಿನಗಳ ನಂತರ ವರ ಪಡೆದ ವ್ಯಕ್ತಿ ಒಂದು ಮರುಭೂಮಿಯಲ್ಲಿ ಸಾಗುತ್ತಿದ್ದ. ಆತನಿಗೆ ತುಂಬಾ ಬಾಯಾರಿಕೆ ಆಯಿತು. ಎಲ್ಲಿ ಹುಡುಕಿದರೂ ಒಂದು ಕುಡುತೆ ನೀರು ಸಿಗಲಿಲ್ಲ. ಆಗ ಆತ ಕೃಷ್ಣನನ್ನು ನೆನೆದು ನೀರು ಕೊಡಲು ಬೇಡಿಕೊಂಡ. ತಕ್ಷಣವೇ ದಲಿತನೊಬ್ಬ ಬಂದು 'ನಿಮ್ಮನ್ನು ನೋಡಿದರೆ ತುಂಬಾ ಬಳಲಿರುವಂತೆ ಕಾಣುತ್ತೀರಿ. ಸ್ವಲ್ಪ ನೀರು ಕುಡಿದು ಸುಧಾರಿಸಿಕೊಳ್ಳಿ' ಎಂದು ನೀರು ಕೊಡಲು ಮುಂದಾದ. ದಲಿತನ ಕೈಯಲ್ಲಿರುವ ನೀರನ್ನು ಕುಡಿಯಲು ಈತ ನಿರಾಕರಿಸಿದ. 'ಇಲ್ಲ ನನಗೇನೂ ಬಾಯಾರಿಕೆ ಇಲ್ಲ. ನೀರು ಬೇಡ' ಎಂದು ಹೇಳಿ ಆತನನ್ನು ಅಲ್ಲಿಂದ ಕಳಿಸಿದ.

ಅಲ್ಲಿಂದ ಸೀದಾ ಕೃಷ್ಣನ ಬಳಿಗೆ ಹೋಗಿ ತನಗೆ ನೀರು ಕೊಡದೇ ಇರುವುದಕ್ಕೆ ಆಕ್ಷೇಪಿಸಿದ. ಅದಕ್ಕೆ ಕೃಷ್ಣ 'ನಿನಗೆ ನೀರು ಕೊಡುವಂತೆ ಇಂದ್ರನಿಗೆ ಹೇಳಿದ್ದೆ. ಆತ ನಿನಗೆ ನೀರೇನು ಅಮೃತವನ್ನೇ ಕೊಡುತ್ತೇನೆ ಎಂದು ಆ ದಲಿತನ ಕೈಯಲ್ಲಿ ಅಮೃತವನ್ನೇ ಕಳಿಸಿದ್ದ. ಆದರೆ ನೀನು ಅದನ್ನು ಸ್ವೀಕರಿಸಲೇ ಇಲ್ಲವಲ್ಲ' ಎಂದ. ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗವು ನಡೆಸುತ್ತಿರುವ ಸಮೀಕ್ಷೆ ಸಂದರ್ಭದಲ್ಲಿ ರಟ್ಟಾಗಿರುವ ಮೇಲುಜಾತಿಗಳ ಗುಟ್ಟುಗಳು ಈ ಕತೆಯನ್ನು ನೆನಪಿಸಿವೆ. ದಲಿತರು ಅಮೃತವನ್ನೇ ಕೊಟ್ಟರೂ ಸ್ವೀಕರಿಸದ ಮನಃಸ್ಥಿತಿಯನ್ನು ಬದಲಾಯಿಸಲು ಬರುವ ಭಗೀರಥನಿಗೆ ಇಡೀ ಸಮಾಜ ಕಾಯುತ್ತಿರುವಂತೆ ತೋರುತ್ತಿದೆ.

ಒಳಮೀಸಲಾತಿ ಸಮೀಕ್ಷೆ ಸಂದರ್ಭದಲ್ಲಿ ಪರಿಶಿಷ್ಟರು ಎದುರಿಸುತ್ತಿರುವ ಸಂಕಷ್ಟಗಳನ್ನು ಒಮ್ಮೆ ನೋಡಿಕೊಂಡು ಬಂದು ಬಿಡೋಣ. ಬೆಂಗಳೂರಿನ ಬಸವನಗುಡಿ ಪ್ರದೇಶದಲ್ಲಿ ಸಮೀಕ್ಷೆಗೆಂದು ಗಣತಿದಾರರು ಹೋದಾಗ ಮನೆಯಲ್ಲಿ ಯಾವುದೇ ವಿವರಗಳನ್ನು ನೀಡದ ವ್ಯಕ್ತಿಯೊಬ್ಬರು ಮನೆಯಿಂದ ಬಹುದೂರ ಬಂದು ಗಣತಿದಾರರನ್ನು ನಿಲ್ಲಿಸಿ, 'ಮೇಡಂ, ನಾನು ಬ್ಯಾಂಕ್ ನೌಕರ. ನಾವು ಮಾದಿಗ ಸಮುದಾಯಕ್ಕೆ ಸೇರಿದವರು. ನಮ್ಮ ಮಗುವಿನ ಶಾಲೆಗೆ ಹತ್ತಿರ ಎಂದು ಬಸವನಗುಡಿಯಲ್ಲೇ ಮನೆ ಮಾಡಿದ್ದೇವೆ. ನಾವು ಮಾದಿಗರು ಎನ್ನುವುದು ನಮ್ಮ ಮನೆಯ ಮಾಲೀಕರಿಗೆ ಗೊತ್ತಿಲ್ಲ. ಅದಕ್ಕಾಗಿ ನೀವು ನಮ್ಮ ಮನೆಗೆ ಬಂದಾಗ ಅದನ್ನು ಹೇಳಲು ಸಾಧ್ಯವಾಗಲಿಲ್ಲ. ಪ್ರಭಾವಿ ಜಾತಿಯೊಂದರ ಹೆಸರು ಹೇಳಿಕೊಂಡು ಮಧ್ಯವರ್ತಿ ಮೂಲಕ ಮನೆಯನ್ನು ಬಾಡಿಗೆಗೆ ಪಡೆದಿದ್ದೇವೆ. ನಾವು ಮಾದಿಗರು ಎಂದು ಗೊತ್ತಾದರೆ ಮನೆಯ ಮಾಲೀಕರು ನಮಗೆ ಮನೆಯಲ್ಲಿ ಇರಲು ಬಿಡುವುದಿಲ್ಲ. ಮಾದಿಗರು ಎಂದರೆ ನಾವಿರುವ ಈ ಪ್ರದೇಶದಲ್ಲಿ ಮನೆಯನ್ನು ಬಾಡಿಗೆಗೆ ಕೊಡುವುದಿಲ್ಲ ಎಂಬ ಕಾರಣಕ್ಕೆ ಸುಳ್ಳು ಹೇಳಿ ಬಾಡಿಗೆ ಮನೆಯಲ್ಲಿದ್ದೇವೆ. ಈಗ ನಮ್ಮ ವಿವರಗಳನ್ನು ತೆಗೆದುಕೊಳ್ಳಿ' ಎಂದು ದುಂಬಾಲು ಬಿದ್ದರು.

ಜಯನಗರದ ಬ್ಯಾಂಕ್ ನೌಕರರ ಬಡಾವಣೆಯಲ್ಲಿಯೂ ಇಂತಹದೇ ಘಟನೆಗಳು ನಡೆದಿವೆ. ಮನೆಯ ಮಾಲೀಕರೇ ಹೊರಬಂದು, 'ಇಲ್ಲಿ ಯಾರೂ ಪರಿಶಿಷ್ಟರಿಲ್ಲ' ಎಂದು ಗಣತಿದಾರರಿಗೆ ಪ್ರವೇಶವನ್ನೇ ನೀಡಲಿಲ್ಲ. ಕೆಲವರು ಅಪಾರ್ಟ್‌ಮೆಂಟ್‌ಗಳ ಪ್ರವೇಶಕ್ಕೂ ಅವಕಾಶ ನೀಡಲಿಲ್ಲ. ಗಣತಿದಾರರು ಆ ಬಡಾವಣೆಯನ್ನು ದಾಟಿ ಹೊರಬಂದ ನಂತರ ಕೆಲವರು ಬಂದು 'ಬ್ಯಾಂಕಿಂಗ್ ವ್ಯವಹಾರದಲ್ಲಿ ಪ್ರಬಲವಾಗಿರುವ ಸಮುದಾಯದವರು ಕಟ್ಟಿಕೊಂಡಿರುವ ಬಡಾವಣೆ. ಇಲ್ಲಿ ದಲಿತರಿಗೆ ಮನೆ ಬಾಡಿಗೆಗೆ ಕೊಡುವುದಿಲ್ಲ. ಅದಕ್ಕೆ ನಾವು ಪ್ರಬಲ ಜಾತಿಯೊಂದರ ಹೆಸರು ಹೇಳಿಕೊಂಡು ಮನೆ ಭೋಗ್ಯಕ್ಕೆ ಪಡೆದುಕೊಂಡಿದ್ದೇವೆ. ಇಲ್ಲಿ ಸಾಕಷ್ಟು ದಲಿತ ಕುಟುಂಬಗಳಿವೆ. ನಾವು ಮಾಹಿತಿ ನೀಡಲು ಏನು ಮಾಡಬೇಕು' ಎಂದು ವಿಚಾರಿಸಿದ ಘಟನೆಯೂ ನಡೆಯಿತು.

ಇದು ಬೆಂಗಳೂರು ಮಹಾನಗರದ ಕತೆ ಮಾತ್ರ ಅಲ್ಲ. ರಾಜ್ಯದ ಬಹುತೇಕ ನಗರಗಳಲ್ಲಿ ದಲಿತರಿಗೆ ಮನೆ ಬಾಡಿಗೆಗೆ ಸಿಗುವುದು ಕಷ್ಟ. ಇದೇ ವಿಚಾರವಾಗಿ ಯಾದಗಿರಿಯಲ್ಲಿ ವಕೀಲರೊಬ್ಬರ ಮೇಲೆ ಹಲ್ಲೆ ಕೂಡಾ ನಡೆಯಿತು. ಸಮೀಕ್ಷೆ ಸಂದರ್ಭದಲ್ಲಿ ನಿಜವಾದ ಜಾತಿ ಬಹಿರಂಗವಾಗಿದ್ದರಿಂದ ಕೆಲವರನ್ನು ಮನೆ ಖಾಲಿ ಮಾಡಿಸಿದ ಘಟನೆಗಳೂ ಬೆಂಗಳೂರಿನಲ್ಲಿ ನಡೆದಿವೆ.

ಜಾತಿ ತಿಳಿಯುವವರೆಗೆ ಅನ್ಯೋನ್ಯವಾಗಿದ್ದ ಜನರು ಜಾತಿ ತಿಳಿದ ನಂತರ ಪರಸ್ಪರ ದೂರವಾದ ಘಟನೆಗಳೂ ನಡೆದಿವೆ. ದಲಿತರಿಗೆ ಮನೆ ಕೊಡುವುದಿಲ್ಲ. ಮುಸ್ಲಿಮರಿಗೆ ಮನೆ ಕೊಡುವುದಿಲ್ಲ. ಮಾಂಸಾಹಾರಿಗಳಿಗೆ ಮನೆ ಬಾಡಿಗೆಗೆ ಕೊಡುವುದಿಲ್ಲ ಎನ್ನುವುದು ನಗರ ಪ್ರದೇಶಗಳಲ್ಲಿ ಮಾಮೂಲಿ ಎನ್ನುವಂತಾಗಿದೆ. ಒಳಮೀಸಲಾತಿ ಸಮೀಕ್ಷೆ ಸಂದರ್ಭದಲ್ಲಿ ಇಂತಹ ವಿಷಯಗಳು ಹೊರಬಂದಾಗ ಸುಳ್ಳು ಜಾತಿ ಹೇಳಿಕೊಂಡು ಮನೆ ಬಾಡಿಗೆಗೆ ಪಡೆದಿರುವ ಗುಟ್ಟು ರಟ್ಟಾಯಿತು ಎಂದೇ ನಾವು ಭಾವಿಸುತ್ತೇವೆ.

> ದಲಿತರು, ಹಿಂದುಳಿದ ವರ್ಗದವರನ್ನು ಎಚ್ಚರಿಸಲು ಒಬ್ಬ ಅಂಬೇಡ್ಕರ್ ಸಾಕಾಗಬಹುದು. ಆದರೆ ಮೇಲು ವರ್ಗದವರು ಎಂದು ಭ್ರಮಿಸಿಕೊಂಡವರನ್ನು ಎಚ್ಚರಿಸಲು ಅಂಬೇಡ್ಕರ್ ಅಂತಹ ಮಹನೀಯರು ನೂರು ಮಂದಿ ಬರಬೇಕೇನೋ ಎಂಬ ಅನುಮಾನ ಕಾಡುತ್ತದೆ. ಯಾಕೆಂದರೆ ನಾವು ಯಾವ ಮಹಾತ್ಮರ ಮಾತನ್ನೂ ಪಾಲಿಸಲಿಲ್ಲ. ಅದಕ್ಕೇ ಸಮಾಜದಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ...

ಆದರೆ, ನಿಜವಾಗಿ ರಟ್ಟಾಗಿದ್ದು ಮನುಷ್ಯ ಸ್ವಭಾವ. ನಮ್ಮಲ್ಲಿ, ನಮ್ಮ ಸಮಾಜದ ಅಂತರ್ಯದಲ್ಲಿ ಇನ್ನೂ ಅಸ್ಪೃಶ್ಯತೆ ಜೀವಂತವಾಗಿದೆ ಎನ್ನುವುದು ರಟ್ಟಾಗಿದೆಯಷ್ಟೆ. ಮಾಂಸಾಹಾರಿಗಳಿಗೆ ಮನೆ ಕೊಡುವುದಿಲ್ಲ. ಅವರು ಮನೆ ಗಲೀಜು ಮಾಡುತ್ತಾರೆ. ವಾಸನೆ ಸಹಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದೆಲ್ಲ ಬರೀ ಮೇಲುನೋಟದ ಮಾತುಗಳು ಅಷ್ಟೆ. ಅಂತರ್ಯದಲ್ಲಿ ಇರುವುದು ಅಸ್ಪೃಶ್ಯತೆಯ ಭಾವನೆಯೇ ಆಗಿದೆ.

ನಾವು ಚಂದ್ರಯಾನ ಮಾಡಿದ್ದೇವೆಂದು ಬೀಗುತ್ತೇವೆ. ಮಂಗಳನ ಅಂಗಳಕ್ಕೆ ಹೋಗುವುದಕ್ಕೆ ತಯಾರಿ ನಡೆಸಿದ್ದೇವೆ. ಇತ್ತೀಚೆಗೆ ಶುಭಾಂಶು ಶುಕ್ಲಾ ಅಂತರಿಕ್ಷಕ್ಕೆ ಹಾರಿದ್ದಾರೆ. ವೈಜ್ಞಾನಿಕ ಮನೋಭಾವನೆ ಬೆಳೆದಿದೆ ಎಂದು ಖುಷಿಪಡುತ್ತೇವೆ. ನಮ್ಮ ಮಕ್ಕಳು ಶಿಕ್ಷಣ ರಂಗದಲ್ಲಿ ಭಾರಿ ಸಾಧನೆ ಮಾಡಿದ್ದಾರೆ ಎಂದು ಬೆನ್ನುತಟ್ಟುತ್ತೇವೆ. ಬುಡಕಟ್ಟು ಜನಾಂಗದ ಮಹಿಳೆಯನ್ನು ರಾಷ್ಟ್ರಪತಿ ಮಾಡಿದ್ದೇವೆ ಎಂದು ಎದೆಯುಬ್ಬಿಸಿ ಹೇಳುತ್ತೇವೆ. ದಲಿತರಿಗೆ ಸಮಾನ ಅವಕಾಶ ಕಲ್ಪಿಸಿದ್ದೇವೆ ಎಂದು ಪ್ರಚಾರ ಮಾಡುತ್ತೇವೆ. ಆದರೆ ಎದೆಯ ಗೂಡಿನೊಳಗೆ ಇನ್ನೂ ಅಸ್ಪೃಶ್ಯತೆಯ ಭಾವ ಹಾಗೆಯೇ ಇದೆ ಎನ್ನುವ ಸತ್ಯ ಆಗಾಗ ಹೊರಗೆ ಬರುತ್ತಲೇ ಇರುತ್ತದೆ.

ಮಾಂಸ ತಿನ್ನುವವರು ಕೀಳು. ಸಸ್ಯಾಹಾರಿಗಳು ಶ್ರೇಷ್ಠ ಎನ್ನುವ ವ್ಯಸನ ನಮ್ಮನ್ನು ಬಿಟ್ಟು ತೊಲಗಿಯೇ ಇಲ್ಲ. ಮನುಷ್ಯರನ್ನು, ಮನುಷ್ಯತ್ವವನ್ನು ತಿನ್ನುವವರಿಗಿಂತ ಮಾಂಸಾಹಾರಿಗಳು ಮೇಲು ಎನ್ನುವ ಸತ್ಯ ನಮ್ಮ ಅರಿವಿಗೆ ಬಂದೇ ಇಲ್ಲ. ಸತ್ಯವನ್ನು ಒಪ್ಪಿಕೊಳ್ಳುವ ಸಾಹಸವನ್ನೂ ನಾವು ಮಾಡುವುದೇ ಇಲ್ಲ.

ಕೋವಿಡ್ ಕಾಲದಲ್ಲಿಯೂ ಹೀಗೆಯೇ ಆಯಿತು. ಭೌತಿಕ ಅಂತರವನ್ನು ಕಾಪಾಡಿಕೊಳ್ಳಿ ಎಂಬ ಸಂದೇಶ ಬಂದ ತಕ್ಷಣ ಕೆಲವು ಮನಸ್ಸುಗಳು 'ನಾವು ಹೇಳಿಲ್ವಾ, ಕಂಡಕಂಡವರನ್ನೆಲ್ಲಾ ಮುಟ್ಟಿಸಿಕೊಳ್ಳಬಾರದು ಎಂದು ನಾವು ಹಿಂದಿನಿಂದಲೂ ಹೇಳಿಕೊಂಡು ಬಂದಿದ್ದರೂ ನೀವು ಕೇಳಲಿಲ್ಲ. ಈಗ ನೋಡಿ ಏನಾಯ್ತು. ಪ್ರಕೃತಿಯೇ ನಮ್ಮ ಮಾತನ್ನು ಒಪ್ಪುವಂತೆ ಮಾಡಿದೆ' ಎಂದು ಹೇಳಿಕೊಂಡು ತಿರುಗಾಡಿದ್ದರು.

ವೈರಾಣು ಕೊಂಡಿ ತಪ್ಪಿಸಲು ಕೈಗೊಂಡ ಕ್ರಮವನ್ನು ಅಸ್ಪೃಶ್ಯತೆ ಸಮರ್ಥನೆಗೆ ಬಳಸಿಕೊಳ್ಳುವ ಹೀನ ಮನಃಸ್ಥಿತಿಯನ್ನೂ ಕೆಲವರು ಪ್ರದರ್ಶಿಸಿದ್ದರು. ನಮ್ಮದು ತೋರಿಕೆಗೆ ಮುನ್ನೋಟ. ನಿಜವಾಗಿ ನಮ್ಮದು ಹಿಮ್ಮುಖ ಚಲನೆ. ಒಂದು ಹೆಜ್ಜೆ ಮುಂದೆ ಇಡುತ್ತೇವೆ. ಆದರೆ, ನಾಲ್ಕು ಹೆಜ್ಜೆ ಹಿಂದಕ್ಕೆ ಜಾರಿರುತ್ತೇವೆ. ನಾಗರಿಕತೆಯ ಸೋಗು. ಅನಾಗರಿಕ ಮನಸ್ಸು. ಮಹಾತ್ಮರ ಮಾತುಗಳಿಗೆ ನಮ್ಮ ತಲೆ ತೂಗುತ್ತದೆ. ಆದರೆ ಮನೆಗೆ ಬಂದ ತಕ್ಷಣ ನಾಯಿ ಬಾಲ ಡೊಂಕು.

ಕವಿ ಸಿದ್ಧಲಿಂಗಯ್ಯ ಅವರು ಅಂಬೇಡ್ಕರ್ ಬಗ್ಗೆ ಚೆಂದದ ಕತೆ ಹೇಳುತ್ತಿದ್ದರು. ಆ ಕತೆ ನಿಜವಾದದ್ದೇ ಎಂದು ಕೇಳಿದರೆ ಉತ್ತರ ಗೊತ್ತಿಲ್ಲ. ಆದರೆ ಕತೆಯ ಸಂದೇಶ ಇದೆಯಲ್ಲ, ಅದು ಮಹತ್ವದ್ದು. ಅವರು ಹೇಳುತ್ತಿದ್ದ ಕತೆ ಹೀಗಿದೆ:

ಭಾರತಕ್ಕೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ ಬ್ರಿಟಿಷ್ ಪತ್ರಕರ್ತನೊಬ್ಬ ಭಾರತಕ್ಕೆ ಬಂದನಂತೆ. ಭಾರತದಲ್ಲಿ ಪ್ರಜಾಪ್ರಭುತ್ವ ಹೇಗೆ ನಡೆಯುತ್ತಿದೆ ಎನ್ನುವುದನ್ನು ಅಧ್ಯಯನ ಮಾಡುವುದು ಆತನ ಪ್ರವಾಸದ ಉದ್ದೇಶ. ಆತ ಮೊದಲು ಮಹಾತ್ಮ ಗಾಂಧಿ ಅವರ ಮನೆಗೆ ಹೋದನಂತೆ. ಆಗ ಅವರು ನಿದ್ರೆಯಲ್ಲಿದ್ದರಂತೆ. ಎಬ್ಬಿಸುವುದು ಬೇಡ ಎಂದು ಆತ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಮನೆಗೆ ಹೋದನಂತೆ. ಅವರು ಆಗ ಮಲಗಿದ್ದರಂತೆ. ಅಲ್ಲಿಂದ ಹೊರಟು ಗೃಹ ಸಚಿವ ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರ ಮನೆಗೆ ಹೋದನಂತೆ. ಅವರೂ ನಿದ್ರೆಯಲ್ಲಿದ್ದರಂತೆ. ಇಲ್ಲೂ ತನ್ನ ಕೆಲಸ ಆಗುವುದಿಲ್ಲ ಎಂದು ಮಧ್ಯರಾತ್ರಿಯ ವೇಳೆಗೆ ಅಂಬೇಡ್ಕರ್ ಅವರ ಮನೆಗೆ ಹೋದನಂತೆ. ಆಗ ಅಂಬೇಡ್ಕರ್ ಅವರು ಯಾವುದೋ ಪುಸ್ತಕವನ್ನು ಓದುತ್ತಾ, ಟಿಪ್ಪಣಿ ಮಾಡಿಕೊಳ್ಳುತ್ತಾ ಕುಳಿತಿದ್ದರಂತೆ.

ಅಂಬೇಡ್ಕರ್ ಅವರಿಗೆ ಪತ್ರಕರ್ತ 'ನಾನು ಗಾಂಧಿ, ನೆಹರೂ, ಪಟೇಲ್ ಅವರ ಮನೆಗಳಿಗೆ ಹೋಗಿದ್ದೆ. ಅವರೆಲ್ಲಾ ನಿದ್ದೆಯಲ್ಲಿದ್ದರು. ನೀವು ಮಾತ್ರ ಇನ್ನೂ ಎಚ್ಚರವಾಗಿದ್ದು ಏನೋ ಟಿಪ್ಪಣಿ ಮಾಡಿಕೊಳ್ಳುತ್ತಾ ಇದ್ದೀರಲ್ಲ. ಯಾಕೆ?' ಎಂದು ಕೇಳಿದನಂತೆ. ಅದಕ್ಕೆ ಅಂಬೇಡ್ಕರ್ 'ಅವರ ಸಮಾಜಗಳೆಲ್ಲಾ ಎಚ್ಚರವಾಗಿವೆ. ನನ್ನ ಸಮಾಜ ಇನ್ನೂ ನಿದ್ದೆಯಲ್ಲಿ ಇರುವುದರಿಂದ ನಾನು ಮಧ್ಯರಾತ್ರಿಯೂ ಎಚ್ಚರವಾಗಿದ್ದು ಟಿಪ್ಪಣಿ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ನನ್ನ ಸಮಾಜವನ್ನು ಎಚ್ಚರಿಸುವುದು ನನ್ನ ಕರ್ತವ್ಯ' ಎಂದರಂತೆ.

ದಲಿತರು, ಹಿಂದುಳಿದ ವರ್ಗದವರನ್ನು ಎಚ್ಚರಿಸಲು ಒಬ್ಬ ಅಂಬೇಡ್ಕರ್ ಸಾಕಾಗಬಹುದು. ಆದರೆ ಮೇಲು ವರ್ಗದವರು ಎಂದು ಭ್ರಮಿಸಿಕೊಂಡವರನ್ನು ಎಚ್ಚರಿಸಲು ಅಂಬೇಡ್ಕರ್ ಅಂತಹ ಮಹನೀಯರು ನೂರು ಮಂದಿ ಬರಬೇಕೇನೋ ಎಂಬ ಅನುಮಾನ ಕಾಡುತ್ತದೆ. ಯಾಕೆಂದರೆ ನಾವು ಯಾವ ಮಹಾತ್ಮರ ಮಾತನ್ನೂ ಪಾಲಿಸಲಿಲ್ಲ. ಅದಕ್ಕೇ ಸಿದ್ಧೇಶ್ವರ ಸ್ವಾಮೀಜಿ, 'ಜಗತ್ತಿನಲ್ಲಿ ಒಳ್ಳೆಯದ್ದನ್ನೆಲ್ಲಾ ಹೇಳಿ ಆಗಿದೆ. ಇನ್ನು ಹೇಳುವುದಕ್ಕೆ ಏನೂ ಉಳಿದಿಲ್ಲ. ಈಗ ಇರುವುದು ಪಾಲನೆಯಷ್ಟೆ' ಎಂದು ಹೇಳಿದ್ದರು. ಪಾಲನೆಗೆ ಮನಸ್ಸು ಮಾಡಬೇಕಷ್ಟೆ.

ವಾಚಕರ ವಾಣಿ

ಪ್ರಶ್ನಾತೀತ ಧೋರಣೆ ಒಳ್ಳೆಯದಲ್ಲ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರ ಆಡಳಿತ ವೈಖರಿ ವಿರೋಧಿಸಿ ಗೌರವ ಕಾರ್ಯದರ್ಶಿ ಸ್ಥಾನಕ್ಕೆ ನೇ.ಭ. ರಾಮಲಿಂಗ ಶೆಟ್ಟಿ ರಾಜೀನಾಮೆ ನೀಡಿದ್ದಾರೆ (ಪ್ರ.ವಾ., ಜೂನ್ 27). ಗೌರವ ಕಾರ್ಯದರ್ಶಿಯಾಗಿದ್ದ ಪದ್ಮಿನಿ ನಾಗರಾಜು ಇಂತಹದ್ದೇ ಕಾರಣ ನೀಡಿ ಕೆಲವು ದಿನಗಳ ಹಿಂದೆ ಪರಿಷತ್ತಿನಿಂದ ಹೊರ ಬಂದಿದ್ದರು.

ಕನ್ನಡದ ಅಸ್ಮಿತೆ ಎತ್ತಿ ಹಿಡಿಯುವ ಕಸಾಪಕ್ಕೆ ತನ್ನದೇ ಆದ ಘನತೆ ಇದೆ. ಆದರೆ, ಜೋಶಿ ಅವರು ಹಲವು ಬಾರಿ ನೀಡಿದ ಸಡಿಲ ಹೇಳಿಕೆಗಳು ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ತಕ್ಕುದಾಗಿರಲಿಲ್ಲ. ಇಬ್ಬರು ಗೌರವ ಕಾರ್ಯದರ್ಶಿಗಳು ರಾಜೀನಾಮೆ ನೀಡಿರುವುದನ್ನು ನೋಡಿದರೆ, ಜೋಶಿ ಅವರ ಆಡಳಿತದಲ್ಲಿ ಉಸಿರುಗಟ್ಟಿಸುವ ವಾತಾವರಣ ಇರುವುದು ಸ್ಪಷ್ಟವಾಗಿದೆ. ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಿರುವುದರಿಂದ ತಾನು ಪ್ರಶ್ನಾತೀತ ಎಂಬ ಧೋರಣೆಯು ಅಧ್ಯಕ್ಷರಲ್ಲಿ ಎದ್ದು ಕಾಣುತ್ತಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ.

ಚಂದ್ರಪ್ರಭ ಕಠಾರಿ, ಬೆಂಗಳೂರು

ಯಾವುದು ವಾಸ್ತವ?

'ವಾಸ್ತವ ಅರ್ಥೈಸಿಕೊಳ್ಳಿ, ಚಳವಳಿ ಕೈಬಿಡಿ' ಎಂದು ಸಚಿವ ಎಂ.ಬಿ. ಪಾಟೀಲ, ದೇವನಹಳ್ಳಿ- ಚನ್ನರಾಯಪಟ್ಟಣದ ರೈತರಿಗೆ ಮನವಿ ಮಾಡಿದ್ದಾರೆ (ಪ್ರ.ವಾ., ಜೂನ್ 27). ಕೈಗಾರಿಕೆಯೇ ನಿಜವಾದ ಅಭಿವೃದ್ಧಿ ಎಂಬರ್ಥದಲ್ಲಿ ಅವರು ಸರ್ಕಾರದ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ. ಕಾರ್ಪೊರೇಟ್ ವಲಯ ಬಿಂಬಿಸುವ ಮಾದರಿಯೇ ಅಭಿವೃದ್ಧಿ ಎನ್ನುವುದಾದರೆ ಮುಂದೆ ಹೊಟ್ಟೆಗೆ ತಿನ್ನಲು ಮಣ್ಣೂ ಸಿಕ್ಕುವುದಿಲ್ಲ ಎಂಬ ಅರಿವು ನಮಗಿರಬೇಕು. ಸರ್ಕಾರವು ತನ್ನ ನಿರ್ಧಾರದಿಂದ ಹಿಂದೆ ಸರಿದು, ಸುಸ್ಥಿರ ಆರ್ಥಿಕ ಅಭಿವೃದ್ಧಿಯತ್ತ ಗಮನ ಹರಿಸುವುದು ಒಳ್ಳೆಯ ಕ್ರಮ. ಆಗ ಕೃಷಿಯೂ ಉಳಿಯುತ್ತದೆ; ಕೈಗಾರಿಕೆಯೂ ಕೈಗೂಡುತ್ತದೆ. ಈ ಮಾದರಿಯೇ ವಾಸ್ತವ.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ತಿಪಟೂರು ಕೊಬ್ಬರಿ: ಜಿಐ ಟ್ಯಾಗ್ ಬೇಕು

ಕೆಲವು ತಿಂಗಳಿನಿಂದ ಉಂಡೆ ಕೊಬ್ಬರಿ ಧಾರಣೆಯು ಏರಿಕೆಯಾಗುತ್ತಿದೆ. ತೋಟಗಳಲ್ಲಿ ಮರಗಳು ರೋಗಬಾಧೆಗೆ ತುತ್ತಾಗಿರುವುದರಿಂದ ತೆಂಗಿನಕಾಯಿ ಇಳುವರಿ ಕಡಿಮೆಯಾಗಿದೆ. ಮತ್ತೊಂದೆಡೆ ರೈತರು ಹೆಚ್ಚಾಗಿ ಎಳನೀರು ಮಾರಾಟಕ್ಕೆ ಮುಂದಾಗಿದ್ದಾರೆ. ಇದರಿಂದ ಕೊಬ್ಬರಿ ದಾಸ್ತಾನು ಇಲ್ಲವಾಗಿದೆ. ಇದೇ ಧಾರಣೆ ಏರಿಕೆಗೆ ಕಾರಣ.

ಇನ್ನೊಂದೆಡೆ ಅಳಿದುಳಿದ ಕೊಬ್ಬರಿ ದಾಸ್ತಾನು ಮಾಡಲು ಶೇಖರಣಾ ಘಟಕಗಳಿಗೆ ವಾರ್ಷಿಕವಾಗಿ ಸಾವಿರಾರು ರೂಪಾಯಿ ಭರಿಸಬೇಕಿದೆ. ಈ ಘಟಕಗಳಿಗೆ ಸರ್ಕಾರದಿಂದ ಸಹಾಯಧನ ಸಿಗುತ್ತಿಲ್ಲ. ತಿಪಟೂರು ಕೊಬ್ಬರಿಗೆ ಭೌಗೋಳಿಕ ಸೂಚ್ಯಂಕ ಪಟ್ಟ (ಜಿಐ ಟ್ಯಾಗ್) ನೀಡಿದರೆ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ. ಜೊತೆಗೆ, ಮಾರುಕಟ್ಟೆಯಲ್ಲಿನ ದರ ಏರಿಳಿತವನ್ನು ಸರಿದೂಗಿಸಲು ನೆರವಾಗಲಿದೆ.

ದರ್ಶನ್ ಎನ್.ಕೆ., ಗುಬ್ಬಿ

ಹುಲಿಗಳ ಸಾವು: ಹೊಣೆ ಯಾರು?

ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ ತಾಯಿ ಹುಲಿ ಹಾಗೂ ನಾಲ್ಕು ಮರಿಗಳು ವಿಷಪ್ರಾಶನದಿಂದ ಮೃತಪಟ್ಟಿರುವುದು ವರದಿಯಾಗಿದೆ (ಪ್ರ.ವಾ., ಜೂನ್ 27). ಇದು ಕಗ್ಗೊಲೆ ಎಂಬುವುದರಲ್ಲಿ ಅನುಮಾನವಿಲ್ಲ. ಅರಣ್ಯ ಅಧಿಕಾರಿಗಳ ಬೇಜವಾಬ್ದಾರಿ ನಡೆ, ಕಾಡಂಚಿನ ಗ್ರಾಮಗಳ ಜನರ ದ್ವೇಷಕ್ಕೆ ಹುಲಿಗಳು ಬಲಿಯಾಗಿವೆ. ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಕರ್ತವ್ಯಲೋಪ ಎಸಗಿರುವ ಹಿರಿಯ ಅಧಿಕಾರಿಗಳ ವಿರುದ್ಧವೂ ಶಿಸ್ತುಕ್ರಮ ಜರುಗಿಸಬೇಕು.

ಬಾಬು ಶಿರಮೋಜಿ, ಬೆಳಗಾವಿ

ಬೇಜವಾಬ್ದಾರಿ ನಡೆ ಸರಿಯಲ್ಲ

ರಾಜ್ಯದಲ್ಲಿ ಕೆಲವೆಡೆ ಅತಿವೃಷ್ಟಿಯಿಂದ ಜನ ಸಂಕಷ್ಟದಲ್ಲಿದ್ದಾರೆ. ಅಪಾರ ಪ್ರಮಾಣದಲ್ಲಿ ಆಸ್ತಿ ಹಾನಿಯಾಗಿದೆ. ಸುಗಮ ಸಂಚಾರಕ್ಕೆ ತೊಡಕಾಗುತ್ತಿದೆ. ಕೆಲವರು ಮನೆ ಕಳೆದುಕೊಂಡು ಸಂಕಟಪಡುತ್ತಿದ್ದಾರೆ. ಮತ್ತೊಂದೆಡೆ ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ಇಲ್ಲದೆ ರೈತರು ನೋವು ಅನುಭವಿಸುತ್ತಿದ್ದಾರೆ. ಕೆಲವೆಡೆ ಅನಾವೃಷ್ಟಿಯಿಂದಲೂ ಜನರು ತೊಂದರೆಗೆ ಸಿಲುಕಿದ್ದಾರೆ. ಆದರೆ, ಇದರ ಪರಿವೆಯೇ ಇಲ್ಲವೆಂಬಂತೆ ರಾಜ್ಯದ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ರಾಜಕಾರಣಿಗಳು ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಕ್ಷುಲ್ಲಕ ರಾಜಕೀಯ ವಿಷಯಗಳನ್ನೇ ಬಡಬಡಿಸುತ್ತ ಜನರ ಗಮನವನ್ನು ಬೇರೆಡೆ ಸೆಳೆಯುವ ಕುತಂತ್ರ ಮಾಡುತ್ತಿರುವುದು ರಾಜ್ಯದ ದೌರ್ಭಾಗ್ಯ.

ಆರ್.ಎಸ್. ಅಯ್ಯರ್, ತುಮಕೂರು

ಭಾಷಾ ಬಿಕ್ಕಟ್ಟು ಪರಿಹರಿಸಲಿ

'ತಮಿಳು, ಕನ್ನಡ ಮತ್ತಿತರ ಭಾಷೆಗಳಿಗೆ ತಾಯಿ' ಎಂದು ನಟ ಕಮಲ್ ಹಾಸನ್ ಸೇರಿ ಇತರರು ಹೇಳಿಕೊಳ್ಳುತ್ತಿರುವುದರ ಮೂಲ ಎಲ್ಲಿದೆ ಎಂಬುದರ ಬಗ್ಗೆ ಮದ್ರಾಸ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ತಮಿಳ್ ಸೆಲ್ವಿ (ಪ್ರ.ವಾ., ಜೂನ್ 23) ಸ್ಪಷ್ಟಪಡಿಸಿದ್ದಾರೆ. ತಮಿಳಿನ ಸಾಹಿತಿಗಳಾದ ಸುಬ್ರಮಣ್ಯ ಭಾರತಿ ಅವರು ತಮ್ಮ ಕವನದಲ್ಲಿ ಹಾಗೂ ಸುಂದರಂ ಪಿಳ್ಳೈ ಅವರು ರಚಿಸಿರುವ ನಾಡಗೀತೆಯಲ್ಲಿ ಕನ್ನಡ, ತೆಲುಗು, ಮಲಯಾಳ ಭಾಷೆಗೆ ತಮಿಳು ತಾಯಿ ಭಾಷೆ ಎಂದು ಬರೆದಿರುವುದನ್ನು ಅವರು ಪ್ರಸ್ತಾಪಿಸಿದ್ದಾರೆ.

ಸಾಹಿತ್ಯಾಭ್ಯಾಸಿಗಳಾದ ತಮಿಳರೂ ಈ ಮಿಥ್ಯೆಯನ್ನೇ ಬೆಂಬಲಿಸುವುದರಲ್ಲಿ ಯಾವುದೇ ಸಂಶಯವಿಲ್ಲ. ಭಾಷಾ ತಜ್ಞರು ಹಾಗೂ ವಿದ್ವಾಂಸರು ಇತ್ತ ಗಮನ ಹರಿಸಿ ಮೂಲ ದ್ರಾವಿಡ ಭಾಷೆಯಿಂದ ಹುಟ್ಟಿರುವ ಈ ಎಲ್ಲ ಭಾಷೆಗಳೂ ಸೋದರ ಭಾಷೆಗಳೆಂಬುದನ್ನು ಸೋದಾಹರಣವಾಗಿ ಪ್ರತಿಪಾದಿಸುವ ಅಗತ್ಯವಿದೆ.

ಇ.ವಿ. ಸತ್ಯನಾರಾಯಣ, ಬೆಂಗಳೂರು

ಚಾಟಿ

ಘೋರ ಶಿಕ್ಷೆಯಾಗಲಿ



ಮಲೆಮಹದೇಶ್ವರ ವನ್ಯಜೀವಿಧಾಮದಲ್ಲಿ ತಾಯಿ ಹುಲಿ ಹಾಗೂ ನಾಲ್ಕು ಮರಿಗಳು ಮೃತಪಟ್ಟಿರುವುದು ಆಘಾತಕಾರಿ ಬೆಳವಣಿಗೆಯಾಗಿದೆ. ತಪ್ಪಿತಸ್ಥರಿಗೆ ಘನಘೋರ ಶಿಕ್ಷೆ ಆಗಬೇಕು.

ಜಗ್ಗೇಶ್, ನಟ, ರಾಜ್ಯಸಭೆ ಸದಸ್ಯ, 'ಎಕ್ಸ್'ನಿಂದ

ಕಿಡಿನುಡಿ



ಸರ್ಕಾರಿ ಶಾಲೆಯಲ್ಲಿನ ಮಕ್ಕಳಿಗೆ ಮೊಟ್ಟೆ, ಹಾಲು, ಬಾಳೆಹಣ್ಣು ವಿತರಿಸುವುದು ಶಿಕ್ಷಕರ ಕೆಲಸವಲ್ಲ. ಬೋಧನೆ ಬಿಟ್ಟು, ಬೇರೆ ಯಾವ ಹೊಣೆಗಾರಿಕೆಯೂ ಶಿಕ್ಷಕರಿಗೆ ಇರಬಾರದು. ಅದಕ್ಕಾಗಿಯೇ ಬೇರೆ ಸಿಬ್ಬಂದಿ ನೇಮಿಸಬೇಕು.

ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ

25 ವರ್ಷಗಳ ಹಿಂದೆ

ಬುಧವಾರ, 28-6-2000

- **ಅದಕ್ಷ ನೌಕರರ ವಜಾಕ್ಕೆ ಸುಪ್ರೀಂ ಕೋರ್ಟ್ ಆದೇಶ**

ನವದೆಹಲಿ, ಜೂನ್ 27 (ಪಿಟಿಐ)– ಉಪಯುಕ್ತ ಸೇವೆ ಸಲ್ಲಿಸುವ ನೌಕರರನ್ನು ಮಾತ್ರ ಕೆಲಸದಲ್ಲಿಟ್ಟುಕೊಂಡು ಉಳಿದವರನ್ನು ಕಿತ್ತು ಹಾಕುವಂತೆ ಸುಪ್ರೀಂ ಕೋರ್ಟ್ ಇಂದು ಕೇಂದ್ರ ಸರ್ಕಾರಕ್ಕೆ ಆದೇಶಿಸಿದೆ.

ಅನಗತ್ಯ ಹುದ್ದೆಗಳ ನಿಯಂತ್ರಣಕ್ಕೆ ಯತ್ನಿಸುವುದರ ಜೊತೆಗೆ ಈ ಕ್ರಮ ಅನುಸರಿಸಬೇಕೆಂದು ಅದು ಸೂಚಿಸಿದೆ.

- **ಬ್ರಿಟಿಷ್ ಮಹಿಳೆ ಒಪ್ಪಿಸಲು ನ್ಯಾಯಾಲಯ ನಿರಾಕರಣೆ**

ಮೈಸೂರು, ಜೂನ್ 27– ಬ್ಯಾಂಕ್ ದರೋಡೆ ಸಂಬಂಧ ನಗರದಲ್ಲಿ ಬಂದಿಯಾಗಿರುವ ಬ್ರಿಟಿಷ್ ಮಹಿಳೆಯನ್ನು ಮುಂಬೈ ಪೊಲೀಸರಿಗೆ ಒಪ್ಪಿಸಲು ನಿರಾಕರಿಸಿರುವ ನಗರದ ಮೂರನೇ ಹೆಚ್ಚುವರಿ ನ್ಯಾಯಾಧೀಶರು, ವಿಚಾರಣೆಯನ್ನು ಜುಲೈ 6ಕ್ಕೆ ಮುಂದೂಡಿದ್ದಾರೆ.

ಕಳೆದ ನವೆಂಬರ್ 12ರಂದು ಐವರು ದುಷ್ಕರ್ಮಿಗಳು ಮುಂಬೈನ ಕೊಲಬಾದ ಎಲ್‌ಕೆಪಿ ಫೆರೆಕ್ಸ್ ಎಂಬ ವಿದೇಶಿ ವಿನಿಮಯ ಕಚೇರಿ ಮೇಲೆ ದಾಳಿ ನಡೆಸಿ 25 ಲಕ್ಷ ನಗದು ಸೇರಿದಂತೆ ನೂರಾರು ವಿದೇಶಿ (ಅಮೆರಿಕನ್ ಡಾಲರ್ಸ್) ಟ್ರಾವೆಲರ್ಸ್ ಚೆಕ್‌ಗಳನ್ನು ದರೋಡೆ ಮಾಡಿದ್ದರು.

75 ವರ್ಷಗಳ ಹಿಂದೆ


ಬುಧವಾರ, 28-6-1950

- **ಕೆ.ಸಿ. ರೆಡ್ಡಿಯವರಿಗೆ ಒಂದು ತಿಂಗಳು ರಜಾ**

ಬೆಂಗಳೂರು, ಜೂನ್ 27– ಮೈಸೂರು ಸಂಸ್ಥಾನದ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರು ತ್ರಿಶ್ಶೂರ್‌ನಲ್ಲಿ ಚಿಕಿತ್ಸೆ ತೆಗೆದುಕೊಳ್ಳುವ ಪ್ರಯುಕ್ತ ಅವರಿಗೆ ಪೂರ್ಣ ವಿಶ್ರಾಂತಿ ಬೇಕಾಗಿದೆಯೆಂದೂ, ಜುಲೈ ತಿಂಗಳು ಪೂರ್ತಿ ಅವರು ಬೆಂಗಳೂರಿನಲ್ಲಿ ಇರುವುದಿಲ್ಲವೆಂದೂ ತಿಳಿದು ಬಂದಿದೆ.

ಈ ಅವಧಿಯಲ್ಲಿ ಹಣಕಾಸು ಸಚಿವ ಎಚ್.ಸಿ. ದಾಸಪ್ಪನವರು ಮುಖ್ಯಮಂತ್ರಿಯವರ ಕೆಲಸವನ್ನೂ ನೋಡಿಕೊಳ್ಳುವರು.

ಚುರುಮುರಿ



ಫಲಹಾರ ಪರಿಹಾರ!

• ತುರುವೇಕೆರೆ ಪ್ರಸಾದ್

'ಮಾತು ಮನೆ ಕೆಡುಸ್ತು ಅಂತಾರೆ, ಇಲ್ ನೋಡುದ್ರೆ ಮನೆನೇ ಮಾತು ಕೆಡಿಸಿದೆ' ಎಂದ ಗುದ್ಲಿಂಗ ಹರಟೆಕಟ್ಟೇಲಿ!

'ಇಂತ ವಸತಿ ತಾಪತ್ರಯಗಳನ್ನು ನೋಡೇ ಯೋಳಿದ್ದು. ಅಲ್ಲಿದೆ ನಮ್ಮನೆ, ಇಲ್ಲಿರುವುದು ಸುಮ್ಮನೆ ಅಂತ' ಎಂದ ಮಾಲಿಂಗ.

'ಆಳೋರು ಅದನ್ನ ಅಲ್ಲಿದೆ ಮೇಲ್ಮನೆ, ಕೆಳಮನೆ, ಇಲ್ಲಿರುವುದು ಜುಮ್ಮನೆ ಅಂದ್ಕೊಂಡಿರೋ ಅಂಗದೆ'.

'ಏನೂ ಕೊಡದೆ ವಸತಿ, ಏನೂ ಕೇಳದ ಸತಿ, ಸಂಬಳ ತಿಂಗಳಿಗೊಂದು ಸರ್ತಿ, ಜೊತೆಗೆ ಗಿಂಬಳ ಜೇಬು ಭರ್ತಿ ಇರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಅನ್ನೋ ಅಂಗಾಗದೆ'.

'ವೂ ಕಣಪ್ಪ, ಈ ಮನೆ ವಿಷಯಕ್ಕೇ ಕೈ ಮನೇಲಿ ಭಾರೀ ಭೂಕಂಪ ಆಗದೆ'.

'ಒಮ್ಮೆಮ್ಮೆ ಆಗೋದೇ ಹೀಗೆ, ಹರಡುತ್ತದೆ ಅಸಮಾಧಾನದ ಹೊಗೆ, ಮೊದಲು ಪಾಟೀಲು, ಆಮೇಲೆ ರಾಜು ಕಾಗೆ. ಮದ್ದು ಅರೆದಿದ್ದಾರೆ ದೆಹಲಿಗೆ ಕರೆಸಿ ಖರ್ಗೆ!' ಎಂದು ಪ್ರಾಸ ಕಟ್ಟಿದ ಕಲ್ಲೇಶಿ.

'ಏನೇ ಮದ್ದ್ ಅರುದು ಮುಚ್ ಹಾಕುದ್ರೂ ಮತ್ತೆ ಮನೆ ಬಾಗಿಲು ಹಾರೊಡ್ಕೊಂಡು ಬಟಾ ಬಯಲಾಗ್ತದೆ ಕಣ್ಲಾ! ನಮ್ ಮಂತ್ರಿಗಳು ಯೋಳಿಲ್ವಾ? ಪವರ್ ಸೆಂಟ್ರು 3-4 ಆಗವೆ ಅಂತ. ಅಂದ್ಮೇಲೆ ಒಂದೊಂದು ಪವರ್ ಪೀಠಕ್ಕೂ ಒಂದೊಂದು ಬಾಗ್ಲು ಇರ್ಬೇಕಲ್ಲ...'

'ಕೈ ಮನೆ ಅಂತ ಅಲ್ಲ, ಕಮಲ ಮನೆ, ತೆನೆ ಮನೆ ಎಲ್ಲಾ ಕಡೇಲೂ ಇಂಗೇ ಆಗದೆ! ಮನೆಯೊಂದು ಮೂರು ಬಾಗಿಲು... ಅವರವರ ಭಾವಕ್ಕೆ ಅವರವರ ಭಕುತಿಗೆ ತಕ್ಕ ಅಂಗೆ ತಗ್ಗಿ ಬಗ್ಗಿ ಪೀಠಕ್ಕೆ ನಡ್ಕಬೇಕು'.

'ಅದೇ ಎಡವಟ್ಟಾಗಿರೋದು! ತಲೆ ಬಗ್ಗುಸ್ದಿದ್ರೆ ಬುಲ್ಡಗೆ ಹೊಡೆಯುತ್ತೆ. ಹೊಸಿಲು ದಾಟಕ್ ಓದ್ರೆ ಪಂಚೆ ಹರಿತದೆ, ಇಂಗಾದ್ರೆ ಎಂಗೆ ಅಂತ'.

'ಇದ್ಕೆಲ್ಲಾ ತ್ಯಾಪೆ ಹಾಕ್ಬೇಕು ಅಂತಾನೇ ಸಿ.ಎಂ ಸಾಹೇಬ್ರು ಇನ್ಮ್ಯಾಗೆ ಶಾಸಕರನ್ನ ಬ್ರೇಕ್‌ಫಾಸ್ಟ್‌ಗೆ ಕರೀತಾರಂತೆ'.

'ಸಿ.ಎಂ ತಿಂಡಿ, ವಸತಿ ಕೊಟ್ರೆ ಮನೆ ಸತಿ ಮಾಡಿದ್ ತಿಂಡಿ ಯಾರ್ ತಿನ್ಬೇಕು? ಮನಸ್ಸು ಬ್ರೇಕು, ವರ್ಷವೆಲ್ಲಾ ಫಾಸ್ಟು (ಉಪವಾಸ). ಆಮೇಲ್ ಶಾಸಕರು ಸೆಷನ್ ಇಲ್ದೆ ಇದ್ದಾಗ್ಲೂ ಮನೆ ಕಡೆ ಓಗ್ದಂಗಾಗೋಯ್ತದೆ' ಎಂದ ಪರ್ಮೇಶಿ. ಎಲ್ಲಾ ಗೊಳ್ಳನೆ ನಕ್ಕರು.

ಸಂಗತ

ಇಲಾಖೆಗೆ ಜ್ವರ, ಶಿಕ್ಷಕರಿಗೆ ಬರೆ


ಸರ್ಕಾರಿ ಶಾಲೆಗಳಲ್ಲಿ ಉತ್ತಮ ಫಲಿತಾಂಶ ನಿರೀಕ್ಷಿಸುವ ಶಿಕ್ಷಣ ಇಲಾಖೆಯು ಶಿಕ್ಷಕರು ಪೂರ್ಣ ಪ್ರಮಾಣದಲ್ಲಿ ತಮ್ಮ ಕರ್ತವ್ಯ ನಿರ್ವಹಿಸಲು ಅವಕಾಶ ಕಲ್ಪಿಸಬೇಕಲ್ಲವೆ?

• ಎಂ. ಅಬ್ದುಲ್ ರೆಹಮಾನ್ ಪಾಷ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 60ಕ್ಕಿಂತ ಕಡಿಮೆ ಫಲಿತಾಂಶ ಬಂದ ಶಾಲೆಗಳ ಶಿಕ್ಷಕರ ವೇತನ, ಪದ ಬಡ್ತಿಯನ್ನು ತಡೆಹಿಡಿಯಲಾಗುವುದು ಎಂದು ಬೆದರಿಸುವ ಸುತ್ತೋಲೆಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಹೊರಡಿಸಿದೆ. ಈ ಸುತ್ತೋಲೆ, ರಾಜ್ಯದ ಶಿಕ್ಷಕ ವಲಯ ಮತ್ತು ಪ್ರಜ್ಞಾವಂತರಲ್ಲಿ ಆತಂಕ, ಅಸಮಾಧಾನವನ್ನು ಸೃಷ್ಟಿಸಿದೆ.

ಶಾಲಾ ಹಂತದಲ್ಲಿ ಶಿಕ್ಷಣವು ಮಕ್ಕಳಿಗೆ ಮತ್ತು ಸಮಾಜಕ್ಕೆ ಪ್ರಯೋಜನಕಾರಿ ಆಗುವಲ್ಲಿ ಸಕ್ಷಮವಾಗಿ ದುಡಿಯಬೇಕಾದ ಅಂಗಗಳು ಮೂರು: ಶಿಕ್ಷಣ ಇಲಾಖೆ, ಶಾಲೆಯ ಶಿಕ್ಷಕರು ಮತ್ತು ಮಕ್ಕಳ ಪೋಷಕರು.

ಸರ್ಕಾರಿ ಶಾಲೆಗಳಿಂದ ತಮ್ಮ ಮಕ್ಕಳ ಅಭ್ಯುದಯ ಅಸಾಧ್ಯವೆಂದು (ಅದೊಂದು ಭ್ರಮೆಯಾಗಿದ್ದರೂ) ಅಚಲವಾಗಿ ನಂಬಿರುವ ಅಲ್ಪಸ್ವಲ್ಪ ಸ್ಥಿತಿವಂತ ಪೋಷಕರೂ ತಮ್ಮ ಮಕ್ಕಳನ್ನು ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗೆ ಸೇರಿಸುತ್ತಾರೆ. ಉಳಿದ ಅಸಹಾಯಕ, ತೀರಾ ಬಡವರಾದ, ಮಕ್ಕಳ ಭವಿಷ್ಯದ ಬಗ್ಗೆ ಯಾವುದೇ ಕನಸನ್ನು ಕಾಣಲು ಅಶಕ್ತರಾದ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಅನಿವಾರ್ಯವಾಗಿ ಸೇರಿಸುತ್ತಾರೆ; ಮಧ್ಯಾಹ್ನ ಬಿಸಿ ಊಟವಾದರೂ ಸಿಗುತ್ತದೆ ಎನ್ನುವ ಕಾರಣವೂ ಇರಬಹುದು. ಹೀಗಾಗಿ, ಪೋಷಕರ ಕಡೆಯಿಂದ ಸಿಗಬೇಕಾದ ಬೆಂಬಲ, ಪ್ರೇರಣೆ, ಉತ್ತೇಜನವು ಸರ್ಕಾರಿ ಶಾಲೆಯ ಮಕ್ಕಳಿಗೆ ಸಾಮಾನ್ಯವಾಗಿ ಸಿಗುವುದಿಲ್ಲ.



ಶಿಕ್ಷಣ ಕ್ಷೇತ್ರದ ಪ್ರಗತಿಯಲ್ಲಿ ಕೊಡುಗೆ ನೀಡುವ ಎರಡನೆಯ ಘಟಕ ಶಿಕ್ಷಕರದ್ದು. ಇಂತಿಷ್ಟು ಮಕ್ಕಳಿಗೆ ಇಂತಿಷ್ಟು ಶಿಕ್ಷಕರು ಎಂಬ ನಿಯಮವಿದೆ. ಆದರದು ನೆಲಮಟ್ಟದಲ್ಲಿ ಬರೀ ಮರೀಚಿಕೆ. ಸರ್ಕಾರಿ ಶಾಲೆಗಳಲ್ಲಿ ಶೇ 30ಕ್ಕಿಂತಲೂ ಹೆಚ್ಚು ಶಿಕ್ಷಕರ ಕೊರತೆ ಇದೆ. ವರ್ಷಗಳಿಂದ ನೇಮಕಾತಿ ಆಗಿಲ್ಲ. ಕನಿಷ್ಠ ಸಂಬಳಕ್ಕೆ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಬೇರೆ ಕಡೆ ತಮ್ಮ ಅರ್ಹತೆಗೆ ತಕ್ಕ ಹಾಗೆ ಉದ್ಯೋಗ ಸಿಗದೆ ಹತಾಶರಾಗಿ, ಇಷ್ಟಾದರೂ ಇರಲಿ ಎಂದು ಬಂದ ಅತಿಥಿ ಶಿಕ್ಷಕರಿಗೆ ಇಲ್ಲಿಯೂ ಉದ್ಯೋಗದ ಖಾತರಿ ಇಲ್ಲ. ಇನ್ನು ಇವರಿಂದ ಎಷ್ಟು ಗುಣಮಟ್ಟದ ಸೇವೆಯನ್ನು ನಿರೀಕ್ಷಿಸಬಹುದು?

ಇನ್ನು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದರೆ ಅದಕ್ಕೆ ಶಿಕ್ಷಕರು ಹೊಣೆಗಾರರೇ? ಇಲ್ಲ, ಇಡೀ ಶಾಲಾ ವ್ಯವಸ್ಥೆ ಅದಕ್ಕೆ ಜವಾಬ್ದಾರಿ. ಈ ವ್ಯವಸ್ಥೆಯಲ್ಲಿ ಶಿಕ್ಷಕರು ಒಂದು ಭಾಗವಷ್ಟೆ. ಶಿಕ್ಷಕರ ಕೆಲಸ ಮಕ್ಕಳಿಗೆ ಪಾಠವನ್ನು ಹೇಳಿಕೊಡುವುದಾಗಿದೆ. ಆದರೆ, ಸರ್ಕಾರಿ ಶಿಕ್ಷಕರು ಬೋಧನೆಗಿಂತಲೂ ಹೆಚ್ಚು ಸಮಯವನ್ನು ಮಕ್ಕಳಿಗೆ ಮಧ್ಯಾಹ್ನದ ಊಟ, ಚಿಕ್ಕಿ, ಹಾಲು, ಮೊಟ್ಟೆ ಕೊಡುವುದರಲ್ಲಿ, ಪ್ರತಿ ಮೊಟ್ಟೆಯ ಲೆಕ್ಕವನ್ನು ಕ್ಷೇತ್ರಶಿಕ್ಷಣಾಧಿಕಾರಿಗೆ ಕೂಡಲೇ ಸಲ್ಲಿಸುವುದರಲ್ಲಿ ಕಳೆಯುತ್ತದೆ.

ಪದವಿ ನಂತರ ಶಿಕ್ಷಕರಾಗಬಯಸುವವರು ಓದುವ ಬಿ.ಇಡಿ. ಕೋರ್ಸ್‌ನಲ್ಲಿ ಮಕ್ಕಳಿಗೆ ಪರಿಣಾಮಕಾರಿಯಾದ ಶಿಕ್ಷಣ ಕೊಡುವುದು ಹೇಗೆ ಎನ್ನುವುದರ ಕುರಿತು ಅಧ್ಯಯನ, ಅಭ್ಯಾಸ, ತರಬೇತಿ ಇರುತ್ತದೆಯೇ ವಿನಾ, ಮೊಟ್ಟೆಯನ್ನು ಎಣಿಸುವುದು ಹೇಗೆ, ಮಾರುಕಟ್ಟೆಯಿಂದ ಅಡುಗೆಗಾಗಿ ತರಕಾರಿ ತರುವುದು ಹೇಗೆ, ಇವೆಲ್ಲದರ ಲೆಕ್ಕವನ್ನು ಇಟ್ಟು ಸರ್ಕಾರಕ್ಕೆ ಕೊಡುವುದು ಹೇಗೆ ಎನ್ನುವುದರ ತರಬೇತಿ ಇರುವುದಿಲ್ಲ.

ಶೈಕ್ಷಣಿಕ ಅರ್ಹತೆ ಆಧಾರದ ಮೇಲೆ ಶಿಕ್ಷಕರನ್ನು ನೇಮಕ ಮಾಡುವಾಗ ಅವರ ನಿರೀಕ್ಷಿತ ಕರ್ತವ್ಯಗಳ ಪಟ್ಟಿಯಲ್ಲಿ ಅಥವಾ ಜಾಬ್ ಚಾರ್ಟಿನಲ್ಲಿ ಈ ಎಲ್ಲಾ ಕೆಲಸಗಳ ಉಲ್ಲೇಖ ಇರುವುದಿಲ್ಲ. ಶಾಲೆಯ ಇತರ ಕೆಲಸಗಳಿಗೆ ಆಡಳಿತ ಸಿಬ್ಬಂದಿ, ಪ್ರಯೋಗಾಲಯ ಮತ್ತು ಗ್ರಂಥಾಲಯಕ್ಕೆ ಸಹಾಯಕ ಸಿಬ್ಬಂದಿ ಇರಬೇಕು. ಹೆಚ್ಚು ಕಡೆ ಈ ಕೆಲಸಗಳನ್ನೂ ಶಿಕ್ಷಕರೇ ಮಾಡಬೇಕು. ಮುಂದೆ, ಶಾಲೆಯಲ್ಲಿ 'ಡಿ' ದರ್ಜೆಯ ನೌಕರರ ಕೊರತೆ ಇದೆ. ಮಕ್ಕಳು ಬರುವ ಮುಂಚೆ ಶಾಲೆಯ ಕಸವನ್ನೂ ಶಿಕ್ಷಕರೇ ಗುಡಿಸಬೇಕು ಎಂದರೆ ಅಚ್ಚರಿಯೇನಲ್ಲ. ಇಷ್ಟು ಮಾತ್ರವಲ್ಲದೆ, ಜನಗಣತಿ, ಜಾತಿ ಜನಗಣತಿ, ಚುನಾವಣೆ ಇತ್ಯಾದಿ ಕೆಲಸಗಳನ್ನೂ ಶಿಕ್ಷಕರೇ ಮಾಡಬೇಕು. ಇದೆಲ್ಲದರ ನಡುವೆ ಸಮಯ, ವ್ಯವಧಾನ ಇದ್ದರೆ ಶಿಕ್ಷಕರು ಪಾಠವನ್ನೂ ಮಾಡಬೇಕು.

ಮಕ್ಕಳ ಶಿಕ್ಷಣದ ಅಭ್ಯುದಯದಲ್ಲಿ ಮೂರನೇ ಮತ್ತು ಅತ್ಯಂತ ನಿರ್ಣಾಯಕ ಭಾಗ ಶಿಕ್ಷಣ ಇಲಾಖೆ. ಶಾಲಾ ಶಿಕ್ಷಣ ಆಯುಕ್ತಾಲಯದ ಹಿಂದಿನ ಕಾರ್ಯದರ್ಶಿ ನಳಿನ್ ಅತುಲ್ ನೇತೃತ್ವದಲ್ಲಿ ಸರ್ಕಾರಿ ಶಾಲೆಗಳ ಸುಧಾರಣೆ ಬಗೆಗಿನ ವರದಿ ಕೊಟ್ಟು ನಾಲ್ಕು ವರ್ಷ ಆಗಿದೆ. ಸರ್ಕಾರ ಈ ಕುರಿತು ಯಾವುದೇ ಕ್ರಮ ವಹಿಸಿಲ್ಲ. ಸರ್ಕಾರ ತನಗೆ ಬಂದಿರುವ ಜ್ವರಕ್ಕೆ ಶಿಕ್ಷಕರಿಗೆ ಬರೆ ಕೊಡುವ ಬದಲಿಗೆ ಶೇ 60ಕ್ಕೂ ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳನ್ನು ಗುರುತಿಸಿ, ಆ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪೋಷಕರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಿನ್ನೆಲೆ, ಶಿಕ್ಷಕರ ಕೊರತೆ, ಅನ್ಯಕಾರ್ಯಗಳಿಗಾಗಿ ಅವರ ಬಳಕೆ, ಅದರಿಂದ ಕಲಿಕೆ, ಫಲಿತಾಂಶದ ಮೇಲೆ ಆಗುವ ನಕಾರಾತ್ಮಕ ಪರಿಣಾಮ ಇತ್ಯಾದಿಗಳ ಕುರಿತು ಪ್ರಾಮಾಣಿಕ ಸಮೀಕ್ಷೆ ಮಾಡಲಿ, ಅದರಲ್ಲಿ ಹೊಮ್ಮುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಪ್ರಶಸ್ತಿ ಪುರಸ್ಕೃತರು

ಅತ್ಯುತ್ತಮ ಚಿತ್ರ

ಕೃಷ್ಣಂ ಪ್ರಣಯ ಸಖಿ

ಅತ್ಯುತ್ತಮ ನಟ

ದುನಿಯಾ ವಿಜಯ್
ಚಿತ್ರ: ಭೀಮ

ಅತ್ಯುತ್ತಮ ನಟಿ

ಅಂಕಿತಾ ಅಮರ್
ಚಿತ್ರ: ಇಬ್ಬನಿ ತಬ್ಬಿದ ಇಳೆಯಲಿ

ಅತ್ಯುತ್ತಮ ಪೋಷಕ ನಟ

ಗೋಪಾಲಕೃಷ್ಣ ದೇಶಪಾಂಡೆ
ಚಿತ್ರ: ಶಾಖಾಹಾರಿ

ಅತ್ಯುತ್ತಮ ಪೋಷಕ ನಟಿ

ಪ್ರಿಯಾ ಶಠಮರ್ಷಣ
ಚಿತ್ರ: ಭೀಮ

ಅತ್ಯುತ್ತಮ ನಿರ್ದೇಶನ

ನರ್ತನ್
ಚಿತ್ರ: ಭೈರತಿ ರಣಗಲ್

ಅತ್ಯುತ್ತಮ ಚೊಚ್ಚಲ ನಿರ್ದೇಶನ

ಶ್ರೀನಿಧಿ ಬೆಂಗಳೂರು
ಚಿತ್ರ: ಬ್ಲಿಂಕ್

ಅತ್ಯುತ್ತಮ ಸಂಗೀತ ನಿರ್ದೇಶನ


ಅರ್ಜುನ್ ಜನ್ಯ
ಚಿತ್ರ: ಕೃಷ್ಣಂ ಪ್ರಣಯ ಸಖಿ

ಅತ್ಯುತ್ತಮ ಛಾಯಾಚಿತ್ರಗ್ರಹಣ

ಶೇಖರ್ ಚಂದ್ರ
ಚಿತ್ರ: ಮ್ಯಾಕ್ಸ್

ಅತ್ಯುತ್ತಮ ಸಂಕಲನ

ಜ್ಞಾನೇಶ್ ಬಿ.ಮಠದ್
ಚಿತ್ರ: ಕೆರೆಬೇಟೆ

ಅತ್ಯುತ್ತಮ ಚಿತ್ರಕಥೆ

ದುನಿಯಾ ವಿಜಯ್
ಚಿತ್ರ: ಭೀಮ

ಅತ್ಯುತ್ತಮ ಹಿನ್ನೆಲೆ ಗಾಯಕ

ಜಸ್ಕರಣ್ ಸಿಂಗ್
ಹಾಡು: ದ್ವಾಪರ
ಚಿತ್ರ: ಕೃಷ್ಣಂ ಪ್ರಣಯ ಸಖಿ

ಅತ್ಯುತ್ತಮ ಹಿನ್ನೆಲೆ ಗಾಯಕಿ


ಶೃತಿ ಪ್ರಹ್ಲಾದ
ಹಾಡು: ಹಿತ್ತಲಕ ಕರಿಬ್ಯಾಡ ಮಾವ
ಚಿತ್ರ: ಕರಟಕ ದಮನಕ

ಅತ್ಯುತ್ತಮ ಗೀತ ಸಾಹಿತ್ಯ

ವಿ.ನಾಗೇಂದ್ರ ಪ್ರಸಾದ್
ಹಾಡು: ದ್ವಾಪರ
ಚಿತ್ರ: ಕೃಷ್ಣಂ ಪ್ರಣಯ ಸಖಿ

ಅತ್ಯುತ್ತಮ ನೃತ್ಯ ನಿರ್ದೇಶನ

ಶೇಖರ್ ಮಾಸ್ಟರ್
ಹಾಡು: ದ್ವಾಪರ
ಚಿತ್ರ: ಕೃಷ್ಣಂ ಪ್ರಣಯ ಸಖಿ

ಜನಮೆಚ್ಚಿದ ಚಿತ್ರ

ಶಾಖಾಹಾರಿ

ಜನಮೆಚ್ಚಿದ ನಟ

ರಂಗಾಯಣ ರಘು
ಚಿತ್ರ: ಶಾಖಾಹಾರಿ


ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು

ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ

ಹದಿನೇಳೆಂಟು


ಅತ್ಯುತ್ತಮ ನಿರ್ಮಾಣ ವಿನ್ಯಾಸ

ಮ್ಯಾಕ್ಸ್

ಅತ್ಯುತ್ತಮ ವಿಎಫ್ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್

ಯುಐ

ಅತ್ಯುತ್ತಮ ಧ್ವನಿಗ್ರಹಣ ಹಾಗೂ ಶಬ್ದವಿನ್ಯಾಸ

ಕೆರೆಬೇಟೆ

ಜನಮೆಚ್ಚಿದ ನಟಿ

ಅಂಕಿತಾ ಅಮರ್
ಚಿತ್ರ: ಇಬ್ಬನಿ ತಬ್ಬಿದ ಇಳೆಯಲಿ

ಜನಮೆಚ್ಚಿದ ಚಿತ್ರಗೀತೆ

ದ್ವಾಪರ
ಚಿತ್ರ: ಕೃಷ್ಣಂ ಪ್ರಣಯ ಸಖಿ

ಜೀವಮಾನದ ಸಾಧನೆ, ಕನ್ನಡದ ಧ್ರುವತಾರೆ ಪ್ರಶಸ್ತಿ ಪ್ರದಾನ, 25 ವಿಭಾಗಗಳಲ್ಲಿ ಸಿನಿ ಸಾಧಕರಿಗೆ ಗೌರವ

ಸಾಧಕರ ಮಂದಹಾಸ, ನೃತ್ಯದ ಸಂಭ್ರಮೋಲ್ಲಾಸ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇದಿಕೆಯ ಮೇಲೆ ಚಂದನವನದ ತಾರೆಯರು ಸಿನಿ ಸಾಧನೆಯ ಪ್ರಶಸ್ತಿಯ ಗರಿಯನ್ನು ಮುಡಿಗೇರಿಸಿಕೊಳ್ಳುತ್ತಿದ್ದರೆ, ವೇದಿಕೆಯ ಕೆಳಗೆ ಕರತಾಡನದ ಸಂಭ್ರಮ, ಅಭಿಮಾನಿಗಳ ಮುಖದಲ್ಲಿ ನಗುವಿನ ಸಿಂಚನ. ಮಧ್ಯೆ ಮಧ್ಯೆ ನಟಿಯರ ಕಣ್ಮನ ಸೆಳೆಯುವ ನೃತ್ಯ ಪ್ರದರ್ಶನ.

ನಗರದ ಅರಮನೆ ಮೈದಾನದಲ್ಲಿ ವರ್ಣರಂಜಿತ ಅದ್ದೂರಿ ವೇದಿಕೆಯಲ್ಲಿ ಶುಕ್ರವಾರ ನಡೆದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಮೂರನೇ ಆವೃತ್ತಿಯ ಪ್ರಶಸ್ತಿ ಪ್ರದಾನ ಸಮಾರಂಭದ ಸೊಬಗು ಇದು.

ಕನ್ನಡ ಚಿತ್ರರಂಗದಲ್ಲಿ ಉನ್ನತ ಸಾಧನೆ ಮಾಡಿದ ಕಲಾವಿದನಿಗೆ ಜೀವಮಾನದ ಪ್ರಶಸ್ತಿ ಮತ್ತು ಸಿನಿಮಾದ ವಿವಿಧ 25 ವಿಭಾಗಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದವರಿಗೆ ಸಾಹಿತ್ಯ, ಸಂಗೀತ, ರಾಜಕೀಯ, ಸಿನಿಮಾ ಸಹಿತ ವಿವಿಧ ರಂಗಗಳ ಪ್ರಮುಖರು, ನೇತಾರರು ಪ್ರಶಸ್ತಿ ಪ್ರದಾನ ಮಾಡಿ ಎಲ್ಲರಿಗೂ ಹುರುಪು ತುಂಬಿದರು.

ಸಂಜೆ ಕೆಂಪು ಹಾಸಿನ ಮೇಲೆ ಮಂದಹಾಸದೊಂದಿಗೆ ಕೈಬಿಸುತ್ತ ಹೆಜ್ಜೆ ಹಾಕಿದ ತಾರೆಯರು, ವೇದಿಕೆಗೇರಿ ಪ್ರಶಸ್ತಿ ತಮ್ಮದಾಗಿಸಿಕೊಳ್ಳಲು ಕಾತರರಾಗಿದ್ದರು. ಅಕುಲ್ ಹಾಗೂ ಅನುಶ್ರೀ ಅವರ ಚಂದದ ನಿರೂಪಣೆ ಸಮಾರಂಭದ ಮೆರಗು ಹೆಚ್ಚಿಸಿತು.

'ಜೀವಮಾನ ಸಾಧನೆ ಪ್ರಶಸ್ತಿ'ಗೆ ಭಾಜನರಾದ 'ಪ್ರಣಯರಾಜ' ಶ್ರೀನಾಥ್ ಅವರು ವೇದಿಕೆಗೆ ಏರುತ್ತಿದ್ದಂತೆ ಎಲ್ಲರೂ ಎದ್ದು ನಿಂತು ಗೌರವ ಸಲ್ಲಿಸಿದರು. ಪ್ರಶಸ್ತಿ ಪ್ರದಾನ ಆಗುತ್ತಿದ್ದಂತೆ ನೆರೆದಿದ್ದವರು ಚಪ್ಪಾಳೆ ತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು. 'ಕ್ರೇಜಿಸ್ಟಾರ್' ರವಿಚಂದ್ರನ್ ಅವರು ಕನ್ನಡ ಸಿನಿ ದ್ರುವತಾರೆ ಪ್ರಶಸ್ತಿ ಸ್ವೀಕರಿಸಿದಾಗ ಸಭೆಯೇ ಅಭಿನಂದನೆ ಸಲ್ಲಿಸಿತು.

ಸಂಗೀತ, ನೃತ್ಯ ನಿರ್ದೇಶನ ಸೇರಿ ವಿವಿಧ ವಿಭಾಗಗಳಲ್ಲಿ ಡಿಜಿಟಲ್ ಪರದೆಯಲ್ಲಿ ಪ್ರಶಸ್ತಿ ನಾಮನಿರ್ದೇಶಿತರ ಹೆಸರು ಬರುವಾಗ ಹಲವರಿಗೆ ಕುತೂಹಲ ಮತ್ತು ದುಗುಡ ಒಟ್ಟೊಟ್ಟಿಗೆ ಉಂಟಾಯಿತು. ವಿಜೇತರ ಹೆಸರು ಘೋಷಣೆ ಆಗುತ್ತಿದ್ದಂತೆ ವಿಜೇತರು ಸಂಭ್ರಮಿಸಿದರೆ, ಉಳಿದವರು ಕೈಕುಲುಕಿ ಅಭಿನಂದನೆ ಸಲ್ಲಿಸಿದರು.

ಪ್ರಶಸ್ತಿ ಸ್ವೀಕರಿಸಿ ಕೆಲವರು ಭಾವುಕರಾದರು. ಹಲವರಲ್ಲಿ ಸಾರ್ಥಕದ ಭಾವ ಮೂಡಿತು. ತಮಗೆ ಅವಕಾಶ ನೀಡಿದ ನಿರ್ದೇಶಕ, ನಿರ್ಮಾಪಕರು ಸೇರಿ ಚಿತ್ರ ತಂಡದ ಸದಸ್ಯರನ್ನು, ಚಿತ್ರೀಕರಣದ ವೇಳೆ ನಡೆದ ಘಟನೆಗಳನ್ನು ಸ್ಮರಿಸಿಕೊಂಡರು. ಹೆತ್ತವರ, ಗೆಳೆಯರ ಪ್ರೋತ್ಸಾಹಗಳನ್ನು ನೆನಪು ಮಾಡಿಕೊಂಡರು.

ಚಿತ್ರರಂಗದ ಪ್ರಮುಖರಾದ 'ಮುಖ್ಯಮಂತ್ರಿ' ಚಂದ್ರು, ಹಂಸಲೇಖ, ಶಿವರಾಜಕುಮಾರ್, ಗೀತಾ ಶಿವರಾಜಕುಮಾರ್, ಗಿರಿಜಾ ಲೋಕೇಶ್, ಪಿ. ಶೇಷಾದ್ರಿ, ತಾರಾ ಅನುರಾಧ, ದ್ರುವ ಸರ್ಜಾ, ಲತಾ ಹಂಸಲೇಖ, ಟಿ.ಎಸ್. ನಾಗಾಭರಣ, ಪೂಜಾ ಗಾಂಧಿ, ಸುಮನ್ ನಗರ್‌ಕರ್, ಶೇಖರ್, ಶ್ರುತಿ, ಉಮೇಶ್ ಬಣಕಾರ್, ಲಹರಿ ವೇಲು, ಅರ್ಜುನ್ ಜನ್ಯ, ವಿ. ಮನೋಹರ್, ದುನಿಯಾ ವಿಜಯ್, ದತ್ತಣ್ಣ, ಮಾಲಶ್ರೀ, ಪ್ರಿಯಾಂಕ ಉಪೇಂದ್ರ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.


ಬೆಂಗಳೂರಿನಲ್ಲಿ ಶುಕ್ರವಾರ ನಡೆದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಮೂರನೇ ಆವೃತ್ತಿ ಕಾರ್ಯಕ್ರಮದಲ್ಲಿ ನಟಿಯರಾದ ಚಂದನ ಅನಂತಕೃಷ್ಣ ಮತ್ತು ಖುಷಿ ರವಿ ತಂಡದ ನೃತ್ಯ ಪ್ರದರ್ಶನ ಮನಸೂರೆಗೊಂಡಿತು —ಪ್ರಜಾವಾಣಿ ಚಿತ್ರ

ನಟ ಶ್ರೀನಾಥ್‌ಗೆ 'ಪ್ರಜಾವಾಣಿ' ಪ್ರಶಸ್ತಿ

ಒಂದನೇ ಪುಟದಿಂದ...
ನಿರೂಪಕಿ ಅನುಶ್ರೀ ಅವರು 'ಆಶಾ' ಭಂಗದ ಪ್ರಸಂಗದ ಬಗ್ಗೆ ಕೇಳಿದಾಗ ಶ್ರೀನಾಥ್ ಅವರು ಹರೆಯದ ಪ್ರೇಮಘಟನೆಯನ್ನು ಬಿಚ್ಚಿಟ್ಟರು. 'ನನಗೆ 16ನೇ ವಯಸ್ಸಿನಲ್ಲಿ ಆಶಾ ಪರೇಖ್ ಮೇಲೆ ಪ್ರೀತಿ ಹುಟ್ಟಿತು. ಅವಳನ್ನು ಕಾಣಬೇಕು. ಅವಳ ಜೊತೆಗೆ ನಟಿಸಬೇಕು ಎಂದು ಬಾಂಬೆಗೆ ಓಡಿದೆ. ಆದರೆ ಭೇಟಿಯಾಗಲು ಸಾಧ್ಯವಾಗಲಿಲ್ಲ. ಕೊನೆಗೆ ಹೇಗೋ ವಾಪಸ್ಸಾದೆ' ಎಂದರು.

'ಇದಾಗಿ 30 ವರ್ಷಗಳ ಬಳಿಕ ಎಸ್. ಬಂಗಾರಪ್ಪ ಕುಟುಂಬ 'ಶರವೇಗದ ಸರದಾರ' ಚಿತ್ರ ಮಾಡಲು ಮುಂದಾಗಿತ್ತು. ನನ್ನನ್ನು ತಂದೆ ಪಾತ್ರ ಮಾಡಲು ಅವರು ಕೇಳಿಕೊಂಡರು. ಆಗ ನಾಯಕ ನಟನಾಗಿ ಪ್ರಚಲಿತದಲ್ಲಿದ್ದ ನಾನು ತಂದೆಯ ಪಾತ್ರವೇ ಎಂದು ಕೇಳಿದ್ದೆ. ತಾಯಿ ಪಾತ್ರ ಯಾರು ಎಂದಾಗ ಆಶಾ ಪರೇಖ್ ಎಂದುತ್ತರಿಸಿದ್ದರು. ಕೂಡಲೇ ತಂದೆ ಪಾತ್ರ ಮಾಡಲು ಒಪ್ಪಿದೆ.' ಎಂದರು.

ಗಣ್ಯರ ದಂಡು

ರಾಜಕೀಯ ಹಾಗೂ ಸಾಹಿತ್ಯ ಕ್ಷೇತ್ರದವರೂ ಸಮಾರಂಭಕ್ಕೆ ಸಾಕ್ಷಿಯಾದರು. ಸಿ.ಎಂ ಸಿದ್ದರಾಮಯ್ಯ ಅವರಲ್ಲದೆ ಡಿಸಿಎಂ ಡಿ.ಕೆ. ಶಿವಕುಮಾರ್, ವಿಪಕ್ಷ ನಾಯಕ ಆರ್. ಅಶೋಕ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ವಿಧಾನ ಪರಿಷತ್ ಸದಸ್ಯ ಟಿ. ಶರವಣ ಮೊದಲಾದವರು ಇದ್ದರು.

'ಇನ್ನೂ 20 ವರ್ಷ ನಟನೆ ಮಾಡುತ್ತೇನೆ. 100ನೇ ವರ್ಷಕ್ಕೆ ಪ್ರಜಾವಾಣಿ ಮತ್ತೆ ನಡೆಸುವ ಕಾರ್ಯಕ್ರಮದಲ್ಲಿ ನೀವೇ ಬಂದು ಸನ್ಮಾನಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶ್ರೀನಾಥ್ ಮನವಿ ಮಾಡಿದರು.


ನಟ ಪೃಥ್ವಿ ಅಂಬರ್ ಮತ್ತು ತಂಡದ ನೃತ್ಯದ ಝಲಕ್ —ಪ್ರಜಾವಾಣಿ ಚಿತ್ರ

ಹಾಡಿಗೆ ಹೆಜ್ಜೆ ಹಾಕಿದರು...

'ಜೇನ ದನಿಯೋಳೆ... ಮೀನ ಕಣ್ಣೋಳೆ... ಸೊಬಗೆ ಮೈತುಂಬಿದೆ...' ಹಾಡಿಗೆ ತೆಲುಗು ನಟ ಶೇಖರ್ ಮಾಸ್ಟರ್, ನಟಿಯರಾದ ಪೂಜಾ ಗಾಂಧಿ, ಸುಮನ್ ನಗರ್‌ಕರ್, ನಿರೂಪಕಿ ಅನುಶ್ರೀ ಹೆಜ್ಜೆ ಹಾಕಿ ರಂಜಿಸಿದರು. ಪ್ರೇಕ್ಷಕರು ಶಿಳ್ಳೆ ಹೊಡೆದು, ಕೇಕೆ ಹಾಕಿ ಸಂಭ್ರಮಿಸಿದರು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

28 ಜೂನ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ತೃತೀಯ ಗಂ. 9-55 ನಕ್ಷತ್ರ: ಪುಷ್ಯ ಗಂ. 6-36 ಯೋಗ: ಹರ್ಷಣ ಗಂ. 19-15 ಕರಣ: ಗರಜೆ ಗಂ. 09-55, ಮಿಥುನ ಮಾಸದ 14 ನೇ ದಿನ. ಮಳೆ ನಕ್ಷತ್ರ: ಆರ್ದ್ರಾ 2 ನೇ ಪಾದ. **ರಾಹುಕಾಲ:** ಬೆಳಿಗ್ಗೆ 09-00 – 10-30, **ಸೂರ್ಯೋದಯ:** 06-10 **ಸೂರ್ಯಾಸ್ತ:** 06-57, **ಮುಸ್ಲಿಂ ದಿನಾಂಕ:** 02 ಮೊಹರಮ್, ಅದೃಷ್ಟ ಸಂಖ್ಯೆ: 6, 12

ಮೇಷ: ರೈತಾಪಿ ವರ್ಗದವರಿಗೆ ನಿರಂತರ ಕೆಲಸ ಕಾರ್ಯಗಳಿಂದಾಗಿ ದಣಿದ ನಿಮಗೆ ಸ್ವಲ್ಪಮಟ್ಟಿನ ಬಿಡುವು ಆರಾಮವೆನಿಸುವುದು. ಜಗದ್ಗುರುವಿನ ದರ್ಶನದಿಂದ ಮನಸ್ಸಿನಲ್ಲಿರುವ ಪ್ರಶ್ನೆಗೆ ಸರಿಯಾದ ಉತ್ತರ ದೊರೆಯುತ್ತದೆ.

ವೃಷಭ: ತಾಯಿಗೆ ನುರಿತ ವೈದ್ಯರಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಲು ವಿಶ್ವಾಸಿಗಳಿಂದ ವೈದ್ಯರ ಸಂಪರ್ಕ ಸಹಾಯ ಹಸ್ತ ಸಿಗುವುದು. ಉನ್ನತ ಶಿಕ್ಷಣವನ್ನು ಪಡೆದವರು ಓದಿಗೆ ತಕ್ಕ ಕೆಲಸವನ್ನು ನಿರೀಕ್ಷಿಸುತ್ತಿದ್ದರೆ ಸದ್ಯದಲ್ಲಿ ಸಿಗುವುದು ಕಷ್ಟಕರ.

ಮಿಥುನ: ಈಗ ನಿರ್ಮಾಣವಾಗಿರುವ ಸಂಚಾರ ಪ್ರವೃತ್ತಿಯನ್ನು ನಿಗದಿತ ವೇಳಾಪಟ್ಟಿಯನ್ನು ಮಾಡಿಕೊಳ್ಳುವುದರ ಮೂಲಕ ಸರಿಪಡಿಸಿಕೊಳ್ಳಬಹುದು. ನಿರ್ಜಲೀಕರಣದಂಥ ಸಮಸ್ಯೆಗಳು ಕಾಡಬಹುದು.

ಕರ್ಕಾಟಕ: ದುರ್ಜನರ ಮೂಲಕ ಉಂಟಾಗಬಹುದಾದ ಅಪಾಯದ ಸೂಚನೆ ಇದ್ದರೆ ಈ ತಕ್ಷಣವೇ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಿ. ಸಂಘ ಸಂಸ್ಥೆಯ ಜವಾಬ್ದಾರಿಯಿಂದ ಸದ್ಯಕ್ಕೆ ವಿಮುಖರಾಗಬೇಡಿ.

ಸಿಂಹ: ಉದ್ಯೋಗ ಅಥವಾ ಉದ್ಯಮ ಕ್ಷೇತ್ರದಲ್ಲಿ ಬದಲಾವಣೆ ಬಯಸಿದ ರೀತಿಯಲ್ಲಿ ನಿಸ್ಸಂಶಯವಾಗಿ ಸಿಗಲಿದೆ. ಕಷ್ಟದಲ್ಲಿರುವ ವ್ಯಕ್ತಿಗಳಿಗೆ ಹಣ ಸಹಾಯ ಮಾಡುವ ಮುನ್ನ ಯೋಚಿಸಿ.

ಕನ್ಯಾ: ಸಾಮಾಜಿಕ ಕಾರ್ಯಗಳಿಗೆ ಸಾರ್ವಜನಿಕ ವಲಯದಿಂದ ಮನ್ನಣೆ ಸಿಗುವುದು. ಹಿರಿಯ ಅಧಿಕಾರಿಗಳ ನಿಯಮಕ್ಕೆ ಸರಿಯಾಗಿ ನಡೆದುಕೊಂಡರೆ ಬುದ್ಧಿವಂತರಾಗುತ್ತೀರಿ. ಆರ್ಥಿಕ ವಿಚಾರದಲ್ಲಿ ಸಮತೋಲನ ಅಗತ್ಯವಿದೆ.

ತುಲಾ: ಹೆಚ್ಚಿನ ನಿಗಾವಹಿಸಿ ಮಾಡಿದ ಕೆಲಸ ಕಾರ್ಯಗಳ ಬಗ್ಗೆ ಅಧಿಕಾರಿಗಳಿಂದ ಪ್ರಶಂಸೆಯ ಬದಲಾಗಿ ಅವಹೇಳನೆ ಮಾತುಗಳನ್ನು ಕೇಳಬೇಕಾಗಬಹುದು. ದೇಹಾಲಸ್ಯ ತೋರಿ ವಿಶ್ರಾಂತಿ ಬಯಸುವಿರಿ.

ವೃಶ್ಚಿಕ: ಅಧಿಕಾರಿಗಳು, ಆಡಳಿತ ಮಂಡಳಿಯವರು ಮೇಲಿಟ್ಟಿದ್ದ ಭರವಸೆ ಹುಸಿಯಾಗದಂತೆ ನೋಡಿಕೊಳ್ಳುವುದು ನಿಮ್ಮ ಕೈಯಲ್ಲಿದೆ. ವಿದ್ಯಾರ್ಥಿಗಳಿಗೆ ಯಾವುದೇ ತರಹದ ಅಳುಕುವ ಪ್ರಮೇಯವಿರುವುದಿಲ್ಲ.

ಧನು: ಮನಸ್ಸಿನ ಭಾವನೆಗಳಿಗೆ ಸ್ಪಂದಿಸುವ ಗೆಳೆಯರ ಪರಿಚಯ, ಸ್ನೇಹಿತರೊಂದಿಗಿನ ಮಾತುಕತೆ ಉಪಯುಕ್ತವೆನಿಸಲಿದೆ. ಆಯ್ಕೆ ಸರಿಯಾಗಿದೆ. ಸ್ವಂತ ಉದ್ಯೋಗದಲ್ಲಿ ಪ್ರಗತಿ ಕಾಣಲಿದ್ದೀರಿ.

ಮಕರ: ನಿಮ್ಮ ವಿರುದ್ಧವಾಗಿ ನಡೆಯುವವರಿಗೆ, ಮಾತನಾಡುವವರಿಗೆ ಯಾವುದೇ ಪ್ರತಿಕ್ರಿಯೆ ನೀಡಬೇಡಿ. ಕಾಲವೇ ಉತ್ತರ ಕೊಡುತ್ತದೆ. ಮಾತುಗಳು ಕೆಲವರಿಗೆ ಪ್ರೇರಣೆಯಾಗುವುದರಿಂದ ಮಾತಿನ ಮೇಲೆ ನಿಗಾವಿರಲಿ.

ಕುಂಭ: ಆರೋಗ್ಯದಲ್ಲಿ ರಕ್ತದೊತ್ತಡಕ್ಕೆ ಸಂಬಂಧಿಸಿದಂತೆ ಏರುಪೇರಾಗುವ ಲಕ್ಷಣ ಇರಲಿದೆ. ಯಾವುದೇ ರೀತಿಯ ಆತಂಕಕ್ಕೆ ಒಳಗಾಗಬೇಡಿ. ಅಸಹಾಯಕರಿಗೆ ಸಹಾಯ ಮಾಡುವುದರಿಂದ ಪುಣ್ಯ ಸಂಪಾದಿಸಬಹುದು.


ಮೀನ: ಅಂತರರಾಜ್ಯದ ಅತಿ ಮುಖ್ಯ ವ್ಯಕ್ತಿಯೊಬ್ಬರ ಪರಿಚಯ ವ್ಯಾಪಾರ ಅಭಿವೃದ್ಧಿಯ ದಾರಿ ಹಿಡಿಯಲು ಕಾರಣವಾಗುವುದು. ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವಂಥವರ ಸಮಸ್ಯೆಗಳಿಗೆ ಸಮಾಧಾನ ದೊರೆಯಲಿದೆ.

ಪದಬಂಧ 6087

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇಶೀ ಗಿಡಮೂಲಿಕೆಗಳಿಂದಾದ ಔಷಧ (4)
3.ಶಿರ ಮೇಲೆತ್ತಿಕೊಂಡು ಬರುತ್ತಿರುವ ಧೂರ್ತ (4)
5.ಕೈಯಲ್ಲಿರುವ ಚಿಪ್ಪು (3)
7.ಈತ ಕೆಲಸಕ್ಕೆ ಬಾರದವನು (4)
9.ಮಾತು ಬಾರದವನು (2)
10.ನ್ಯಾಯಾಲಯದ ತೀರ್ಪು (2)
11.ತೆಳ್ಳನೆಯ ಉದರವುಳ್ಳವಳು (4)
13.ಪದ್ಧತಿ ಈ ರೀತಿ ಬಂದಿದೆ (3)
16.ಕನ್ನಡಿಗನು ತೋರಿದ ಅರ್ಜೆಂಟ್! (4)
17.ನವಜೀವನವಿದು (4)

ಮೇಲಿಂದ ಕೆಳಕ್ಕೆ
1.ನಾಸ್ತಿಕನ ಮೂಗು (3)
2.ಮನಸ್ಸು ಹೀಗೆ ಮಂಗನ ರೀತಿಯಂತೆ (3)
3.ನಿಧಾನದಿಂದಾದ ತಬ್ಬಿಬ್ಬು! (4)
4.ಉತ್ತರದವರ ಚಿಕ್ಕಮ್ಮ (2)
6.ನೆತ್ತರಲ್ಲೇ ಕೂಡಿದುದು (4)
7.ಈ ಪರಿಯಲ್ಲಿ ತಪ್ಪಿಸಿಕೊಳ್ಳುವಿಕೆ (3)
8.ಮಿಡಿ ಹಿಡಿದುಕೊಂಡರೆ ಈ ಸಿಟ್ಟು! (4)
12.ಗಿರಿಯ ಹತ್ತಿರ ಸಿಕ್ಕಿರುವ ಸೆರೆ (4)
13.ಪಾಯಸ ನೆಕ್ಕುತ್ತಿರುವ ಕಾಗೆ (3)
14.ಮೆಟ್ಟು ನೋಡುತ್ತಲೇ ಈ ರೀತಿ ರೇಗು! (3)
15.ಹಂತಕನೇರಿದ ಮೆಟ್ಟಿಲು (2)



6086ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಸರತ್ತು 3.ಅರಮನೆ
5.ವದನ 7.ದಾರಿ
8. ನಮನ 9.ಯವನ
10.ಚಪಲ 11.ಚಮಚ
13.ಮಾತು 14.ಕನಕ
15.ಬಂದಿಖಾನೆ 16.ತಾರಾಗಣ

ಮೇಲಿಂದ ಕೆಳಕ್ಕೆ:
2.ಸಮಾಧಾನ 4.ಮತದಾನ
5.ವನಪಾಲಕ 6.ನಯವಂಚಕ
10.ಚತುಷ್ಪಾದಿ 12.ಚದುರಂಗ

ಸುಡೊಕು 6471

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		6					5	
	4	7	5		6	3		2
3	8			2			6	
	2							4
			2	4	7			6
	7					5		
7		9			8		4	
4				3			8	1
	6		4		2	7		3

6470 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ವಿನಿಮಯ ದರ: ಡಾಲರ್ 85.50 | ಪೌಂಡ್ 117.44 | ಯುರೊ 100.09 | ಯೆನ್ (100ಕ್ಕೆ) 59

ಷೇರುಪೇಟೆ ವಹಿವಾಟು: ಹಿಂದಿನ ಅಂತ್ಯ 83,755 | 303 | ಇಂದಿನ ಅಂತ್ಯ 84,058

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,549
ಇಂದಿನ ಅಂತ್ಯ:	25,637
ದಿನದ ಗರಿಷ್ಠ:	25,654
	88

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹615
	12 ಕ್ಕೆ	₹80
ಮೈಸೂರು:	100 ಕ್ಕೆ	₹620

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹333-522
ದ್ವಿತಳಿ (ಬಿ.ವಿ)	₹369-682

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹196.50
ಆರ್‌ಎಸ್‌ಎಸ್-5	₹190.50
ಗುಡ್ ಲಾಟ್	₹179.50

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು	
ದೊಡ್ಡ	₹1,400-1,800
ಮಧ್ಯಮ	₹800-1,400
ಸಣ್ಣ	₹400-800

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1190 (1190)
ಸೂರ್ಯಕಾಂತಿ (ರಿಫೈನ್ಡ್)	₹1335 (1350)
ಪಾಮೋಲಿನ್	₹1185 (1185)

‘ಪಿಡಿಪಿಎಸ್’ ಸಿಕ್ಕರೂ ಫಲವಿಲ್ಲ

ಒಣಮೆಣಸಿನಕಾಯಿ : ₹50 ಸಾವಿರದಿಂದ ₹6 ಸಾವಿರಕ್ಕೆ ಕುಸಿದ ಧಾರಣೆ

● ಹರಿಶಂಕರ ಆರ್.

ಬಳ್ಳಾರಿ: ಕೇಂದ್ರ ಸರ್ಕಾರದಿಂದ ‘ಮಾರುಕಟ್ಟೆ ಬೆಲೆ ವ್ಯತ್ಯಾಸ ಪಾವತಿ’ (ಪಿಡಿಪಿಎಸ್) ಯೋಜನೆಯಡಿ ಒಣ ಮೆಣಸಿನಕಾಯಿ ಖರೀದಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಏಕೀಕೃತ ಮಾರುಕಟ್ಟೆ ವೇದಿಕೆ (ಯುಎಂಪಿ) ಇ–ಟೆಂಡರ್ ಮೂಲಕವೇ ವಹಿವಾಟು ನಡೆಸಬೇಕೆಂಬ ಷರತ್ತು ವಿಧಿಸಿರುವುದರಿಂದ ಬಳ್ಳಾರಿಯ ಜಿಲ್ಲೆಯ ಬೆಳೆಗಾರರು ಯೋಜನೆಯ ಅನುಕೂಲದಿಂದ ವಂಚಿತರಾಗುವಂತಾಗಿದೆ.

ಕೇಂದ್ರ ಸರ್ಕಾರದ ಆದೇಶದಂತೆ ರಾಜ್ಯದಲ್ಲಿ ಖರೀದಿಸಲಾಗುವ ಒಣಮೆಣಸಿನಕಾಯಿ 73,732 ಟನ್ ಮಾತ್ರ. ಆದರೆ, ಬಳ್ಳಾರಿ ಜಿಲ್ಲೆಯೊಂದರಲ್ಲೇ 61,400 ಹೆಕ್ಟೇರ್ ಪ್ರದೇಶದಲ್ಲಿ ಒಣಮೆಣಸಿನಕಾಯಿ ಬೆಳೆಯಲಾಗುತ್ತಿದ್ದು 2.50 ಲಕ್ಷ ಟನ್ ಇದೊಂದೇ ಜಿಲ್ಲೆಯಲ್ಲಿ ಉತ್ಪಾದನೆ ಆಗುತ್ತದೆ. ಆದರೂ ಬಳ್ಳಾರಿ ಜಿಲ್ಲೆಯ ಎಪಿಎಂಸಿಗಳಲ್ಲಿ ಉತ್ಪನ್ನ ಮಾರಾಟ ಮಾಡಲಾಗದೆ ರೈತರು ಆತಂಕಕ್ಕೆ ಸಿಲುಕಿದ್ದಾರೆ.

ಕಳೆದ ವರ್ಷ ಬ್ಯಾಡಗಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹40 ಸಾವಿರದಿಂದ ₹50 ಸಾವಿರದವರೆಗೆ ಮಾರಾಟವಾಗಿತ್ತು. ಈ ವರ್ಷ ದರ ಕನಿಷ್ಠ ₹6 ಸಾವಿರಕ್ಕೆ ಕುಸಿದಿದೆ. ಇದೇ ಪರಿಸ್ಥಿತಿ ಆಂಧ್ರ ಪ್ರದೇಶದಲ್ಲೂ ಇತ್ತು. ಕೇಂದ್ರದ ಮೇಲೆ ಒತ್ತಡ ತಂದ ಆಂಧ್ರ ಪ್ರದೇಶ ಸರ್ಕಾರ, ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ (ಎಂಐಎಸ್) ಯಶಸ್ವಿಯಾಗಿತ್ತು. ಕರ್ನಾಟಕಕ್ಕೂ ಯೋಜನೆ ವಿಸ್ತರಿಸಬೇಕು ಎಂದು ರೈತರು ಬಳ್ಳಾರಿ ಸೇರಿದಂತೆ ರಾಜ್ಯದ ವಿವಿಧ ಕಡೆಗಳಲ್ಲಿ ಪ್ರತಿಭಟನೆ ಮಾಡಿದ್ದರು.

ರೈತರ ಹೋರಾಟಕ್ಕೆ ಮಣಿದಿದ್ದ ರಾಜ್ಯ ಸರ್ಕಾರ ಈ ಬಗ್ಗೆ ಕೇಂದ್ರಕ್ಕೆ ಪತ್ರ ಬರೆದಿತ್ತು. ಈ ಹಿನ್ನೆಲೆಯಲ್ಲಿ ಕ್ವಿಂಟಲ್‌ಗೆ ₹10,589.20 ಪಿಡಿಪಿಎಸ್ ಅಡಿಯಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶ ದರ ನಿಗದಿ ಮಾಡಿರುವ ಕೇಂದ್ರ ಸರ್ಕಾರ ಕರ್ನಾಟಕದಲ್ಲಿ ಒಟ್ಟಾರೆ 73,732 ಟನ್ ಖರೀದಿಸುವುದಾಗಿ ಆದೇಶ ಹೊರಡಿಸಿದೆ.

ಅದರಂತೆ ಬಳ್ಳಾರಿ, ಗದಗ, ಧಾರವಾಡ, ಬಾಗಲಕೋಟೆ, ರಾಯಚೂರು, ವಿಜಯಪುರ, ಯಾದಗಿರಿ, ಚಿತ್ರದುರ್ಗ, ತುಮಕೂರು, ಕಲಬುರಗಿ, ವಿಜಯನಗರ, ಹಾವೇರಿ, ಕೊಪ್ಪಳ ಜಿಲ್ಲೆಗಳ ಎಪಿಎಂಸಿ ಮಾರುಕಟ್ಟೆಯಲ್ಲಿ ಪ್ರತಿ ರೈತನಿಂದ ಪ್ರತಿ ಎಕರೆಗೆ 15 ಕ್ವಿಂಟಲ್, ಗರಿಷ್ಠ 30 ಕ್ವಿಂಟಲ್ ಖರೀದಿಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಹೀಗೆ ಖರೀದಿ ಮಾಡುವಾಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಏಕೀಕೃತ ಮಾರುಕಟ್ಟೆ ವೇದಿಕೆ (ಯುಎಂಪಿ) ಇ–ಟೆಂಡರ್ ಮೂಲಕವೇ ಯೋಜನೆ ಅನುಷ್ಠಾನ ಗೊಳಿಸಬೇಕು ಎಂಬ ಷರತ್ತು ವಿಧಿಸಲಾಗಿದೆ. ಆದರೆ, ಬಳ್ಳಾರಿ ಜಿಲ್ಲೆಯ ಎಪಿಎಂಸಿ ಮತ್ತು ಬೇರೆ ಜಿಲ್ಲೆಯ ಕೆಲ ಎಪಿಎಂಸಿಗಳಲ್ಲಿ ‘ಇ–ಟೆಂಡರ್’ ನಡೆಸಲು ಒಣಮೆಣಸಿನಕಾಯಿ ಖರೀದಿದಾರರಾಗಲಿ, ಏಜೆಂಟರಾಗಲಿ ಇಲ್ಲದ್ದರಿಂದ ಸಮಸ್ಯೆಯಾಗಿದೆ.

‘ಬಳ್ಳಾರಿ ಜಿಲ್ಲೆಯನ್ನು ಯೋಜನೆಯಿಂದ ಹೊರಗಿಟ್ಟು, ಕೆಲವೇ ಜಿಲ್ಲೆಗಳಿಗೆ ಮಾತ್ರ ಯೋಜನೆಯ ಲಾಭ ಮಾಡಿಕೊಡುವ ಹುನ್ನಾರ ಇದರಲ್ಲಿ ಅಡಗಿದೆ’ ಎಂಬ ಆರೋಪ ಕೇಳಿ ಬಂದಿದೆ.



ಖರೀದಿ ನಿಯಮಾವಳಿಗಳಿಂದಾಗಿ ಬಳ್ಳಾರಿ ರೈತರಿಗೆ ನಷ್ಟವಾಗಲಿದೆ. ಇದನ್ನು ಪರಿಹರಿಸಲು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಸರ್ಕಾರ ತೆಗೆದುಕೊಳ್ಳುವ ನಿರ್ಧಾರ ನಿರೀಕ್ಷಿಸಲಾಗುತ್ತಿದೆ

ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾಧಿಕಾರಿ, ಬಳ್ಳಾರಿ

ಸರ್ಕಾರಕ್ಕೆ ಜಿಲ್ಲಾಧಿಕಾರಿ ಪತ್ರ

‘ಒಣಮೆಣಸಿನಕಾಯಿ ಖರೀದಿಗೆ ವಿಧಿಸಲಾಗಿರುವ ನಿಯಮಗಳಿಂದಾಗಿ ಬಳ್ಳಾರಿ ಜಿಲ್ಲೆಯ ರೈತರು ಯೋಜನೆಯ ಅನುಕೂಲತೆಯಿಂದ ವಂಚಿತರಾಗುತ್ತಾರೆ. ಬಳ್ಳಾರಿಯಲ್ಲಿ ಬೆಳೆದಿರುವ ಒಣಮೆಣಸಿನಕಾಯಿಯನ್ನು ಇ-ಟೆಂಡರ್ ಇರುವ ರಾಜ್ಯದ ಇತರೆ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲು ವ್ಯವಸ್ಥೆ ಮಾಡಿಕೊಡಬೇಕು’ ಎಂದು ಸಹಕಾರ ಇಲಾಖೆಗೆ ಬಳ್ಳಾರಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಪತ್ರ ಬರೆದಿದ್ದಾರೆ. ಆದರೆ, ಸರ್ಕಾರ ಈವರೆಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ.

ಬೇರೆ ಜಿಲ್ಲೆಗಳ ಎಪಿಎಂಸಿಯಲ್ಲಿ ಉತ್ಪನ್ನ ಮಾರಾಟಕ್ಕೆ ಬಳ್ಳಾರಿ ಜಿಲ್ಲೆಯ ರೈತರಿಗೆ ಅನುಕೂಲ ಮಾಡಿಕೊಟ್ಟರಷ್ಟೇ ಕೇಂದ್ರದ ಯೋಜನೆಯ ಲಾಭ ಸಿಗಲಿದೆ. ಇಲ್ಲವಾದರೆ, ಯೋಜನೆ ಸಿಕ್ಕರೂ ಫಲ ಸಿಗದು ಎಂಬ ಸ್ಥಿತಿ ಉದ್ಭವವಾಗಿದೆ.

ಕ್ವಿಂಟಲ್ ಕೊಬ್ಬರಿಗೆ ₹30,508

ಪ್ರಜಾವಾಣಿ ವಾರ್ತೆ



ಅರಸೀಕೆರೆ (ಹಾಸನ): ಇಲ್ಲಿನ ಎಪಿಎಂಸಿಯಲ್ಲಿ ಕೊಬ್ಬರಿ ಧಾರಣೆ ಗಗನಕ್ಕೇರಿದ್ದು, ಶುಕ್ರವಾರದ ಹರಾಜಿನಲ್ಲಿ ಕ್ವಿಂಟಲ್‌ಗೆ ₹30,508 ತಲುಪಿದೆ. ಇದುವರೆಗಿನ ಗರಿಷ್ಠ ಬೆಲೆ ಇದು.

ಗರಿಷ್ಠ ₹30,508, ಕನಿಷ್ಠ ₹26,500 ಹಾಗೂ ಮಾದರಿ ಬೆಲೆ ₹27,919 ದಾಖಲಾಗಿದೆ. ಶುಕ್ರವಾರ 1,495 ಕ್ವಿಂಟಲ್ ಕೊಬ್ಬರಿ ಆವಕವಾಗಿತ್ತು.

‘ಉತ್ತರ ಭಾರತದಲ್ಲಿ ಹೆಚ್ಚಿದ ಬೇಡಿಕೆ, ಇಳುವರಿ ಕುಸಿತ, ತಮಿಳುನಾಡು ಹಾಗೂ ಕೇರಳಕ್ಕೆ ಸಾಗಣೆ ಹೆಚ್ಚಳವಾಗಿರುವುದು ಹಾಗೂ ಮಾರುಕಟ್ಟೆಗೆ ಆವಕ ಕಡಿಮೆಯಾಗಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣ’ ಎಂದು ಎಪಿಎಂಸಿ ಕಾರ್ಯದರ್ಶಿ ಸಿದ್ದರಂಗಸ್ವಾಮಿ ತಿಳಿಸಿದ್ದಾರೆ.

ಇಲ್ಲಿ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಹರಾಜು ಪ್ರಕ್ರಿಯೆ ನಡೆಯುತ್ತದೆ. ಕಳೆದ ವಾರ ₹26 ಸಾವಿರದಿಂದ ₹27 ಸಾವಿರದ ಆಸುಪಾಸಿನಲ್ಲಿದ್ದ ಬೆಲೆ, ನಾಗಲೋಟದಲ್ಲಿ ಏರುತ್ತಿದೆ. ಆದರೆ, ರೈತರ ಬಳಿ ಕೊಬ್ಬರಿಯೇ ಇಲ್ಲದಿರುವುದರಿಂದ ಬೆಲೆ ಏರಿಕೆಯ ಪ್ರಯೋಜನ ದೊರೆಯುತ್ತಿಲ್ಲ.

‘ತಾಲ್ಲೂಕಿನಲ್ಲಿ ರೋಗಬಾಧೆಯಿಂದ ಇಳುವರಿ ಕುಸಿತವಾಗಿದ್ದು, ಬೆಳೆಗಾರರು ಎಳೆನೀರು ಮಾರಾಟಕ್ಕೆ ಆದ್ಯತೆ ನೀಡುತ್ತಿದ್ದಾರೆ. ತೆಂಗಿನ ಜಾಗದಲ್ಲಿ ಅಡಿಕೆ ಕಾಲಿಟ್ಟಿರುವುದು ಕೊಬ್ಬರಿ ಉತ್ಪಾದನೆ ಕಡಿಮೆಯಾಗಲು ಪ್ರಮುಖ ಕಾರಣ’ ಎನ್ನುತ್ತಾರೆ ವರ್ತಕರು.

‘ಶ್ರಾವಣ ಮಾಸ ಹಾಗೂ ದಸರಾ ಸಮಯದಲ್ಲಿ ಮತ್ತಷ್ಟು ಬೇಡಿಕೆ ಹೆಚ್ಚಾಗುವ ಸಂಭವವಿದ್ದು, ಬೆಲೆ ಹೀಗೆಯೇ ಏರುಮುಖವಾಗಲಿದೆ’ ಎಂದು ವರ್ತಕರು ತಿಳಿಸಿದ್ದಾರೆ.

1.5 ಟನ್ ಲಿಚಿ ಹಣ್ಣು ರಫ್ತು



ನವದೆಹಲಿ (ಪಿಟಿಐ): ಪಂಜಾಬ್‌ನಿಂದ ದೋಹಾ ಮತ್ತು ದುಬೈಗೆ 1.5 ಟನ್ ಲಿಚಿ ಹಣ್ಣನ್ನು ರಫ್ತು ಮಾಡಲಾಗಿದೆ ಎಂದು ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ಎಪಿಇಡಿಎ) ಶುಕ್ರವಾರ ತಿಳಿಸಿದೆ.

ಪಂಜಾಬ್‌ನ ಪಠಾಣ್‌ಕೋಟ್‌ನಿಂದ ಜೂನ್ 23ರಂದು ದೋಹಾಗೆ 1 ಟನ್ ಮತ್ತು ದುಬೈಗೆ 0.5 ಟನ್ ಲಿಚಿ ಹಣ್ಣನ್ನು ರಫ್ತು ಮಾಡಲಾಗಿದೆ ಎಂದು ತಿಳಿಸಿದೆ.

2023–24ರಲ್ಲಿ 71,490 ಟನ್‌ನಷ್ಟು ಲಿಚಿ ಹಣ್ಣು ಪಂಜಾಬ್‌ನಲ್ಲಿ ಉತ್ಪಾದನೆಯಾಗಿತ್ತು. ಇದು ದೇಶದ ಒಟ್ಟು ಉತ್ಪಾದನೆಯ ಪೈಕಿ ಶೇ 12.39ರಷ್ಟು ಪಾಲನ್ನು ಹೊಂದಿದೆ. ಇದೇ ಅವಧಿಯಲ್ಲಿ ದೇಶದಿಂದ 639 ಟನ್ ಲಿಚಿ ಹಣ್ಣನ್ನು ರಫ್ತು ಮಾಡಲಾಗಿತ್ತು.

ಹಣ್ಣು ಮತ್ತು ತರಕಾರಿಗಳ ರಫ್ತಿಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ಹಲವಾರು ಕ್ರಮ ತೆಗೆದುಕೊಳ್ಳುತ್ತಿದೆ. 2024–25ರ ಆರ್ಥಿಕ ವರ್ಷದಲ್ಲಿ ಹಣ್ಣು ಮತ್ತು ತರಕಾರಿಗಳ ರಫ್ತಿನಲ್ಲಿ ಶೇ 5.67ರಷ್ಟು ಏರಿಕೆಯಾಗಿದ್ದು, ₹33,076 ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ಇಎಸ್‌ಐ: ನವೀಕೃತ ಯೋಜನೆ ಪ್ರಕಟ

ಉದ್ಯೋಗಿಗಳು, ಉದ್ಯೋಗದಾತ ಕಂಪನಿಗಳಿಗೆ ನೋಂದಣಿ ಅವಕಾಶ

ನವದೆಹಲಿ (ಪಿಟಿಐ): ದೇಶದಾದ್ಯಂತ ‘ಇಎಸ್‌ಐ’ ಸೌಲಭ್ಯವನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ಉದ್ಯೋಗಿಗಳು ಮತ್ತು ಉದ್ಯೋಗದಾತ ಕಂಪನಿಗಳ ನೋಂದಣಿ ಪ್ರೋತ್ಸಾಹಿಸುವ ನವೀಕೃತ ಯೋಜನೆಯನ್ನು (ಎಸ್‌ಪಿಆರ್‌ಇಇ) ಕಾರ್ಮಿಕರ ರಾಜ್ಯ ವಿಮಾ ನಿಗಮ (ಇಎಸ್‌ಐಸಿ) ಪ್ರಕಟಿಸಿದೆ.

ಶಿಮ್ಲಾದಲ್ಲಿ ಶುಕ್ರವಾರ ‘ಇಎಸ್‌ಐಸಿ’ಯ 196ನೇ ಸಭೆಯ ಬಳಿಕ ಕೇಂದ್ರ ಕಾರ್ಮಿಕ ಸಚಿವ ಮನ್‌ಸುಖ್ ಮಾಂಡವೀಯ ನವೀಕೃತ ಯೋಜನೆ ಪ್ರಕಟಿಸಿದರು.

2016ರಲ್ಲಿ ಜಾರಿಗೊಳಿಸಲಾದ ಈ ಯೋಜನೆಯಡಿ ಇದುವರೆಗೆ 88 ಸಾವಿರ ಕಂಪನಿಗಳು ಮತ್ತು 1.02 ಕೋಟಿ ಉದ್ಯೋಗಿಗಳು ನೋಂದಣಿ ಮಾಡಿಕೊಂಡಿದ್ದಾರೆ. ನವೀಕೃತ ಯೋಜನೆಯಡಿ ಇನ್ನೂ ನೋಂದಣಿ ಮಾಡಿಕೊಳ್ಳದ ಕಂಪನಿಗಳು, ಅರ್ಧಕ್ಕೆ ಕೆಲಸ ತೊರೆದಿರುವ ತಾತ್ಕಾಲಿಕ, ಗುತ್ತಿಗೆ ಆಧಾರಿತ ಉದ್ಯೋಗಿಗಳಿಗೆ ನೋಂದಣಿಗೆ ಅವಕಾಶ ಲಭಿಸಲಿದೆ. ನೋಂದಣಿ ಮಾಡಿಕೊಂಡ ದಿನದಿಂದ ಉದ್ಯೋಗಿಗಳು ಇಎಸ್‌ಐ ಸೌಲಭ್ಯದ ವ್ಯಾಪ್ತಿಗೆ ಬರಲಿದ್ದಾರೆ. ನೋಂದಣಿಯ ಅವಧಿ 2025ರ ಜುಲೈ 1ರಿಂದ ಡಿಸೆಂಬರ್ 31 ಎಂದು ಕಾರ್ಮಿಕ ಸಚಿವಾಲಯ ಹೇಳಿದೆ.

ಚಾರಿಟಬಲ್ ಆಸ್ಪತ್ರೆ ಸಹಯೋಗ: ಇಎಸ್‌ಐ ಆಸ್ಪತ್ರೆಗಳು ಇಲ್ಲದ ಕಡೆಗಳಲ್ಲಿ, ಚಾರಿಟಬಲ್ ಆಸ್ಪತ್ರೆಗಳ ಸಹಯೋಗದಲ್ಲಿ ‘ಇಎಸ್‌ಐ’ ಫಲಾನುಭವಿಗಳಿಗೆ ವೈದ್ಯಕೀಯ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗುವುದು. ದೇಶದ ಕೆಲವು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಜಾರಿಗೆ ತರಲಾಗುವುದು ಎಂದು ಇಎಸ್‌ಐಸಿ ಹೇಳಿದೆ.


ಪರಿಷ್ಕೃತ ಆಯುಷ್ ನೀತಿಗೂ ಇಎಸ್‌ಐಸಿ ಒಪ್ಪಿಗೆ ನೀಡಿದೆ. ‘ಇಎಸ್‌ಐ’ ಆಸ್ಪತ್ರೆಗಳಲ್ಲಿ ಯೋಗ, ಯುನಾನಿ, ಸಿದ್ಧ, ಹೋಮಿಯೊಪತಿ ಚಿಕಿತ್ಸಾ ಸೌಲಭ್ಯ ಸಿಗಲಿದೆ.

‘ಕ್ಷಮಾದಾನ ಯೋಜನೆ –2025’

ಕಾರ್ಮಿಕರ ರಾಜ್ಯ ವಿಮಾ ನಿಗಮವು ‘ಕ್ಷಮಾದಾನ ಯೋಜನೆ 2025’ಕ್ಕೂ ಅನುಮೋದನೆ ನೀಡಿದೆ. 2025ರ ಅಕ್ಟೋಬರ್ 1ರಿಂದ 2026ರ ಸೆಪ್ಟೆಂಬರ್ 30ರವರೆಗೆ ಈ ಯೋಜನೆ ಜಾರಿಯಲ್ಲಿರಲಿದೆ.

ಉದ್ಯೋಗಿಗಳು ಮತ್ತು ಉದ್ಯೋಗದಾತ ಕಂಪನಿಗಳು ‘ಇಎಸ್‌ಐ’ ಸಂಬಂಧಿತ ಪ್ರಕರಣಗಳನ್ನು ಈ ಯೋಜನೆಯಡಿ ಒಂದೇ ಬಾರಿಗೆ ಇತ್ಯರ್ಥಪಡಿಸಿಕೊಳ್ಳಬಹುದು. ರಾಜಿ ಸಂಧಾನಕ್ಕೂ ಅವಕಾಶ ಇದೆ ಎಂದು ಕಾರ್ಮಿಕ ಸಚಿವಾಲಯ ಹೇಳಿದೆ.

84 ಸಾವಿರ ದಾಟಿದ ಸೆನ್ಸೆಕ್ಸ್



ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳ ಖರೀದಿ ಹೆಚ್ಚಳ ಮತ್ತು ವಿದೇಶಿ ಬಂಡವಾಳದ ಒಳಹರಿವಿನಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 303 ಅಂಶ ಏರಿಕೆಯಾಗಿ, 84,058 ಅಂಶಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 88 ಅಂಶ ಹೆಚ್ಚಳವಾಗಿ, 25,637ಕ್ಕೆ ಕೊನೆಗೊಂಡಿದೆ.

ನಾಲ್ಕು ದಿನಗಳ ವಹಿವಾಟಿನಲ್ಲಿ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡ ಪರಿಣಾಮ ಹೂಡಿಕೆದಾರರ ಸಂಪತ್ತು ₹12 ಲಕ್ಷ ಕೋಟಿಯಷ್ಟು ವೃದ್ಧಿಸಿದೆ.

ಸುದ್ದಿ 2 ನಿಮಿಷ

ಅದಾನಿ ಸಮೂಹ ವೇಗವಾಗಿ ಬೆಳೆಯುತ್ತಿರುವ ಭಾರತೀಯ ಬ್ರ್ಯಾಂಡ್

ನವದೆಹಲಿ (ಪಿಟಿಐ): ಅದಾನಿ ಸಮೂಹವು ವೇಗವಾಗಿ ಬೆಳೆಯುತ್ತಿರುವ ಭಾರತೀಯ ಬ್ರ್ಯಾಂಡ್ ಆಗಿ ಹೊರಹೊಮ್ಮಿದೆ.

ಅದಾನಿ ಕಂಪನಿಯ ಬ್ರ್ಯಾಂಡ್ ಮೌಲ್ಯ 2024ರಲ್ಲಿ ₹30,349 ಕೋಟಿಯಷ್ಟಿತ್ತು. ಪ್ರಸಕ್ತ ವರ್ಷ ₹55,227 ಕೋಟಿಗೆ ಏರಿಕೆಯಾಗಿದ್ದು, ಶೇ 82ರಷ್ಟು ಹೆಚ್ಚಾಗಿದೆ ಎಂದು ಬ್ರ್ಯಾಂಡ್ ಮೌಲ್ಯಮಾಪನ ಸಲಹಾ ಸಂಸ್ಥೆ ಬ್ರ್ಯಾಂಡ್ ಫೈನಾನ್ಸ್ ಸಿದ್ಧಪಡಿಸಿರುವ ಹೆಚ್ಚು ಮೌಲ್ಯಯುತ ಭಾರತೀಯ ಕಂಪನಿಗಳ 2025ರ ಪಟ್ಟಿಯಲ್ಲಿ ತಿಳಿಸಿದೆ.

ದೇಶದ 100 ಕಂಪನಿಗಳ ಒಟ್ಟು ಬ್ರ್ಯಾಂಡ್ ಮೌಲ್ಯ ₹20.21 ಲಕ್ಷ ಕೋಟಿಯಾಗಿದೆ. ನಿರಂತರ ಬಂಡವಾಳ ಹೂಡಿಕೆ, ಸದೃಢ ದೇಶೀಯ ಬೇಡಿಕೆ ಮತ್ತು ಸಾರ್ವಜನಿಕ-ಖಾಸಗಿ ಪಾಲುದಾರಿಕೆಗಳಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6ರಿಂದ ಶೇ 7ರಷ್ಟಿರಲಿದೆ ಎಂದು ತಿಳಿಸಿದೆ.

ಟಾಟಾಗೆ ಮತ್ತೆ ಅಗ್ರಸ್ಥಾನ: ಟಾಟಾ ಸಮೂಹದ ಮೌಲ್ಯ ಶೇ 10ರಷ್ಟು ಏರಿಕೆಯಾಗಿದ್ದು, ₹2.70 ಲಕ್ಷ ಕೋಟಿಯಾಗಿದೆ. ದೇಶದ ಅತ್ಯಂತ ಮೌಲ್ಯಯುತ ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ ಇದು ಮತ್ತೆ ಅಗ್ರಸ್ಥಾನದಲ್ಲಿದೆ.

ನಂತರದ ಸ್ಥಾನದಲ್ಲಿ ಇನ್ಫೊಸಿಸ್ (₹1.39 ಲಕ್ಷ ಕೋಟಿ), ಎಚ್‌ಡಿಎಫ್‌ಸಿ ಗ್ರೂಪ್ (₹1.21 ಲಕ್ಷ ಕೋಟಿ), ಎಲ್‌ಐಸಿ (₹1.16 ಲಕ್ಷ ಕೋಟಿ), ಎಚ್‌ಸಿಎಲ್ ಟೆಕ್ (₹76,088 ಕೋಟಿ), ಲಾರ್ಸೆನ್ ಆ್ಯಂಡ್ ಟೊಬ್ರೊ (₹63,261 ಕೋಟಿ) ಮತ್ತು ಮಹೀಂದ್ರ ಸಮೂಹ (₹61,551 ಕೋಟಿ) ಇವೆ ಎಂದು ತಿಳಿಸಿದೆ.

adani

ಚಾಲ್ತಿ ಖಾತೆ ಮಿಗತೆ ಮೊತ್ತ ₹1.15 ಲಕ್ಷ ಕೋಟಿ: ಆರ್‌ಬಿಐ

ಮುಂಬೈ (ಪಿಟಿಐ): 2024–25ರ ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ಚಾಲ್ತಿ ಖಾತೆ ಮಿಗತೆ ₹1.15 ಲಕ್ಷ ಕೋಟಿಯಾಗಿದೆ. ಇದು ಜಿಡಿಪಿ ಗಾತ್ರದ ಶೇ 1.3ರಷ್ಟಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

2023–24ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹39,326 ಕೋಟಿಯಷ್ಟಾಗಿತ್ತು. ಇದು ಜಿಡಿಪಿಯ ಶೇ 0.5ರಷ್ಟಾಗಿತ್ತು ಎಂದು ತಿಳಿಸಿದೆ. ಕಳೆದ ಡಿಸೆಂಬರ್ ತ್ರೈಮಾಸಿಕದಲ್ಲಿ ಚಾಲ್ತಿ ಖಾತೆ ಕೊರತೆ ₹96,605 ಕೋಟಿಯಾಗಿತ್ತು.

2024–25ರ ಆರ್ಥಿಕ ವರ್ಷದಲ್ಲಿ ದೇಶದ ಚಾಲ್ತಿ ಖಾತೆ ಕೊರತೆ ₹1.99 ಲಕ್ಷ ಕೋಟಿಯಾಗಿದೆ. 2023–24ರಲ್ಲಿ ₹2.22 ಲಕ್ಷ ಕೋಟಿಯಾಗಿತ್ತು. ಸರಕುಗಳ ವ್ಯಾಪಾರ ಕೊರತೆ ₹5 ಲಕ್ಷ ಕೋಟಿಯಾಗಿದೆ. ಸೇವೆಗಳ ನಿವ್ವಳ ಸ್ವೀಕೃತಿ ₹4.55 ಲಕ್ಷ ಕೋಟಿ ಆಗಿದೆ ಎಂದು ತಿಳಿಸಿದೆ.

ಆಗಸ್ಟ್‌ನಿಂದ ಅಂಚೆ ಕಚೇರಿಯಲ್ಲಿ ಡಿಜಿಟಲ್ ಪಾವತಿ ಸ್ವೀಕಾರ

ನವದೆಹಲಿ (ಪಿಟಿಐ): ದೇಶದ ಎಲ್ಲಾ ಅಂಚೆ ಕಚೇರಿಗಳು ಆಗಸ್ಟ್‌ನಿಂದ ಡಿಜಿಟಲ್ ಪಾವತಿ ಸ್ವೀಕರಿಸುವುದನ್ನು ಆರಂಭಿಸಲಿವೆ ಎಂದು ಅಧಿಕೃತ ಮೂಲಗಳು ಶುಕ್ರವಾರ ತಿಳಿಸಿವೆ.

ಪ್ರಸ್ತುತ ಅಂಚೆ ಕಚೇರಿಗಳು ತಮ್ಮ ಖಾತೆಗಳನ್ನು ಯುಪಿಐ ವ್ಯವಸ್ಥೆಯೊಂದಿಗೆ ಜೋಡಣೆ ಮಾಡದ ಕಾರಣ ಡಿಜಿಟಲ್ ಪಾವತಿಗಳನ್ನು ಸ್ವೀಕರಿಸಲು ಸಾಧ್ಯವಾಗುತ್ತಿಲ್ಲ. ಈಗ ಅಂಚೆ ಕಚೇರಿಗಳು ತಮ್ಮ ಐ.ಟಿ ವ್ಯವಸ್ಥೆಯಲ್ಲಿ ಹೊಸ ಅಪ್ಲಿಕೇಷನ್ ಅನ್ನು ಅಳವಡಿಸಿದ ಬಳಿಕ ಕೌಂಟರ್‌ಗಳಲ್ಲಿ ಕ್ಯೂಆರ್ ಕೋಡ್ ಬಳಸಿ ವಹಿವಾಟು ನಡೆಸಬಹುದಾಗಿರುತ್ತದೆ. ಇದು ಆಗಸ್ಟ್ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿವೆ.

ಯೋಜನೆಯ ಪ್ರಾಯೋಗಿಕ ಭಾಗವಾಗಿ ಕರ್ನಾಟಕ ವೃತ್ತದ ಮೈಸೂರು ಮತ್ತು ಬಾಗಲಕೋಟೆಯ ಪ್ರಧಾನ ಕಚೇರಿ ಹಾಗೂ ಅದರ ಅಧೀನ ಕಚೇರಿಗಳಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ ಎಂದು ತಿಳಿಸಿವೆ.

भारतीय डाक India Post

ಅಡಿಕೆ ಧಾರಣೆ

ಕುಮಟಾ		ಸರಕು	58019-65000	ಚಾಲಿ	35518-43019
ಚಾಲಿ	38969-42898	**ಸಿದ್ದಾಪುರ**		ಕೆಂಪುಗೋಟು	21669-22699
ಚಿಪ್ಪು	25090-30009	ಬಿಳಿಗೋಟು	23899-29889	ಸರಕು	43149-47399
ಕೋಕ	6569-19989	ಚಾಲಿ	33099-41099	**ಯಲ್ಲಾಪುರ**	
ಫ್ಯಾಕ್ಟರಿ	5089-24629	ಕೋಕ	14699-18899	ಅಪಿ	56889-56889
ಹೊಸಚಾಲಿ	35510-43393	ಕೆಂಪುಗೋಟು	20619-22300	ಬಿಳಿಗೋಟು	16899-33019
ಪುತ್ತೂರು		ರಾಶಿ	41099-45099	ಚಾಲಿ	33496-42799
ಕೋಕ	20000-30500	ತಟ್ಟಿಬೆಟ್ಟೆ	29099-43099	ಕೋಕ	8617-22012
ಶಿವಮೊಗ್ಗ		**ಶಿರಸಿ**		ಕೆಂಪುಗೋಟು	18016-26969
ಬೆಟ್ಟೆ	52009-61199	ಬೆಟ್ಟೆ	28199-32718	ರಾಶಿ	40899-53000
ಗೊರಬಲು	17009-32009	ಬಿಳಿಗೋಟು	18800-33699	ತಟ್ಟಿಬೆಟ್ಟೆ	31016-37319
ರಾಶಿ	48158-57299				

ಕೃಷಿ ವಲಯ: ಒಟ್ಟು ಉತ್ಪಾದನಾ ಮೌಲ್ಯ ₹29.49 ಲಕ್ಷ ಕೋಟಿಗೆ ಏರಿಕೆ

ನವದೆಹಲಿ (ಪಿಟಿಐ): 2012ರಿಂದ 2024ರ ಆರ್ಥಿಕ ವರ್ಷದ ಅವಧಿಯಲ್ಲಿ ಕೃಷಿ ವಲಯದ ಒಟ್ಟು ಉತ್ಪಾದನಾ ಮೌಲ್ಯವು (ಜಿವಿಒ) ಶೇ 54.6ರಷ್ಟು ಏರಿಕೆಯಾಗಿದೆ. ಈ ಮೂಲಕ ಕೃಷಿ ಮತ್ತು ಸಂಬಂಧಿತ ವಲಯದ ಒಟ್ಟು ಉತ್ಪಾದನಾ ಮೌಲ್ಯ ₹19.08 ಲಕ್ಷ ಕೋಟಿಗಳಿಂದ 29.49 ಲಕ್ಷ ಕೋಟಿಗೆ ತಲುಪಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಶುಕ್ರವಾರ ತಿಳಿಸಿದೆ.

ಇದೇ ಅವಧಿಯಲ್ಲಿ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳ ಒಟ್ಟು ಮೌಲ್ಯ ವರ್ಧನೆಯು (ಜಿವಿಎ) ಶೇ 255ರಷ್ಟು ಹೆಚ್ಚಳವಾಗಿದ್ದು, ₹15.02 ಲಕ್ಷ ಕೋಟಿಗಳಿಂದ ₹48.78 ಲಕ್ಷ ಕೋಟಿಗೆ ತಲುಪಿದೆ ಎಂದೂ ಇಲಾಖೆಯ ತನ್ನ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಿದೆ. ಬೆಳೆ, ಜಾನುವಾರು (ಪಶು ಸಂಗೋಪನೆ), ಕೃಷಿ ಅರಣ್ಯ (ಮರ ಬೆಳೆಸುವುದು ಹಾಗೂ ಮಾರಾಟ), ಮೀನುಗಾರಿಕೆ-ಮೀನು ಸಾಕಾಣಿಕೆ ಕ್ಷೇತ್ರಗಳ ಒಟ್ಟು ಉತ್ಪಾದನಾ ಮೌಲ್ಯವನ್ನು ಈ ದತ್ತಾಂಶದ ವರದಿಯು ಒಳಗೊಂಡಿದೆ.

ಬೆಳೆ ವಲಯದ ಒಟ್ಟು ಉತ್ಪಾದನಾ ಮೌಲ್ಯವು 15.95 ಲಕ್ಷ ಕೋಟಿಗಳಾಗಿದ್ದು, ಕೃಷಿ ಹಾಗೂ ಸಂಬಂಧಿತ ವಲಯದ ಒಟ್ಟು ಉತ್ಪಾದನಾ ವಲಯಕ್ಕೆ ಬೆಳೆ ಕ್ಷೇತ್ರದ ಕೊಡುಗೆ ಹೆಚ್ಚಿದೆ ಎಂದೂ ವರದಿಯಲ್ಲಿ ತಿಳಿಸಲಾಗಿದೆ.

ಮುಂಬೈ ಧಾರಣೆ (ಶೇಂಗಾ)

27-06-2025	
ಜಾವಾ 70/80(ಹೊಸ)	9500-9600
ಜಾವಾ 80/90(ಹೊಸ)	9000-9100
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	7800-7900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (1395)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1183 (1183)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1260)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	94,850 (96,650)
ಬೆಳ್ಳಿ ಕೆ.ಜಿಗೆ	1,05,000 (1,07,100)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

‘ಅವಕಾಶ ಸಿಕ್ಕಿದ್ದರೆ ಖಮೇನಿ ಹತ್ಯೆ ಮಾಡುತ್ತಿದ್ದೆವು’

ಜೆರುಸಲೇಂ/ದುಬೈ/ಟೆಹರಾನ್ (ಎಎಫ್‌ಪಿ/ಎಪಿ): ‘ಯುದ್ಧದ ಮಧ್ಯೆ ಅವಕಾಶ ದೊರೆತಿದ್ದರೆ ನಾವು ಇರಾನ್‌ನ ಸರ್ವೋಚ್ಚ ನಾಯಕ ಆಯತ್ ಉಲ್ಲಾ ಅಲಿ ಖಮೇನಿ ಅವರನ್ನು ಹತ್ಯೆ ಮಾಡುತ್ತಿದ್ದೆವು’ ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಇಸ್ರೇಲ್ ಕ್ಯಾಟ್ಸ್ ಹೇಳಿದರು.

‘ಆತ ಎಲ್ಲಿದ್ದಾನೆ ಎಂದು ನಮಗೆ ತಿಳಿದಿದ್ದರೆ, ನಾವು ಹತ್ಯೆ ಮಾಡುತ್ತಿದ್ದೆವು. ನಮ್ಮ ಸೇನೆಯು ಆತನಿಗಾಗಿ ತೀವ್ರ ಹುಡುಕಾಟ ನಡೆಸಿತ್ತು. ಇದು ಖಮೇನಿಗೆ ತಿಳಿಯಿತು. ಅದಕ್ಕಾಗಿಯೇ ಆತ ಭೂಗತನಾದ. ಕಮಾಂಡರ್‌ಗಳಿಂದ ತನ್ನೆಲ್ಲಾ ಸಂಪರ್ಕ ಕಡಿದುಕೊಂಡ’ ಎಂದು ಮಾಧ್ಯಮವೊಂದಕ್ಕೆ ಕ್ಯಾಟ್ಸ್ ಗುರುವಾರ ಪ್ರತಿಕ್ರಿಯಿಸಿದರು.

‘ಈಗ ನಾವು ಆತನನ್ನು ಹತ್ಯೆ ಮಾಡುವ ಯತ್ನ ನಡೆಸುವುದಿಲ್ಲ. ಯಾಕೆಂದರೆ, ಕದನ ವಿರಾಮ ಘೋಷಣೆಗೂ ಮೊದಲು ಹತ್ಯೆ ಮಾಡುವುದಕ್ಕೂ ಘೋಷಣೆ ಬಳಿಕ ಹತ್ಯೆ ಮಾಡುವುದಕ್ಕೂ ವ್ಯತ್ಯಾಸವಿದೆ’ ಎಂದರು.

‘ಐತಿಹಾಸಿಕ’ ಅಂತ್ಯಕ್ರಿಯೆ ಇಂದು: ಇಸ್ರೇಲ್ ದಾಳಿಯಲ್ಲಿ ಹತ್ಯೆಯಾದ ಅಣು ವಿಜ್ಞಾನಿಗಳು, ಸೇನಾ ಕಮಾಂಡರ್‌ಗಳು ಸೇರಿದಂತೆ ಒಟ್ಟು 60 ಮಂದಿಯ ಅಂತ್ಯಕ್ರಿಯೆಯನ್ನು ‘ಐತಿಹಾಸಿಕ’ವಾದ ರೀತಿಯಲ್ಲಿ ಶನಿವಾರ ನೆರವೇರಿಸಲು ಇರಾನ್ ನಿರ್ಧರಿಸಿದೆ. ಇಷ್ಟೂ ಜನರ ಮೃತದೇಹಗಳನ್ನು 11 ಕಿ.ಮೀ ಉದ್ದಕ್ಕೆ ಮೆರವಣಿಗೆ ಮಾಡಲಾಗುತ್ತದೆ ಎಂದು ಇರಾನ್ ಹೇಳಿದೆ.

‘ಮಾತುಕತೆ ಸದ್ಯದ ಮಟ್ಟಿಗೆ ಸಾಧ್ಯವಿಲ್ಲ’

‘ಅಮೆರಿಕದ ದಾಳಿಯಿಂದಾಗಿ ನಮ್ಮ ಅಣು ಘಟಕಗಳಿಗೆ ಭಾರಿ ಹಾನಿಯಾಗಿದೆ. ದಾಳಿ ನಡೆದಿರುವ ಕಾರಣ ಪರಮಾಣು ಯೋಜನೆ ಕುರಿತು ಅಮೆರಿಕದೊಂದಿಗೆ ನಡೆಸುತ್ತಿರುವ ಮಾತುಕತೆಯನ್ನು ಸದ್ಯದ ಮಟ್ಟಿಗಂತೂ ಮುಂದುವರೆಸಲಾಗದು’ ಎಂದು ಇರಾನ್‌ನ ಉನ್ನತ ಮಟ್ಟದ ರಾಜತಾಂತ್ರಿಕರೊಬ್ಬರು ಹೇಳಿದರು. ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಅವರೂ ಇದನ್ನೇ ಹೇಳಿದ್ದಾರೆ.

ಆದರೆ, ಇರಾನ್‌ನೊಂದಿಗೆ ಹೊಸದಾಗಿ ಮಾತುಕತೆ ಆರಂಭಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಉತ್ಸುಕರಾಗಿದ್ದಾರೆ. ‘ಮುಂದಿನ ವಾರ ಎರಡೂ ದೇಶಗಳು ಮಾತುಕತೆ ನಡೆಸುವಂತೆ ಸೂಚಿಸಿದ್ದೇನೆ’ ಎಂದು ಅವರು ಹೇಳಿದ್ದಾರೆ.


‘ಅಕಾಡೆಮಿ ಆಫ್ ಮೋಷನ್ ಪಿಕ್ಚರ್’ ಸದಸ್ಯತ್ವಕ್ಕೆ ಕಮಲ್ ಹಾಸನ್‌ಗೆ ಆಹ್ವಾನ

ಲಾಸ್ ಏಂಜಲೀಸ್ (ಪಿಟಿಐ): ನಟ, ನಿರ್ದೇಶಕ ಕಮಲ್ ಹಾಸನ್, ಬಾಲಿವುಡ್ ನಟ ಆಯುಷ್ಮಾನ್ ಖುರಾನ, ‘ಆಲ್ ವಿ ಇಮ್ಯಾಜಿನ್ ಆ್ಯಸ್ ಲೈಟ್’ ಚಿತ್ರದ ನಿರ್ದೇಶಕಿ ಪಾಯಲ್ ಕಪಾಡಿಯಾ ಸೇರಿದಂತೆ ಹಲವು ಭಾರತೀಯ ನಟರು ಹಾಗೂ ಸಿನಿಮಾ ತಂತ್ರಜ್ಞರನ್ನು ಲಾಸ್ ಏಂಜಲೀಸ್‌ನ ‘ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಆ್ಯಂಡ್ ಸೈನ್ಸ್’ನ ಸದಸ್ಯರಾಗಲು ಆಹ್ವಾನಿಸಲಾಗಿದೆ.

ಆಸ್ಕರ್ ಪ್ರಶಸ್ತಿ ಆಯ್ಕೆಯಲ್ಲಿ ಈ ಸದಸ್ಯರು ಮುಖ್ಯಭೂಮಿಕೆ ವಹಿಸಲಿದ್ದಾರೆ. ಪ್ರಶಸ್ತಿ ವಿಜೇತರ ಆಯ್ಕೆಗೆ ಈ ಸದಸ್ಯರು ಮತಚಲಾಯಿಸಲಿದ್ದಾರೆ.

‘ಗಲ್ಲಿ ಬಾಯ್’ ಚಿತ್ರದ ಕಾಸ್ಟಿಂಗ್ ನಿರ್ದೇಶಕ ಕರಣ್ ಮಾಲಿ, ಆಸ್ಕರ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದ ‘ಆಲ್ ವಿ ಇಮ್ಯಾಜಿನ್ ಆ್ಯಸ್ ಲೈಟ್’ ಚಿತ್ರದ ಛಾಯಾಗ್ರಾಹಕ ರಣಬೀರ್ ದಾಸ್, ಈ ಚಿತ್ರದ ವಸ್ತ್ರ ವಿನ್ಯಾಸಕಿ ಮೈಕ್ಸಿಮಾ ಬಸೂ ಅವರನ್ನೂ ಆಹ್ವಾನ ಮಾಡಲಾಗಿದೆ. 1 ವರ್ಷ ಅವಧಿಗೆ ಸದಸ್ಯತ್ವ ಇರಲಿದೆ.

ಭಾರತದ ಜತೆ ‘ದೊಡ್ಡ’ ವ್ಯಾಪಾರ ಒಪ್ಪಂದ: ಟ್ರಂಪ್




ವಾಷಿಂಗ್ಟನ್ (ಪಿಟಿಐ): ಅಮೆರಿಕವು ಭಾರತದ ಜತೆ ಶೀಘ್ರದಲ್ಲೇ ‘ಬಹಳ ದೊಡ್ಡ’ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಈ ಮೂಲಕ ಉಭಯ ದೇಶಗಳ ನಡುವಿನ ಬಹುನಿರೀಕ್ಷಿತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮಾತುಕತೆ ಪ್ರಕ್ರಿಯೆಯಲ್ಲಿ ಮಹತ್ವದ ಪ್ರಗತಿ ಸಾಧಿಸಿರುವ ಸುಳಿವು ನೀಡಿದ್ದಾರೆ.

‘ಮುಂದಿನ ದಿನಗಳಲ್ಲಿ ಹಲವು ದೇಶಗಳ ಜತೆ ಒಪ್ಪಂದ ಮಾಡಿಕೊಳ್ಳಲಿದ್ದೇವೆ. ಭಾರತದ ಜತೆ ಬಹಳ ದೊಡ್ಡ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿದ್ದೇವೆ’ ಎಂದು ಶ್ವೇತಭವನದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಅವರು ತಿಳಿಸಿದ್ದಾರೆ.

ಕೇಂದ್ರ ವಾಣಿಜ್ಯ ಇಲಾಖೆಯ ವಿಶೇಷ ಕಾರ್ಯದರ್ಶಿ ರಾಜೇಶ್ ಅಗರವಾಲ್ ಅವರು ಪ್ರಸ್ತಾವಿತ ಒಪ್ಪಂದದ ಬಗ್ಗೆ ಅಮೆರಿಕದ ಅಧಿಕಾರಿಗಳ ಜತೆ ಚರ್ಚಿಸಲು ವಾಷಿಂಗ್ಟನ್‌ಗೆ ಬಂದಿಳಿದ ದಿನವೇ ಟ್ರಂಪ್ ಹೇಳಿಕೆ ಹೊರಬಿದ್ದಿದೆ.

ಚೀನಾ ಜತೆ ಒಪ್ಪಂದಕ್ಕೆ ಸಹಿ: ‘ಅಮೆರಿಕವು ಚೀನಾ ಜತೆ ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ’ ಎಂದು ಟ್ರಂಪ್ ಇದೇ ವೇಳೆ ತಿಳಿಸಿದರು. ಆದರೆ, ಚೀನಾದೊಂದಿಗೆ ಸಹಿ ಹಾಕಿರುವ ಒಪ್ಪಂದದ ಕುರಿತ ಹೆಚ್ಚಿನ ವಿವರಗಳನ್ನು ಅವರು ನೀಡಲಿಲ್ಲ. ಚೀನಾ ಜತೆಗಿನ ಒಪ್ಪಂದಕ್ಕೆ ಎರಡು ದಿನಗಳ ಹಿಂದೆ ಸಹಿ ಹಾಕಲಾಗಿದೆ ಎಂದು ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೋವರ್ಡ್ ಲುಟ್ನಿಕ್ ಹೇಳಿದ್ದಾರೆ.



‘ಸಂವಿಧಾನದ ಮೂಲ ಆಶಯ ಮರುಸ್ಥಾಪನೆ’

ಹೊಸಬಾಳೆ ಹೇಳಿಕೆ ಸಮರ್ಥಿಸಿದ ಆರ್‌ಎಸ್‌ಎಸ್ ಮುಖವಾಣಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಸಂವಿಧಾನದ ಪೀಠಿಕೆಯಿಂದ ‘ಸಮಾಜವಾದ’ ಮತ್ತು ‘ಜಾತ್ಯತೀತ’ ಪದಗಳನ್ನು ತೆಗೆಯಬೇಕು’ ಎಂಬ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಹೇಳಿಕೆಯನ್ನು ಆರ್‌ಎಸ್‌ಎಸ್ ಮುಖವಾಣಿ ‘ಆರ್ಗನೈಜರ್’ ಶುಕ್ರವಾರ ಸಮರ್ಥಿಸಿಕೊಂಡಿದೆ.

‘ದತ್ತಾತ್ರೇಯ ಹೊಸಬಾಳೆ ಅವರ ಹೇಳಿಕೆಯಲ್ಲಿ ಸಂವಿಧಾನವನ್ನು ಬುಡಮೇಲು ಮಾಡುವ ಉದ್ದೇಶವಿಲ್ಲ. ಸಂವಿಧಾನದ ‘ಮೂಲ ಆಶಯ’ ಮರುಸ್ಥಾಪಿಸಬೇಕು ಹಾಗೂ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಕಾಂಗ್ರೆಸ್ ತನ್ನ ನೀತಿಯ ಭಾಗವಾಗಿ ಮಾಡಿದ್ದ ‘ವಿರೂಪ’ಗಳಿಂದ ಸಂವಿಧಾನ ಮುಕ್ತವಾಗಿರಬೇಕು ಎಂಬ ಉದ್ದೇಶದಿಂದ ಈ ಮಾತು ಹೇಳಿದ್ದಾರೆ’ ಎಂದು ನಿಯತಕಾಲಿಕದಲ್ಲಿ ಪ್ರಕಟವಾಗಿರುವ ಲೇಖನದಲ್ಲಿ ಹೇಳಲಾಗಿದೆ.

ಸಂವಿಧಾನ ರಚನಾ ಸಭೆಯಲ್ಲಿ ನಡೆದ ಚರ್ಚೆಗಳ ಅಂಶಗಳನ್ನು ಉಲ್ಲೇಖಿಸಿರುವ ಪತ್ರಿಕೆ, ‘ಬಿ.ಆರ್. ಅಂಬೇಡ್ಕರ್ ಪ್ರತಿಪಾದಿಸಿರುವ ಪ್ರಜಾತಾಂತ್ರಿಕ ತತ್ವಗಳನ್ನು ಹೊಸಬಾಳೆ ಅವರ ಮಾತುಗಳು ಪ್ರತಿಧ್ವನಿಸುತ್ತವೆ’ ಎಂದಿದೆ.

‘ಭಾರತವನ್ನು ‘ಜಾತ್ಯತೀತ ಹಾಗೂ ಸಮಾಜವಾದಿ ರಾಜ್ಯಗಳ ಒಕ್ಕೂಟ’ವೆಂದು ಘೋಷಿಸಬೇಕು ಎಂಬ ಪ್ರಸ್ತಾವವನ್ನು ಸಂವಿಧಾನ ರಚನಾ ಸಭೆ 1948ರಲ್ಲಿ ತಿರಸ್ಕರಿಸಿತ್ತು’ ಎಂದು ಲೇಖನದಲ್ಲಿ ವಿವರಿಸಲಾಗಿದೆ.

‘ಕಾಂಗ್ರೆಸ್ ಸರ್ಕಾರ ತಂದ 42ನೇ ತಿದ್ದುಪಡಿ ರಾಜಕೀಯ ತಂತ್ರಗಾರಿಕೆಯಾಗಿತ್ತೇ ಹೊರತು, ಸಂವಿಧಾನ ರಚನಾ ಸಭೆಯ ಆಶಯವಾಗಿರಲಿಲ್ಲ. ಭಾರತದ ಭವಿಷ್ಯದ ಪೀಳಿಗೆಗಳನ್ನು ಸಶಕ್ತಗೊಳಿಸಬಲ್ಲ ಪ್ರಜಾಸತ್ತಾತ್ಮಕ ಚೌಕಟ್ಟು ಕುರಿತು ಅಂಬೇಡ್ಕರ್ ಹೊಂದಿದ್ದ ದೂರದೃಷ್ಟಿಗೆ ಅನುಗುಣವಾಗಿ ಸಂವಿಧಾನ ಇರಬೇಕು ಎಂಬುದು ಹೊಸಬಾಳೆ ಅವರ ಉದ್ದೇಶವಾಗಿದೆ. ಈ ವಿಚಾರವಾಗಿ ಮುಕ್ತ ಮಾತುಕತೆ ಬಯಸಿ, ಅವರು ಈ ಹೇಳಿಕೆ ನೀಡಿದ್ದಾರೆ’ ಎಂದೂ ಹೇಳಿದೆ.

> **ಆರ್‌ಎಸ್‌ಎಸ್ ಮತ್ತು ಬಿಜೆಪಿ ಸಿದ್ಧಾಂತವು ದೇಶದ ಸಂವಿಧಾನ ಪ್ರತಿಪಾದಿಸುವ ತತ್ವಗಳಿಗೆ ಸಂಪೂರ್ಣ ವಿರುದ್ಧವಾಗಿವೆ**
> **ಕಾಂಗ್ರೆಸ್**
> (ಪಕ್ಷದ ‘ಎಕ್ಸ್’ ಖಾತೆಯಲ್ಲಿನ ಪೋಸ್ಟ್)



ಸಾಂದರ್ಭಿಕ ಚಿತ್ರ

ಪ್ರತಿಕ್ರಿಯೆ

ನಾಗ್ಪುರದಲ್ಲಿ (ಆರ್‌ಎಸ್‌ಎಸ್ ಕೇಂದ್ರ ಕಚೇರಿ) ಮುದ್ರಿತವಾದದ್ದು ಕಾರ್ಯರೂಪಕ್ಕೆ ಬರುವುದಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂದರೆ, ನೀವು ಸಂವಿಧಾನ ರಚನಾ ಸಭೆಯಲ್ಲಿ ನಡೆದ ಚರ್ಚೆಗಳನ್ನು ಓದಬೇಕು. ಸಮಾಜವಾದ ಮತ್ತು ಜಾತ್ಯತೀತ ಮೌಲ್ಯಗಳು ಸಂವಿಧಾನದ ಅವಿಭಾಜ್ಯ ಭಾಗಗಳೇ ಆಗಿವೆ. ಬಹುಶಃ ಈ ಬಗ್ಗೆ ಅವರು ಓದಿಲ್ಲ
ಮನೋಜ್‌ಕುಮಾರ್ ಝಾ, ಆರ್‌ಜೆಡಿ ಸಂಸದ

ಸಂವಿಧಾನವನ್ನು ಬುಡಮೇಲು ಮಾಡಬೇಕು ಹಾಗೂ ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡಬೇಕು ಎಂಬುದು ಆರ್‌ಎಸ್‌ಎಸ್‌ನ ಬಹುದಿನದ ಗುರಿ. ದತ್ತಾತ್ರೇಯ ಹೊಸಬಾಳೆ ಅವರ ಹೇಳಿಕೆ ಈ ಪಿತೂರಿಯನ್ನು ಬಹಿರಂಗಪಡಿಸಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳದ ಆರ್‌ಎಸ್‌ಎಸ್ ಈಗ ಸಂವಿಧಾನದಲ್ಲಿನ ಮೂಲಭೂತ ತತ್ವಗಳನ್ನು ತೆಗೆದುಹಾಕಲು ಸಲಹೆ ನೀಡುತ್ತಿದೆ.
ಸಿಪಿಎಂ ಪಾಲಿಟ್‌ಬ್ಯುರೊ

‘ಆರ್‌ಎಸ್‌ಎಸ್ ಸಂವಿಧಾನ ವಿರೋಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನ ಪೀಠಿಕೆಯಿಂದ ‘ಸಮಾಜವಾದ’ ಮತ್ತು ‘ಜಾತ್ಯತೀತ’ ಪದಗಳನ್ನು ಕಿತ್ತು ಹಾಕಬೇಕೆಂದು ಆರ್‌ಎಸ್‌ಎಸ್‌ನ ದತ್ತಾತ್ರೇಯ ಹೊಸಬಾಳೆ ಹೇಳಿಕೆಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಅಭಿಪ್ರಾಯವನ್ನು ದೇಶದ ಮುಂದಿಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.


ಸಿದ್ದರಾಮಯ್ಯ


ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಭಾರತ ಸಮಾಜವಾದ ಮತ್ತು ಜಾತ್ಯತೀತ ದೇಶ ಎಂದು ಎಲ್ಲರೂ ಅರ್ಥ ಮಾಡಿಕೊಂಡಿದ್ದ ಕಾರಣ ಸಂವಿಧಾನದ ಮೂಲಪೀಠಿಕೆಯಲ್ಲಿ ಈ ಪದಗಳನ್ನು ಆ ದಿನಗಳಲ್ಲಿ ಸೇರಿಸಿರಲಿಲ್ಲ. ನಂತರ ದಿನಗಳಲ್ಲಿ ಜಾತ್ಯತೀತತೆ ಮತ್ತು ಸಮಾಜವಾದದ ಮೇಲೆ ಆರ್‌ಎಸ್‌ಎಸ್ ಮತ್ತು ಜನಸಂಘಗಳು ದಾಳಿ ಮಾಡಲು ಶುರು ಮಾಡಿದಾಗ ಇಂದಿರಾಗಾಂಧಿಯವರು 42ನೇ ತಿದ್ದುಪಡಿ ಮೂಲಕ ಈ ಪದಗಳನ್ನು ಸೇರಿಸಿದರು ಎಂದು ಹೇಳಿದ್ದಾರೆ.

‘ಸಂವಿಧಾನವನ್ನು ಆರ್‌ಎಸ್‌ಎಸ್ ವಿರೋಧಿಸುತ್ತಿರುವುದು ಹೊಸ ಬೆಳವಣಿಗೆಯೇನಲ್ಲ. ಬಿಜೆಪಿ ಮತ್ತು ಆರೆಸ್ಸೆಸ್ ಸಂವಿಧಾನವನ್ನು ಅದರ ರಚನೆಯ ದಿನದಿಂದಲೇ ವಿರೋಧಿಸುತ್ತಾ ಬಂದಿರುವುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಅಂಬೇಡ್ಕರ್ ಅವರು ಸಂವಿಧಾನವನ್ನು ದೇಶಕ್ಕೆ ಸಮರ್ಪಿಸಿದ ನಾಲ್ಕೇ ದಿನಕ್ಕೆ ಅದನ್ನು ವಿರೋಧಿಸಿ ಆರೆಸ್ಸೆಸ್ ಮುಖವಾಣಿ ಆರ್ಗನೈಸರ್ ಪತ್ರಿಕೆ ಸಂಪಾದಕೀಯ ಬರೆದಿತ್ತು. ಅಂಬೇಡ್ಕರ್ ಅವರ ಸಂವಿಧಾನದಲ್ಲಿ ಭಾರತೀಯತೆಯಾಗಲಿ, ಪುರಾತನ ಭಾರತದ ಕಟ್ಟುಕಟ್ಟಳೆಗಳಾಗಲಿ ಇಲ್ಲ. ಇದು ಸಂವಿಧಾನದ ಕೆಟ್ಟ ವಿಚಾರ’ ಎಂದು ಹೇಳಿತ್ತು’ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಸಂವಿಧಾನದ ಬಗ್ಗೆ ಆರೆಸ್ಸೆಸ್ ಮತ್ತು ಅದರ ನಾಯಕರು ಬಹಿರಂಗವಾಗಿ ವ್ಯಕ್ತಪಡಿಸಿರುವ ಈ ಅಭಿಪ್ರಾಯವನ್ನು ಭಾರತೀಯ ಜನತಾಪಕ್ಷ ಇಲ್ಲಿಯವರೆಗೆ ತಿರಸ್ಕರಿಸಿಲ್ಲ. ಇದರ ಬದಲಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗಲೆಲ್ಲ ಒಂದೆಡೆ ಆರೆಸ್ಸೆಸ್‌ನ ನಾಯಕರು ಮತ್ತು ಇನ್ನೊಂದೆಡೆ ಬಿಜೆಪಿಯ ಕೆಳಹಂತದ ನಾಯಕರು ಸಂವಿಧಾನ ಬದಲಾವಣೆಯ ಕೂಗು ಹಾಕುತ್ತಲೇ ಬಂದಿದ್ದಾರೆ. ಬಿಜೆಪಿ ಕಳ್ಳಾಟವನ್ನು ಪ್ರಜ್ಞಾವಂತರು ಅರ್ಥ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

‘ಮುಸ್ಲಿಂ ಓಲೈಕೆಯೇ ಸಮಾಜವಾದ, ಜಾತ್ಯತೀತ’

‘ಸಮಾಜವಾದಿ ಮುಖವಾಡ ಧರಿಸಿ, ಜಾತ್ಯತೀತತೆ ಸೋಗಿನಲ್ಲಿ ಮುಸ್ಲಿಂ ಸಮುದಾಯದ ಓಲೈಕೆಯ ರಾಜಕಾರಣ ಮಾಡುತ್ತಿರುವ ನಿಮಗೆ ಸಂವಿಧಾನದ ಆಶಯ ಮತ್ತು ಮೌಲ್ಯಗಳ ಕುರಿತು ಮಾತನಾಡುವ ನೈತಿಕ ಹಕ್ಕು ಇಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.


ವಿಜಯೇಂದ್ರ

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ‘ಸಂವಿಧಾನವನ್ನು ಹತ್ಯೆ ಮಾಡಿ ಪ್ರಜಾಪ್ರಭುತ್ವವನ್ನು ಮೆಟ್ಟಿ ನಿಂತು ಸರ್ವಾಧಿಕಾರಿ ಆಡಳಿತ ನಡೆಸಿದ ಕಾಂಗ್ರೆಸ್ ತಾನು ಮಾಡಿದ ಪ್ರಜಾಪ್ರಭುತ್ವದ ಕಗ್ಗೊಲೆ ಕುರಿತು ಈವರೆಗೂ ಕ್ಷಮೆ ಕೇಳಿಲ್ಲ. ಕನಿಷ್ಠ ಪಶ್ಚಾತಾಪವನ್ನೂ ವ್ಯಕ್ತಪಡಿಸಿಲ್ಲ’ ಎಂದಿದ್ದಾರೆ.

‘ಇಂತಹ ಸಂವಿಧಾನ ವಿರೋಧಿ ಪಕ್ಷದ ನೆರಳು ಆಶ್ರಯಿಸಿ ಅಧಿಕಾರ ಅನುಭವಿಸುವ ಹಪಾಹಪಿತನದಿಂದ ನೈತಿಕತೆಯನ್ನು ಮೂಲೆಗೊತ್ತಿ, ಅಧಿಕಾರಕ್ಕೆ ಅಂಟಿ ಕುಳಿತಿರುವ ನೀವು ಯಾವ ಮುಖ ಹೊತ್ತು ಆರ್‌ಎಸ್‌ಎಸ್ ಟೀಕಿಸುತ್ತಿದ್ದೀರಿ’ ಎಂದು ವಿಜಯೇಂದ್ರ ಪ್ರಶ್ನಿಸಿದ್ದಾರೆ.

‘ಜಾತ್ಯತೀತವಾದ, ಸಮಾಜವಾದ ಎಂಬ ಪದಗಳು ನಿಮ್ಮ ಹಾಗೂ ಕಾಂಗ್ರೆಸ್ ಪಕ್ಷದ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಮತಬ್ಯಾಂಕ್ ರಾಜಕಾರಣಕ್ಕೆ ಬಳಕೆಯಾಗುತ್ತಿರುವುದು ನಾಡಿನ ಮತ್ತು ದೇಶದ ದೌರ್ಭಾಗ್ಯ. ಜಾತ್ಯತೀತ ಮತ್ತು ಸಮಾಜವಾದ ಎಂಬುದು ಡೋಂಗೀವಾದ ಎಂಬುದು ಜನರಿಗೆ ಸ್ಪಷ್ಟವಾಗಿ ಮನವರಿಕೆಯಾಗಿದೆ’ ಎಂದು ಹೇಳಿದ್ದಾರೆ.

ಕಾನೂನು ವಿದ್ಯಾರ್ಥಿನಿ ಮೇಲೆ ಅತ್ಯಾಚಾರ: ಮೂವರ ಬಂಧನ

ಕೋಲ್ಕತ್ತ (ಪಿಟಿಐ): ಇಲ್ಲಿನ ಕಾನೂನು ಕಾಲೇಜಿನ ವಿದ್ಯಾರ್ಥಿನಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಿರುವುದಾಗಿ ಕೋಲ್ಕತ್ತ ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಬಂಧಿತರಲ್ಲಿ ಇಬ್ಬರು ಅದೇ ಕಾಲೇಜಿನ ವಿದ್ಯಾರ್ಥಿಗಳಾಗಿದ್ದು, ಮತ್ತೊಬ್ಬ ಹಳೆಯ ವಿದ್ಯಾರ್ಥಿ ಎಂದು ಅಧಿಕಾರಿಗಳು ಹೇಳಿದ್ದಾರೆ. ಜೂನ್ 25ರಂದು ಸಂಜೆ ವಿದ್ಯಾರ್ಥಿನಿಯು ಕಾಲೇಜಿಗೆ ತೆರಳಿದ್ದ ಸಂದರ್ಭದಲ್ಲಿ ಆರೋಪಿಗಳು ಶಿಕ್ಷಣ ಸಂಸ್ಥೆಯಲ್ಲಿನ ಕೊಠಡಿಗೆ ಆಕೆಯನ್ನು ಕರೆದೊಯ್ದು ಅತ್ಯಾಚಾರ ಎಸಗಿದ್ದಾರೆ ಎನ್ನಲಾಗಿದೆ.

ಕಸಬ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ವಿದ್ಯಾರ್ಥಿನಿ ದೂರು ನೀಡಿದ್ದು, ಗುರುವಾರವೇ ಆರೋಪಿಗಳನ್ನು ಬಂಧಿಸಿದ್ದಾಗಿ ಪೊಲೀಸರು ಹೇಳಿದ್ದಾರೆ. ಪ್ರಕರಣದ ತನಿಖೆ ಪ್ರಾಥಮಿಕ ಹಂತದಲ್ಲಿದ್ದು, ನ್ಯಾಯಾಲಯವು ಆರೋಪಿಗಳನ್ನು 4 ದಿನಗಳ ಅವಧಿಗೆ ಪೊಲೀಸರ ವಶಕ್ಕೆ ನೀಡಿದೆ.

ಪ್ರಕರಣದ ಪ್ರಮುಖ ಆರೋಪಿಯಾಗಿರುವ ಕಾಲೇಜಿನ ಮಾಜಿ ವಿದ್ಯಾರ್ಥಿಯು ಅದೇ ಕಾಲೇಜಿನಲ್ಲಿ ಗುತ್ತಿಗೆ ಆಧಾರದಲ್ಲಿ ಬೋಧಕೇತರ ಸಿಬ್ಬಂದಿಯಾಗಿದ್ದ. ಅಲ್ಲದೇ, ಅಲಿಪೋರ್ ಪೊಲೀಸ್ ಹಾಗೂ ಸೆಷನ್ ಕೋರ್ಟ್‌ನಲ್ಲಿ ಕ್ರಿಮಿನಲ್ ವಕೀಲನಾಗಿ ಕಾರ್ಯನಿರ್ವಹಿಸುತ್ತಿದ್ದಾನೆಂದು ಕಾಲೇಜು ಮೂಲಗಳು ತಿಳಿಸಿವೆ.

ವಿದ್ಯಾರ್ಥಿನಿಗೆ ತನ್ನನ್ನು ಮದುವೆಯಾಗುವಂತೆ ಆತ ಕೇಳಿದ್ದ. ಆಕೆ ನಿರಾಕರಿಸಿದ ಕಾರಣ ಕೃತ್ಯ ಎಸಗಿದ್ದಾನೆಂದು ಮೂಲಗಳು ಹೇಳಿವೆ.

ಅತ್ಯಾಚಾರದ ವೇಳೆ ಆರೋಪಿಗಳು ಮೊಬೈಲ್‌ನಲ್ಲಿ ಕೃತ್ಯವನ್ನು ಚಿತ್ರೀಕರಿಸಿದ್ದಾರೆ ಎಂದು ಸಂತ್ರಸ್ತೆ ಆರೋಪಿಸಿದ್ದು, ಆರೋಪಿಗಳ ಮೊಬೈಲ್ ಫೋನ್‌ಗಳು ವಶಪಡಿಸಿಕೊಂಡು ಪರಿಶೀಲನೆಗೆ ಒಳಪಡಿಸಿರುವುದಾಗಿ ಪೊಲೀಸರು ಹೇಳಿದ್ದಾರೆ.

ಅತ್ಯಾಚಾರ ದೃಢಪಡಿಸಿದ ವೈದ್ಯಕೀಯ ವರದಿ: ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿರುವುದನ್ನು ವೈದ್ಯಕೀಯ ವರದಿಗಳು ದೃಢಪಡಿಸಿವೆ. ಆಕೆಯ ದೇಹದ ಮೇಲೆ ಕಚ್ಚಿರುವ ಗಾಯದ ಗುರುತು, ಉಗುರಿನ ಗುರುತು ಮೂಡಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

> **ರಾಜ್ಯದ ಕಾನೂನು ಸುವ್ಯವಸ್ಥೆಯು ಅಧೋಗತಿಗೆ ತಲುಪಿದ್ದು, ರಾಜ್ಯದಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿನಿಯರಿಗೆ ಸುರಕ್ಷತೆ ಇಲ್ಲದಂತಾಗಿದೆ**
> **ಸುಕಾಂತ ಮಜೂಂದಾರ್,** ಪಶ್ಚಿಮ ಬಂಗಾಳ ಬಿಜೆಪಿ ಘಟಕದ ಅಧ್ಯಕ್ಷ

ಕ್ಷಿಪ್ರ ತನಿಖೆ ನಡೆಯಲಿ ಮಹಿಳಾ ಆಯೋಗ

ಪ್ರಕರಣಕ್ಕೆ ಸಂಬಂಧಿಸಿದಂತೆ ಕೋಲ್ಕತ್ತ ಪೊಲೀಸ್ ಕಮಿಷನರ್ ಅವರಿಗೆ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ವಿಜಯಾ ರಹಟ್ಕರ್ ಪತ್ರ ಬರೆದಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ತ್ವರಿತವಾಗಿ ಮತ್ತು ಕಾಲಮಿತಿಯಲ್ಲಿ ತನಿಖೆ ನಡೆಸುವಂತೆ ನಿರ್ದೇಶನ ನೀಡಿದ್ದಾರೆ. ಸಂತ್ರಸ್ತೆಗೆ ವೈದ್ಯಕೀಯ, ಮಾನಸಿಕ ಹಾಗೂ ಕಾನೂನಾತ್ಮಕ ನೆರವು ನೀಡುವಂತೆಯೂ ತಿಳಿಸಿದ್ದಾರೆ.

ಜಗನ್ನಾಥ ರಥಯಾತ್ರೆಗೆ ಚಾಲನೆ

ಪುರಿ (ಪಿಟಿಐ): ಐತಿಹಾಸಿಕ ಪುರಿ ಜಗನ್ನಾಥ ದೇವಾಲಯದ ರಥಯಾತ್ರೆಗೆ ಶುಕ್ರವಾರ ಅದ್ದೂರಿ ಚಾಲನೆ ದೊರೆತಿದೆ. ಸಹಸ್ರಾರು ಭಕ್ತಾದಿಗಳು ರಥದ ಹಗ್ಗವನ್ನು ಎಳೆಯುತ್ತಾ ‘ಜೈ ಜಗನ್ನಾಥ, ಹರಿ ಬೋಲ್’ ಘೋಷಣೆಗಳನ್ನು ಮೊಳಗಿಸಿದ್ದಾರೆ.

12ನೇ ಶತಮಾನದ ಪುರಿ ದೇವಾಲಯದಿಂದ 2.6 ಕಿ.ಮೀ. ದೂರದಲ್ಲಿರುವ ಗುಂಡಿಚ ದೇಗುಲದ ಮಾರ್ಗವಾಗಿ ಜಗನ್ನಾಥ, ದೇವಿ ಸುಭದ್ರ ಹಾಗೂ ಬಲಭದ್ರನ ರಥಗಳು ಸಾಗಿವೆ. ಒಡಿಶಾ ರಾಜ್ಯಪಾಲ ಹರಿ ಬಾಬು ಕಂಬಾಂಪತಿ, ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಹಾಗೂ ಇನ್ನಿತರ ಗಣ್ಯರು ಕೂಡ ಭಾಗಿಯಾಗಿ ರಥ ಎಳೆದಿದ್ದಾರೆ.

ಪಹಂಡಿ ಪೂಜೆಯ ಬಳಿಕ ದೇವರುಗಳ ವಿಗ್ರಹಗಳನ್ನು ತಂದು ರಥದಲ್ಲಿ ಇರಿಸಿ ಮಂತ್ರೋಪಾಸನೆ ನಡೆಸಿ, ಬಳಿಕ ರಥಯಾತ್ರೆ ಆರಂಭಿಸಲಾಗಿದೆ. ಒಡಿಸ್ಸಿ ನೃತ್ಯಗಾರರು, ಸಂಗೀತ ಕಲಾವಿದರ ವಿವಿಧ ತಂಡಗಳು ಹರ್ಷದಿಂದ ರಥದ ಮುಂದೆ ಸಾಗಿದ್ದು, ನೋಡುಗರ ಕಣ್ಮನ ಸೆಳೆಯಿತು.

ಗೋವರ್ಧನ ಪೀಠದ ಶಂಕರಾಚಾರ್ಯರು, ಸ್ವಾಮಿ ನಿಶ್ಚಲಾನಂದ ಸರಸ್ವತಿ ವಿವಿಧ ಮಠಾಧೀಶರು, ಸ್ವಾಮಿಗಳು ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಬಂಗಾಳದಲ್ಲೂ ರಥಯಾತ್ರೆ: ಪಶ್ಚಿಮ ಬಂಗಾಳದ ದಿಘಾ ಪ್ರದೇಶದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಜಗನ್ನಾಥ ದೇಗುಲದ ಮೊದಲ ರಥಯಾತ್ರೆಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶುಕ್ರವಾರ ಚಾಲನೆ ನೀಡಿದರು.


ಪುರಿ ಜಗನ್ನಾಥ ರಥಯಾತ್ರೆಯಲ್ಲಿ ಜಗನ್ನಾಥ, ದೇವಿ ಸುಭದ್ರ ಹಾಗೂ ಬಲಭದ್ರನ ರಥಗಳನ್ನು ಭಕ್ತರು ಎಳೆದರು ಪಿಟಿಐ ಚಿತ್ರ

‘ಸಂವಿಧಾನದ ಮೇಲಿನ ದಾಳಿ...

ಒಂದನೇ ಪುಟದಿಂದ...

ಗುರುವಾರ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ದತ್ತಾತ್ರೇಯ ಹೊಸಬಾಳೆ, ‘ಸಂವಿಧಾನದ ಪ್ರಸ್ತಾವನೆಯಿಂದ ‘ಸಮಾಜವಾದ’ ಮತ್ತು ‘ಜಾತ್ಯತೀತ’ ಪದಗಳನ್ನು ತೆಗೆಯಬೇಕು. ತುರ್ತುಪರಿಸ್ಥಿತಿ ಅವಧಿಯಲ್ಲಿ ಆಗಿನ ಕಾಂಗ್ರೆಸ್ ಸರ್ಕಾರ ಈ ಪದಗಳನ್ನು ಸೇರ್ಪಡೆಗೊಳಿಸಿತ್ತು’ ಎಂದು ಹೇಳಿದ್ದರು.

ಕಾಂಗ್ರೆಸ್ ಟೀಕೆ: ‘ದತ್ತಾತ್ರೇಯ ಹೊಸಬಾಳೆ ಅವರ ಈ ಹೇಳಿಕೆ ಕೇವಲ ಸಲಹೆಯಲ್ಲ, ಅದು ಸಂವಿಧಾನದ ಆತ್ಮದ ಮೇಲಿನ ಉದ್ದೇಶಪೂರ್ವಕ ದಾಳಿ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಟೀಕಿಸಿದ್ದಾರೆ.

‘ಸಂವಿಧಾನವನ್ನು ಮರುರಚನೆ ಮಾಡಬೇಕು ಎನ್ನುವ ತಮ್ಮ ಉದ್ದೇಶವನ್ನು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ನಾಯಕರು ಕಳೆದ ವರ್ಷ ನಡೆದ ಲೋಕಸಭಾ ಚುನಾವಣೆ ವೇಳೆ ಬಹಿರಂಗವಾಗಿಯೇ ವ್ಯಕ್ತಪಡಿಸಿದ್ದರು. ಈ ಉದ್ದೇಶ ಈಡೇರಿಕೆಗೆ 400ಕ್ಕೂ ಅಧಿಕ ಸ್ಥಾನಗಳಲ್ಲಿ ಗೆಲ್ಲಬೇಕು ಎಂದೂ ಹೇಳಿದ್ದರು.’

‘ಬಿಜೆಪಿಯ ಕಾರ್ಯಸೂಚಿಯನ್ನು ಅರ್ಥ ಮಾಡಿಕೊಂಡ ಭಾರತೀಯರು ತಕ್ಕ ಉತ್ತರವನ್ನೇ ನೀಡಿದರು. ಈಗ, ಅವರು ತಮ್ಮ ಹಳೇ ಬೇಡಿಕೆಯನ್ನೇ ಮತ್ತೆ ಮುಂದಿಟ್ಟಿದ್ದಾರೆ. ಆದರೆ, ಸಂವಿಧಾನವನ್ನು ಬುಡಮೇಲು ಮಾಡುವಂತಹ ಯಾವುದೇ ಪ್ರಯತ್ನದ ವಿರುದ್ಧ ಕಾಂಗ್ರೆಸ್ ಪಕ್ಷ ಅಭೇದ್ಯ ಗೋಡೆಯಾಗಿ ನಿಲ್ಲಲಿದೆ. ಜೈ ಸಂವಿಧಾನ’ ಎಂದು ಜೈರಾಮ್ ರಮೇಶ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಆರ್‌ಎಸ್‌ಎಸ್ ಭಾರತದ ಸಂವಿಧಾನವನ್ನು ಎಂದಿಗೂ ಒಪ್ಪಿಕೊಂಡಿಲ್ಲ. ಸಂವಿಧಾನ ರಚನೆಯಲ್ಲಿ ಶ್ರಮಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್, ನೆಹರೂ ಹಾಗೂ ಇತರರ ಮೇಲೆ 1949ರ ನವೆಂಬರ್ 30ರಿಂದಲೂ ಆರ್‌ಎಸ್‌ಎಸ್ ದಾಳಿ ನಡೆಸುತ್ತಲೇ ಇದೆ’ ಎಂದು ಟೀಕಿಸಿದ್ದಾರೆ.

‘ಜಾತ್ಯತೀತ ಮತ್ತು ಸಮಾಜವಾದ ಪದಗಳನ್ನು ಸಂವಿಧಾನದ ಪೀಠಿಕೆಯಿಂದ ತೆಗೆಯಬೇಕು ಎಂಬ ವಿಚಾರ ಕುರಿತು ಕಳೆದ ವರ್ಷ ನವೆಂಬರ್ 25ರಂದು ಸುಪ್ರೀಂ ಕೋರ್ಟ್ ಸ್ಪಷ್ಟ ತೀರ್ಪು ನೀಡಿದೆ’ ಎಂದಿರುವ ಅವರು, ಸುಪ್ರೀಂ ಕೋರ್ಟ್ ತೀರ್ಪಿನ ಪ್ರತಿಯನ್ನು ಕೂಡ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದು, ‘ಹೊಸಬಾಳೆಯವರು ಈ ತೀರ್ಪನ್ನು ಓದಲಿ’ ಎಂದಿದ್ದಾರೆ.

ಚಿಟಿಕೆ ಸುದ್ದಿ

ಡೋಪಿಂಗ್: ಟ್ವಿಂಕಲ್ ಅಮಾನತು

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರೀಡಾಕೂಟದ ಪದಕವಿಜೇತ ಅಥ್ಲೀಟ್ ಟ್ವಿಂಕಲ್ ಚೌಧರಿ ಅವರನ್ನು ಉದ್ದೀಪನ ಮದ್ದು ಸೇವನೆ ಪ್ರಕರಣದಲ್ಲಿ ತಾತ್ಕಾಲಿಕ ಅಮಾನತು ಮಾಡಲಾಗಿದೆ.



ಮಧ್ಯಮ ಅಂತರದ ಓಟಗಾರ್ತಿ, 28 ವರ್ಷದ ಟ್ವಿಂಕಲ್ ಅವರು ಈಚೆಗೆ ಉತ್ತರಾಖಂಡದಲ್ಲಿ ನಡೆದಿದ್ದ ಕೂಟದಲ್ಲಿ 4X400 ಮೀ ಮಹಿಳೆಯರ ರಿಲೆಯಲ್ಲಿ ಚಿನ್ನ ಗೆದ್ದಿದ್ದ ತಂಡವನ್ನು ಪ್ರತಿನಿಧಿಸಿದ್ದರು. ಮಹಿಳೆಯರ 800 ಮೀ ಓಟದಲ್ಲಿ ಬೆಳ್ಳಿ ಮತ್ತು 4X400 ಮೀ ಮಿಶ್ರ ರಿಲೆಯಲ್ಲಿ ಅವರು ಕಂಚಿನ ಪದಕ ಗಳಿಸಿದ್ದರು. ಡೋಪಿಂಗ್ ಪರೀಕ್ಷೆಯಲ್ಲಿ ಅವರು ನಿಷೇಧಿತ ಅನಾಬೋಲಿಕ್ ಸ್ಟೆರಾಯ್ಡ್ ಮೆಥೈಲ್‌ಟೆಸ್ಟೊಸ್ಟಿರಾನ್ ಸೇವನೆ ಮಾಡಿರುವುದು ಪತ್ತೆಯಾಗಿದೆ. ಅದರಿಂದಾಗಿ ಅವರನ್ನು ತಾತ್ಕಾಲಿಕವಾಗಿ ಅಮಾನತು ಮಾಡಲಾಗಿದೆ ಎಂದು ಅಥ್ಲೆಟಿಕ್ಸ್ ಇಂಟಿಗ್ರಿಟಿ ಯೂನಿಟ್ ತಿಳಿಸಿದೆ.

ಡಬ್ಲ್ಯುಪಿಎಲ್: ಯುಪಿ ಕೋಚ್ ಲೂಯಿಸ್ ನಿರ್ಗಮನ

ನವದೆಹಲಿ (ಪಿಟಿಐ): ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಯುಪಿ ವಾರಿಯರ್ಸ್ ತಂಡದ ಮುಖ್ಯ ಕೋಚ್ ಜಾನ್ ಲೂಯಿಸ್ ಅವರು ಮೂರು ವರ್ಷದ ಕಾರ್ಯಾವಧಿ ಪೂರ್ಣಗೊಳಿಸಿದರು. ಇದರೊಂದಿಗೆ ಅವರು ತಂಡದಿಂದ ನಿರ್ಗಮಿಸಿದ್ದಾರೆ. ಕಳೆದ ಋತುವಿನ ಟೂರ್ನಿಯಲ್ಲಿ ತಂಡವು ಪಾಯಿಂಟ್ ಪಟ್ಟಿಯ ಕೊನೆಯ ಸ್ಥಾನದಲ್ಲಿತ್ತು.



ವಿಶ್ವ ಪೊಲೀಸ್, ಅಗ್ನಿಶಾಮಕ ಕೂಟಕ್ಕೆ ಗುಜರಾತ್ ಆತಿಥ್ಯ

ಅಹಮದಾಬಾದ್ (ಪಿಟಿಐ): 2029ರ ವಿಶ್ವ ಪೊಲೀಸ್ ಮತ್ತು ಅಗ್ನಿಶಾಮಕ ಕ್ರೀಡಾಕೂಟ (ಡಬ್ಲ್ಯುಪಿಎಫ್‌ಜಿ)ವನ್ನು ಗುಜರಾತ್‌ನ ಅಹಮದಾಬಾದ್, ಏಕ್ತಾ ನಗರ ಮತ್ತು ಗಾಂಧಿನಗರದಲ್ಲಿ ಆಯೋಜಿಸಲಾಗುತ್ತದೆ. ಒಟ್ಟು 10 ಸಾವಿರ ಅಥ್ಲೀಟ್‌ಗಳು ಸ್ಪರ್ಧಿಸಲಿದ್ದಾರೆ.

ಪೊಲೀಸ್, ಫೈರ್ (ಅಗ್ನಿಶಾಮಕ), ಕಸ್ಟಮ್ಸ್ ಮತ್ತು ಇನ್ನೂ ಕೆಲವು ಇಲಾಖೆಗಳ ಅಥ್ಲೀಟ್‌ಗಳು ಇದರಲ್ಲಿ ಭಾಗವಹಿಸುವರು. ಒಟ್ಟು 70 ದೇಶಗಳ ಸ್ಪರ್ಧಿಗಳು ಕಣಕ್ಕಿಳಿಯುವರು.

ಶುಭಾರಂಭದ ನಿರೀಕ್ಷೆಯಲ್ಲಿ ಭಾರತ

ನಾಟಿಂಗ್‌ಹ್ಯಾಮ್ (ಪಿಟಿಐ): ಭಾರತ ಮತ್ತು ಇಂಗ್ಲೆಂಡ್ ನಡುವಣ ಟಿ20 ಮಹಿಳೆಯರ ಕ್ರಿಕೆಟ್ ಸರಣಿಯ ಮೊದಲ ಹಣಾಹಣಿಯು ಶನಿವಾರ ನಡೆಯಲಿದೆ.

ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಟೂರ್ನಿಯ ಪೂರ್ವಭಾವಿ ಅಭ್ಯಾಸಕ್ಕೆ ಈ ಸರಣಿಯು ಉಭಯ ತಂಡಗಳಿಗೆ ಮುನ್ನುಡಿಯಾಗಲಿದೆ. ಹೋದ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಗುಂಪು ಹಂತದಲ್ಲಿಯೇ ಸೋತು ನಿರ್ಗಮಿಸಿತ್ತು. ಅದರಿಂದಾಗಿ ಮುಂದಿನ ಟೂರ್ನಿಗೆ ಇನ್ನೂ ಒಂದು ವರ್ಷ ಬಾಕಿಯಿದ್ದಾಗಲೇ ತಯಾರಿ ಆರಂಭಿಸಲಾಗುತ್ತಿದ್ದು, ಅನುಭವಿ ಹಾಗೂ ಯುವ ಆಟಗಾರ್ತಿಯರು ಇರುವ ತಂಡವನ್ನು ಕಣಕ್ಕಿಳಿಸಲಾಗುತ್ತಿದೆ.

ಉಪನಾಯಕಿ ಸ್ಮೃತಿ ಮಂದಾನ ಅವರು ಶೆಫಾಲಿ ವರ್ಮಾ ಅವರೊಂದಿಗೆ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತವಾಗಿದೆ. ನಾಯಕಿ ಹರ್ಮನ್‌ಪ್ರೀತ್ ಕೌರ್, ವಿಕೆಟ್‌ಕೀಪರ್ ಯಷ್ಟಿಕಾ ಭಾಟಿಯಾ, ಆಲ್‌ರೌಂಡರ್ ದೀಪ್ತಿ ಗೌಡ ಸ್ನೇಹಾ ರಾಣಾ, ರಿಚಾ ಘೋಷ್ ಅವರು ಅನುಭವಿ ಆಟಗಾರ್ತಿಯರಾಗಿದ್ದಾರೆ. ಕ್ರಾಂತಿ ಗೌಡ, ಶ್ರೀಚರಣಿ ಮತ್ತು ಸಯಾಲಿ ಸತಘರೆ ತಂಡದಲ್ಲಿನ ಹೊಸ ಪ್ರತಿಭೆಗಳು.

ಈ ವರ್ಷ ಭಾರತ ತಂಡವು ಆಡುತ್ತಿರುವ ಮೊದಲ ಟಿ20 ಪಂದ್ಯವೂ ಇದಾಗಿದೆ. ಸ್ಪಿನ್ ಆಲ್‌ರೌಂಡರ್ ಸ್ನೇಹಾ ರಾಣಾ ಮತ್ತು ಮಧ್ಯಮವೇಗಿ ಅಮನ್ಜೋತ್ ಕೌರ್ ಅವರ ಮೇಲೆ ಆಯ್ಕೆಗಾರರು ನಿಗಾ ಇಟ್ಟಿದ್ದಾರೆ. ಏಕೆಂದರೆ ಈ ಸರಣಿಯಲ್ಲಿ ಬೌಲರ್ ರೇಣುಕಾ ಸಿಂಗ್ ಮತ್ತು ಪೂಜಾ ವಸ್ತ್ರಕರ್ ಅವರು ಆಡುತ್ತಿಲ್ಲ. ಗಾಯದಿಂದಾಗಿ ಅವರು ವಿಶ್ರಾಂತಿಯಲ್ಲಿದ್ದಾರೆ. ಅವರ ಗೈರಿನಲ್ಲಿ ಮಿಂಚುವ ಅವಕಾಶ ಹೊಸಬರಿಗೆ ಇದೆ.


ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ

ಆತಿಥೇಯ ತಂಡದಲ್ಲಿ ಅನುಭವಿ ಆಟಗಾರ್ತಿಯರಾದ ಎಮಿ ಜೋನ್ಸ್, ಟ್ಯಾಮಿ ಬೆಮೌಂಟ್, ಡ್ಯಾನಿ ವೈಟ್ ಹಾಜ್ ಮತ್ತು ಸೋಫಿ ಎಕ್ಲೆಸ್ಟೋನ್ ಅವರಿದ್ದಾರೆ. ಯುವ ಆಟಗಾರ್ತಿಯರಾದ ಐಸಿ ವಾಂಗ್, ಅಲೈಸ್ ಕ್ಯಾಪ್ಸಿ ಮತ್ತು ಸೋಫಿ ಡಂಕ್ಲಿ ಅವರು ತಮ್ಮ ಹೆಜ್ಜೆಗುರುತು ಮೂಡಿಸಲು ಉತ್ಸುಕರಾಗಿದ್ದಾರೆ. ಆದ್ದರಿಂದ ಹರ್ಮನ್‌ಪ್ರೀತ್ ಕೌರ್ ನಾಯಕತ್ವ ಭಾರತ ತಂಡಕ್ಕೆ ಕಠಿಣ ಸವಾಲು ಎದುರಾಗುವ ಸಾಧ್ಯತೆ ಹೆಚ್ಚು.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ವೈಭವ್, ಅಭಿಗ್ಯಾನ್ ಆಟಕ್ಕೆ ಒಲಿದ ಜಯ

ಹೊವೆ (ಪಿಟಿಐ): ‘ಬಾಲಪ್ರತಿಭೆ’ ವೈಭವ್ ಸೂರ್ಯವಂಶಿ ಮತ್ತು ಅಭಿಗ್ಯಾನ್ ಕುಂದು ಅವರ ಅಮೋಘ ಆಟದ ಬಲದಿಂದ ಭಾರತ 19 ವರ್ಷದೊಳಗಿನವರ ತಂಡವು ಇಂಗ್ಲೆಂಡ್ 19 ವರ್ಷದೊಳಗಿನವರ ತಂಡದ ಎದುರಿನ ಏಕದಿನ ಪಂದ್ಯದಲ್ಲಿ ಜಯಿಸಿತು. ಐದು ಪಂದ್ಯಗಳ ಯೂತ್ ಸರಣಿಯಲ್ಲಿ 1–0 ಮುನ್ನಡೆ ಪಡೆಯಿತು.

ಶುಕ್ರವಾರ ಇಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ತಂಡವು ರಾಕಿ ಫ್ಲಿಂಟಾಫ್ (56; 90ಎ, 4X3, 6X3) ಅವರ ಅರ್ಧಶತಕದ ಬಲದಿಂದ 42.2 ಓವರ್‌ಗಳಲ್ಲಿ 174 ರನ್ ಗಳಿಸಿತು. ಆರಂಭಿಕ ಬ್ಯಾಟರ್ ವೈಭವ್ (48; 19ಎ, 4X3, 6X5) ಮತ್ತು ಅಭಿಗ್ಯಾನ್ ಕುಂದು (ಅಜೇಯ 45; 34ಎ, 4X4, 6X1) ಅವರ ಚೆಂದದ ಬ್ಯಾಟಿಂಗ್‌ನಿಂದಾಗಿ, ಭಾರತ ತಂಡವು 24 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 178 ರನ್ ಗಳಿಸಿ 6 ವಿಕೆಟ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 42.2 ಓವರ್‌ಗಳಲ್ಲಿ 174 (ರಾಕಿ ಫ್ಲಿಂಟಾಫ್ 56, ಇಸಾಕ್ ಮೊಹಮ್ಮದ್ 42, ಕನಿಷ್ಕ ಚೌಹಾಣ್ 20ಕ್ಕೆ3, ಮೊಹಮ್ಮದ್ ಇನಾನ್ 37ಕ್ಕೆ2, ಆರ್. ಅಂಬರೀಶ್ 24ಕ್ಕೆ2) ಭಾರತ: 24 ಓವರ್‌ಗಳಲ್ಲಿ 4ಕ್ಕೆ178 (ವೈಭವ್ ಸೂರ್ಯವಂಶಿ 48, ಅಭಿಗ್ಯಾನ್ ಕುಂದು ಔಟಾಗದೇ 45)
ಫಲಿತಾಂಶ: ಭಾರತಕ್ಕೆ 6 ವಿಕೆಟ್ ಜಯ.

ಇಂಡಿಯನ್ ಓಪನ್ ಅಥ್ಲೆಟಿಕ್ ಕೂಟ ಇಂದು

ತೇಜಸ್ವಿನ್, ತಜಿಂದರ್ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಕೆಲವು ಪ್ರಮುಖ ಅಥ್ಲೀಟುಗಳು ನಗರದ ಶ್ರೀಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ಇಂಡಿಯನ್ ಓಪನ್ ಅಥ್ಲೆಟಿಕ್ ಕೂಟದಲ್ಲಿ ತಮ್ಮ ಸಾಮರ್ಥ್ಯ ಪಣಕ್ಕೆ ಒಡ್ಡಲಿದ್ದಾರೆ.

ಇದು ಈ ವರ್ಷದ ಐದನೇ ಓಪನ್ ಅಥ್ಲೆಟಿಕ್ ಕೂಟವಾಗಿದೆ. ಏಪ್ರಿಲ್‌ನಲ್ಲಿ ಪಂಜಾಬಿನ ಸಂಗ್ರೂರ್, ಗುಜರಾತ್‌ನ ನಡಿಯಾಡ್, ಜಾರ್ಖಂಡ್‌ನ ರಾಂಚಿ ಮತ್ತು ತಮಿಳುನಾಡಿನ ಚೆನ್ನೈನಲ್ಲಿ ಮೊದಲ ನಾಲ್ಕು ಕೂಟಗಳು ನಡೆದಿದ್ದವು. ಭಾರತ ಅಥ್ಲೆಟಿಕ್ ಫೆಡರೇಷನ್ ಕ್ಯಾಲೆಂಡರ್‌ನಲ್ಲಿ ಒಟ್ಟು ಎಂಟು ಓಪನ್ ರಾಷ್ಟ್ರೀಯ ಕೂಟಗಳು ನಿಗದಿಯಾಗಿವೆ.

ಷಾಟ್‌ಪಟ್‌ನಲ್ಲಿ ಒಲಿಂಪಿಯನ್ ತಜಿಂದರ್‌ಪಾಲ್ ಸಿಂಗ್ ತೂರ್ ಅವರು ಈ ಕೂಟದಲ್ಲಿ ಪಾಲ್ಗೊಳ್ಳುವುದನ್ನು ಖಚಿತಪಡಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ದಾಖಲೆ ಸುಧಾರಿಸುತ್ತ ಬಂದಿರುವ ಮಧ್ಯಮ ಅಂತರದ ಓಟಗಾರ ಮೊಹಮ್ಮದ್ ಅಫ್ಸಲ್ ಅವರು ಪುರುಷರ 800 ಮೀ. ಓಟದ ಪ್ರಮುಖ ಆಕರ್ಷಣೆಯಾಗಿದ್ದಾರೆ.

2 ಸ್ಪರ್ಧೆಗಳಲ್ಲಿ ತೇಜಸ್ವಿನ್: ಕೆಲ ಸಮಯದಿಂದ ಡೆಕಾಥ್ಲಾನ್‌ನಲ್ಲಿ ಸ್ಪರ್ಧಿಸುತ್ತಿರುವ ತೇಜಸ್ವಿನ್ ಶಂಕರ್ ಇಲ್ಲಿ ತಮ್ಮ ನೆಚ್ಚಿನ ಸ್ಪರ್ಧೆಯಾದ ಹೈಜಂಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ. ಅವರು ದಕ್ಷಿಣ ಕೊರಿಯಾದ ಗುಮಿಯಲ್ಲಿ ಕಳೆದ ತಿಂಗಳು ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನ ಡೆಕಾಥ್ಲಾನ್‌ನಲ್ಲಿ ಬೆಳ್ಳಿ ಗೆದ್ದಿದ್ದರು.


ತಜಿಂದರ್‌ಪಾಲ್ ಸಿಂಗ್ ತೂರ್

ಹೈಜಂಪ್‌ನಲ್ಲಿ ರಾಷ್ಟ್ರೀಯ ದಾಖಲೆ (2.29 ಮೀ.) ಹೊಂದಿರುವ 26 ವರ್ಷ ವಯಸ್ಸಿನ ತೇಜಸ್ವಿನ್ ಈ ಕೂಟದಲ್ಲಿ ಜೆಎಸ್‌ಡಬ್ಲ್ಯು ತಂಡವನ್ನು ಪ್ರತಿನಿಧಿಸಲಿದ್ದಾರೆ. ಅವರಿಗೆ ಸರ್ವೇಶ್ ಅನಿಲ್ ಕುಶಾರೆ ಅವರಿಂದ ಪೈಪೋಟಿ ಎದುರಾಗಬಹುದು. ಮಹಾರಾಷ್ಟ್ರದ ಸರ್ವೇಶ್, ಕೊಚ್ಚಿಯಲ್ಲಿ ನಡೆದ 28ನೇ ರಾಷ್ಟ್ರೀಯ ಫೆಡರೇಷನ್ ಸೀನಿಯರ್ ಕೂಟದಲ್ಲಿ 2.26 ಮೀ. ಜಿಗಿದು ರಾಷ್ಟ್ರೀಯ ದಾಖಲೆ ಸಮೀಪಕ್ಕೆ ಬಂದಿದ್ದರು.

ಅಮೆರಿಕದಲ್ಲಿ ನೆಲೆಸಿರುವ ತೇಜಸ್ವಿನ್ ಅವರು ಪುರುಷರ 110 ಮೀ. ಹರ್ಡಲ್ಸ್‌ನಲ್ಲೂ ಸ್ಪರ್ಧಿಸಲಿದ್ದಾರೆ.

ಮಹಿಳಾ ವಿಭಾಗದಲ್ಲಿ ಆರ್.ವಿದ್ಯಾ ರಾಮರಾಜ್ 400 ಮೀ. ಹರ್ಡಲ್ಸ್ ಓಟ ಗೆಲ್ಲುವ ನೆಚ್ಚಿನ ಸ್ಪರ್ಧಿ ಎನಿಸಿದ್ದಾರೆ. ಅವರು ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು.

ಇನ್ನು, ಕರ್ನಾಟಕದ 27 ವರ್ಷ ವಯಸ್ಸಿನ ಎಸ್.ಎಸ್.ಸ್ನೇಹಾ 100 ಮೀ. ಓಟದಲ್ಲಿ ಪದಕಕ್ಕೆ ಯತ್ನಿಸಲಿದ್ದಾರೆ. ಅವರ ಜೊತೆಗೆ ಆರ್ಯನ್ ಮನೋಜ್ (100 ಮೀ. ಓಟ) ಮತ್ತು ಅಭಿನ್ ಬಿ. ದೇವಾಡಿಗ (200 ಮೀ. ಓಟ) ಅವರೂ ತವರಿನ ಪ್ರೇಕ್ಷಕರ ಮುಂದೆ ಉತ್ತಮ ಪ್ರದರ್ಶನ ನೀಡುವ ತವಕದಲ್ಲಿದ್ದಾರೆ. ರಾಜ್ಯ ಸೀನಿಯರ್ ಕೂಟದಲ್ಲಿ ಆರ್ಯನ್ ಮತ್ತು ಅಭಿನ್ ತಮ್ಮ ಸ್ಪರ್ಧೆಗಳಲ್ಲಿ ಅಗ್ರಸ್ಥಾನ ಪಡೆದಿದ್ದರು.

ಮಹಿಳೆಯರ 100 ಮೀ. ಓಟದಲ್ಲಿ ಸ್ನೇಹಾ ಅಲ್ಲದೇ, ತೆಲಂಗಾಣದ ನಿತ್ಯಾ ಗಂಧೆ, ಸ್ಥಳೀಯರಾದ ವಿ.ಸುಧೀಕ್ಷಾ, ದಾನೇಶ್ವರಿ ಎ.ಟಿ. ಅವರೂ ಕಣದಲ್ಲಿದ್ದಾರೆ.

ಟ್ರಿಪಲ್‌ಜಂಪ್‌ನಲ್ಲಿ ಜೆಸ್ಸಿ ಸಂದೇಶ್ ಅವರೂ ಪದಕದ ಭರವಸೆಯಾಗಿದ್ದಾರೆ.

ಪ್ರಜ್ಞಾನಂದ ದೇಶದ ಅಗ್ರ ಆಟಗಾರ

ತಾಷ್ಕೆಂಟ್ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಶುಕ್ರವಾರ ಉಜ್‌ಚೆಸ್ ಕಪ್ ಮಾಸ್ಟರ್ಸ್ ಟೂರ್ನಿಯನ್ನು ಗೆದ್ದುಕೊಂಡರು. ಅವರು ಲೈವ್ ರೇಟಿಂಗ್‌ನಲ್ಲಿ ದೇಶದ ಅಗ್ರಮಾನ್ಯ ಆಟಗಾರ ಎಂಬ ಗೌರವದ ಜೊತೆಗೆ ಮೊದಲ ಬಾರಿ ವಿಶ್ವ ಕ್ರಮಾಂಕದಲ್ಲಿ ಜೀವನಶ್ರೇಷ್ಠ ನಾಲ್ಕನೇ ಸ್ಥಾನಕ್ಕೆ ಏರಿದರು.



ಈ ಪ್ರತಿಭಾವಂತ ಆಟಗಾರನ ಲೈವ್ ರೇಟಿಂಗ್ ಈಗ 2778.3 ಆಗಿದ್ದು ಸದ್ಯ ವಿಶ್ವದ ನಾಲ್ಕನೇ ಕ್ರಮಾಂಕದಲ್ಲಿದ್ದಾರೆ. ಲೈವ್ ರೇಟಿಂಗ್ ಆಟಗಾರನ ಪ್ರದರ್ಶನ ಮಟ್ಟದ ಮೇಲೆ ನಿಗದಿಯಾಗಿರುತ್ತದೆ.

19 ವರ್ಷದ ಪ್ರಜ್ಞಾನಂದ, ವಿಶ್ವ ಚಾಂಪಿಯನ್, ಡಿ.ಗುಕೇಶ್ (2776.6) ಮತ್ತು ಅರ್ಜುನ್ ಇರಿಗೇಶಿ (2775.7) ಅವರನ್ನು ಹಿಂದೆ ಹಾಕಿದರು. ಇರಿಗೇಶಿ ಈ ಮೊದಲು ದೇಶದ ಅಗ್ರ ಆಟಗಾರ ಎನಿಸಿದ್ದರು.

ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ (2839) ಅಗ್ರಸ್ಥಾನದಲ್ಲಿದ್ದರೆ, ಹಿಕಾರು ನಕಾಮುರಾ (2807) ಮತ್ತು ಫ್ಯಾಬಿಯಾನೊ ಕರುವಾನ (2784.2) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.



ಪ್ರಶಸ್ತಿ ಜಯಿಸಿದ ತನಿಷ್ಕಾ ಕಪಿಲ್ ಕಾಲಭೈರವ, ಅಥರ್ವ ನವರಂಗೆ

ಟಿಟಿ: ತನಿಷ್ಕಾ, ಅಥರ್ವಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಥರ್ವ ನವರಂಗೆ ಹಾಗೂ ತನಿಷ್ಕಾ ಕಪಿಲ್ ಕಾಲಭೈರವ ಅವರು ಕರ್ನಾಟಕ ಸರ್ಕಾರದ ಸಚಿವಾಲಯ (ಕೆಜಿಎಸ್) ಕ್ಲಬ್ ಆಯೋಜಿಸಿರುವ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 17 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದರು.

ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ, ಅಥರ್ವ 11–9, 6–11, 11–6, 11–2ರಿಂದ ಆರ್ಯ ಎ. ಜೈನ್ ಅವರನ್ನು ಸೋಲಿಸಿದರು. ಸೆಮಿಫೈನಲ್ ಪಂದ್ಯಗಳಲ್ಲಿ ಆರ್ಯ 11–7, 11–8, 11–4ರಿಂದ ಗೌರವ್ ಗೌಡ ವಿರುದ್ಧ; ಅಥರ್ವ 11–7, 8–11, 11–7, 11–6ರಿಂದ ಆರ್ಣವ್ ಎನ್. ವಿರುದ್ಧ ಗೆಲುವು ಪಡೆದಿದ್ದರು.

ಬಾಲಕಿಯರ ಫೈನಲ್‌ನಲ್ಲಿ ತನಿಷ್ಕಾ 8–11, 11–4, 11–4, 11–5ರಿಂದ ಹಿಮಾಂಶಿ ಚೌಧರಿ ಅವರನ್ನು ಮಣಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಹಿಮಾಂಶಿ 11–5, 11–3, 11–2ರಿಂದ ಪ್ರೇಕ್ಷಾ ಟಿ. ತಿಲಾವತ್ ವಿರುದ್ಧ; ತನಿಷ್ಕಾ 11–8, 11–7, 11–8ರಿಂದ ಶಿವಾನಿ ಮಹೇಂದ್ರನ್ ವಿರುದ್ಧ ಜಯಿಸಿದ್ದರು.

ಸೋಮವಾರದಿಂದ ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್ • ಸೆಮೀಸ್‌ನಲ್ಲಿ ಸಿನ್ನರ್‌ಗೆ ಜೊಕೊವಿಚ್ ಸವಾಲು?

ಅಲ್ಕರಾಜ್‌ಗೆ ಫಾಗ್ನಿನಿ ಮೊದಲ ಎದುರಾಳಿ

ಲಂಡನ್ (ಎಎಫ್‌ಪಿ): ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು ಮೊದಲ ಸುತ್ತಿನಲ್ಲಿ ಫ್ಯಾಬಿಯೊ ಫಾಗ್ನಿನಿ ಅವರನ್ನು ಎದುರಿಸುವ ಮೂಲಕ ವಿಂಬಲ್ಡನ್ ಪುರುಷರ ಸಿಂಗಲ್ಸ್ ಪ್ರಶಸ್ತಿ ಉಳಿಸಿಕೊಳ್ಳುವ ಅಭಿಯಾನ ಆರಂಭಿಸಲಿದ್ದಾರೆ.

ಸೋಮವಾರ ಆರಂಭವಾಗುವ ಈ ಪ್ರತಿಷ್ಠಿತ ಹುಲ್ಲುಹಾಸಿನ ಗ್ರ್ಯಾನ್‌ಸ್ಲಾಮ್ ಟೂರ್ನಿಗೆ ಶುಕ್ರವಾರ ಡ್ರಾ ಎತ್ತಲಾಯಿತು. ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರಿಗೆ ಸೆಮಿಫೈನಲ್‌ನಲ್ಲಿ ನೊವಾಕ್ ಜೊಕೊವಿಚ್ ಸಂಭವನೀಯ ಎದುರಾಳಿ ಆಗಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಹಾಲಿ ಚಾಂಪಿಯನ್ ಬಾರ್ಬೊರಾ ಕ್ರಾಚಿಕೋವಾ ಅವರು ಸೆಂಟರ್ ಕೋರ್ಟ್‌ನಲ್ಲಿ ನಡೆಯುವ ಮೊದಲ ಸುತ್ತಿನ ಪಂದ್ಯದಲ್ಲಿ ಫಿಲಿಪ್ಪೀನ್ಸ್‌ನ ಉದಯೋನ್ಮುಖ ತಾರೆ ಅಲೆಕ್ಸಾಂಡರ್ ಇಯಾಲಾ ಅವರನ್ನು ಎದುರಿಸಲಿದ್ದಾರೆ. ತೊಡೆಯ ನೋವಿನಿಂದ ಬಳಲುತ್ತಿರುವ ಬಾರ್ಬೊರಾ ಆಡುವುದು ಖಚಿತವಾಗಿಲ್ಲ.


ಕಾರ್ಲೋಸ್ ಅಲ್ಕರಾಜ್

22 ವರ್ಷ ವಯಸ್ಸಿನ ಅಲ್ಕರಾಜ್ ಅವರು ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ನಡೆದ ಈ ಹಿಂದಿನ ಎರಡು ಫೈನಲ್‌ಗಳಲ್ಲಿ ಜೊಕೊವಿಚ್ ಅವರನ್ನು ಸೋಲಿಸಿದ್ದಾರೆ. ಇಲ್ಲಿ ಸತತ 18 ಪಂದ್ಯಗಳಲ್ಲಿ ಗೆದ್ದಿದ್ದಾರೆ.

ಓಪನ್ ಯುಗ (1968) ಆರಂಭವಾದ ಮೇಲೆ ಕನಿಷ್ಠ ಸತತ ಮೂರು ಪ್ರಶಸ್ತಿಗಳನ್ನು ಗೆದ್ದ ಐದನೇ ಆಟಗಾರ ಎನಿಸುವ ಗುರಿ ಅಲ್ಕರಾಜ್ ಅವರದು. ಬ್ಯೋನ್ ಬೋರ್ಗ್ (ಸ್ವೀಡನ್), ಪೀಟ್ ಸಾಂಪ್ರಸ್ (ಅಮೆರಿಕ), ರೋಜರ್ ಫೆಡರರ್ (ಸ್ವಿಜರ್ಲೆಂಡ್) ಮತ್ತು ನೊವಾಕ್ ಜೊಕೊವಿಚ್ (ಸರ್ಬಿಯಾ) ಮೊದಲ ನಾಲ್ವರು.


ನೊವಾಕ್ ಜೊಕೊವಿಚ್

ಸ್ಪೇನ್‌ನ ಆಟಗಾರ, 38 ವರ್ಷ ವಯಸ್ಸಿನ ಫಾಗ್ನಿನಿ ವಿರುದ್ಧ 2–0 ಗೆಲುವಿನ ದಾಖಲೆ ಹೊಂದಿದ್ದಾರೆ.

ವಿಂಬಲ್ಡನ್‌ನಲ್ಲಿ ಮೊದಲ ಬಾರಿ ಟ್ರೋಫಿ ಗೆಲ್ಲುವ ಗುರಿ ಹೊಂದಿರುವ ಸಿನ್ನರ್ ಅವರು ಸೆಮಿಫೈನಲ್ ತಲುಪಿದಲ್ಲಿ, ಏಳು ಬಾರಿಯ ಚಾಂಪಿಯನ್ ಜೊಕೊವಿಚ್ ಸಂಭವನೀಯ ಎದುರಾಳಿ ಆಗಬಹುದು.

ಹೋದ ತಿಂಗಳು ಫ್ರೆಂಚ್ ಓಪನ್ ಫೈನಲ್‌ನಲ್ಲಿ ಅಲ್ಕರಾಜ್ ಅವರಿಗೆ ರೋಚಕ ಹಣಾಹಣಿಯಲ್ಲಿ ಸೋತಿದ್ದ ಇಟಲಿಯ ಸಿನ್ನರ್ ಮೊದಲ ಸುತ್ತಿನಲ್ಲಿ ಸ್ವದೇಶದ ಲುಕಾ ನಾರ್ಡಿ ಅವರನ್ನು ಎದುರಿಸಲಿದ್ದಾರೆ.

2018ರ ನಂತರ ಇಲ್ಲಿ ಮೊದಲ ಬಾರಿ ಕನಿಷ್ಠ ಶ್ರೇಯಾಂಕ (ಆರನೇ) ಪಡೆದಿರುವ ಜೊಕೊವಿಚ್ ಮೊದಲ ಸುತ್ತಿನಲ್ಲಿ ಫ್ರಾನ್ಸ್‌ನ ಅಲೆಕ್ಸಾಂಡರ್ ಮುಲ್ಲರ್ ವಿರುದ್ಧ ಆಡಲಿದ್ದಾರೆ. ಜೊಕೊ ಅವರು ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿ ಇದ್ದಾರೆ. ಅವರು ಈ ಮೈಲಿಗಲ್ಲು ತಲುಪಿದರೆ, ಆಸ್ಟ್ರೇಲಿಯಾದ ಆಟಗಾರ್ತಿ ಮಾರ್ಗರೆಟ್ ಕೋರ್ಟ್ ಅವರ ಸಾಧನೆ ಸರಿಗಟ್ಟಲಿದ್ದಾರೆ. ಅಷ್ಟೇ ಅಲ್ಲ; ರೋಜರ್ ಫೆಡರರ್ ಅವರ ಎಂಟು ಸಿಂಗಲ್ಸ್ ಪ್ರಶಸ್ತಿಗಳ ಸಾಧನೆಯ ಗೌರವ ಹಂಚಿಕೊಳ್ಳಬಹುದು.

ವಿಶ್ವದ ಮೂರನೇ ಕ್ರಮಾಂಕದ ಆಟಗಾರ ಅಲೆಕ್ಸಾಂಡರ್ ಜ್ವೆರೇವ್ ಮೊದಲ ಸುತ್ತಿನಲ್ಲಿ ಫ್ರಾನ್ಸ್‌ನ ಆರ್ಥರ್ ರಿಂಡರ್‌ನೆಕ್ ಅವರನ್ನು ಎದುರಿಸಲಿದ್ದಾರೆ. ಅವರಿಗೆ ಕ್ವಾರ್ಟರ್‌ಫೈನಲ್‌ನಲ್ಲಿ ಅಮೆರಿಕದ ಟೇಲರ್ ಫ್ರಿಟ್ಜ್ ಎದುರಾಗಬಹುದು.

ಅಗ್ರ ಶ್ರೇಯಾಂಕದ ಆಟಗಾರ್ತಿ ಅರಿನಾ ಸಬಲೆಂಕಾ ಅವರಿಗೆ ಕೆನಡಾದ ಕ್ವಾಲಿಫೈಯರ್ ಕಾರ್ಸನ್ ಬ್ರಾನ್‌ಸ್ಟೀನ್ ಮೊದಲ ಸುತ್ತಿನ ಎದುರಾಳಿ. ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡತಿ ಆಗಿರುವ ಬೆಲರೂಸ್‌ನ ಆಟಗಾರ್ತಿ ಈ ವರ್ಷ ಆಸ್ಟ್ರೇಲಿಯಾ ಮತ್ತು ಫ್ರೆಂಚ್ ಓಪನ್ ಫೈನಲ್‌ನಲ್ಲಿ ಸೋತಿದ್ದಾರೆ.

ರೋಲಂಡ್ ಗ್ಯಾರೋಸ್‌ನಲ್ಲಿ ಸಬಲೆಂಕಾ ವಿರುದ್ಧ ಗೆದ್ದಿರುವ ಕೊಕೊ ಗಾಫ್ ಇಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದು ಮೊದಲ ಸುತ್ತಿನಲ್ಲಿ ಉಕ್ರೇನ್‌ನ ಡಯಾನಾ ಯಸ್ಟ್ರೆಮ್‌ಸ್ಕಾ ಎದುರು ಆಡಲಿದ್ದಾರೆ.

ಕುಲದೀಪ್‌ಗೆ ಅವಕಾಶ ನಿರೀಕ್ಷೆ

ಎರಡನೇ ಟೆಸ್ಟ್: ಶಾರ್ದೂಲ್ ಠಾಕೂರ್‌ಗೆ ವಿಶ್ರಾಂತಿ ಸಾಧ್ಯತೆ • ನಿತೀಶ್ ಕುಮಾರ್ ರೆಡ್ಡಿಗೆ ಮಣೆ?

• ಸಿಡ್ನಿ ಕಿರಣ್

ಬರ್ಮಿಂಗ್‌ಹ್ಯಾಮ್: ಇಂಗ್ಲೆಂಡ್ ವಿರುದ್ಧ ಲೀಡ್ಸ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಮಧ್ಯಮವೇಗಿ–ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಅವರನ್ನು ಅಂತಿಮ ಹನ್ನೊಂದರಲ್ಲಿ ಆಡಲು ಇಳಿಸಿದ್ದು ಈಗ ಚರ್ಚೆಗೆ ಗ್ರಾಸವಾಗಿದೆ. ಬೌಲಿಂಗ್‌ನಲ್ಲಿ ಶಾರ್ದೂಲ್ ಅತಿ ಸಾಧಾರಣ ಪ್ರದರ್ಶನ ನೀಡಿದರು. ಅಲ್ಲದೇ ಅವರನ್ನು ಸಮರ್ಥವಾಗಿ ಬಳಸಿ ಕೊಳ್ಳುವಲ್ಲಿ ನಾಯಕ ಶುಭಮನ್ ಗಿಲ್ ಕೂಡ ಎಡವಿದರು ಎಂಬ ಚರ್ಚೆಗಳು ಈಗ ಜೋರಾಗಿವೆ.

ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿರುವ ಎರಡನೇ ಟೆಸ್ಟ್‌ನಲ್ಲಿ ಶಾರ್ದೂಲ್ ಅವರಿಗೆ ಮಣೆ ಹಾಕಬೇಕೋ ಬೇಡವೋ ಎಂಬ ಪ್ರಶ್ನೆ ಎದ್ದಿದೆ. ಅವರ ಬದಲಿಗೆ ಸ್ಪಿನ್ನರ್ ಕುಲದೀಪ್ ಯಾದವ್ ಅಥವಾ ಬ್ಯಾಟಿಂಗ್ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಅವರಿಗೆ ಸ್ಥಾನ ನೀಡಬೇಕು ಎಂಬ ಸಲಹೆಗಳೂ ಕೇಳಿಬರುತ್ತಿವೆ.

ಶಾರ್ದೂಲ್ ಅವರು ಟೆಸ್ಟ್ ತಂಡಕ್ಕೆ 18 ತಿಂಗಳುಗಳ ನಂತರ ಮರಳಿದ್ದರು. 33 ವರ್ಷದ ಶಾರ್ದೂಲ್ ಅವರು ಕಳೆದ ದೇಶಿ ಕ್ರಿಕೆಟ್‌ನಲ್ಲಿ ಮುಂಬೈ ತಂಡದ ಪರವಾಗಿ ಉತ್ತಮವಾಗಿ ಆಡಿದ್ದರು. ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ 9 ಪಂದ್ಯಗಳಿಂದ 35 ವಿಕೆಟ್ ಗಳಿಸಿದ್ದರು ಮತ್ತು 505 ರನ್ ಹೊಡೆದಿದ್ದರು. ಅದರಿಂದಾಗಿ ಅವರನ್ನು ಟೆಸ್ಟ್ ತಂಡಕ್ಕೆ ಅಜಿತ್ ಅಗರಕರ್ ನೇತೃತ್ವದ ಆಯ್ಕೆ ಸಮಿತಿಯು ಪರಿಗಣಿಸಿತ್ತು.


ಈ ಹಿಂದೆ ಇಂಗ್ಲೆಂಡ್ ಪ್ರವಾಸ ಮಾಡಿದ್ದ ಅನುಭವ ಇದ್ದ ಶಾರ್ದೂಲ್ ಅವರ ಸ್ವಿಂಗ್ ಬೌಲಿಂಗ್ ಪ್ರಯೋಜನಕಾರಿಯಾಗಬಹುದು ಎಂಬ ಲೆಕ್ಕಾಚಾರ ಕೂಡ ಇತ್ತು. ಬಹುತೇಕ ಯುವ ಆಟಗಾರರೇ ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರಸ್ತುತ ತಂಡಕ್ಕೆ ಶಾರ್ದೂಲ್ ಅನುಭವ ಅನುಕೂಲಕರವಾಗುವ ನಿರೀಕ್ಷೆಯೂ ಇತ್ತು.

ಹೋದ ಬಾರಿ ಆಸ್ಟ್ರೇಲಿಯಾದಲ್ಲಿ ತಮ್ಮ ಪದಾರ್ಪಣೆ ಸರಣಿಯಲ್ಲಿಯೇ ಶತಕ ಹೊಡೆದು ಗಮನ ಸೆಳೆದಿದ್ದ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿಯವರನ್ನು ಆಯ್ಕೆಗೆ ಪರಿಗಣಿಸದೇ ಶಾರ್ದೂಲ್‌ಗೆ ಅವಕಾಶ ನೀಡಲಾಗಿತ್ತು. ಶಾರ್ದೂಲ್ ಈ ಹಿಂದೆ ಹಲವು ಪಂದ್ಯಗಳಲ್ಲಿ ತಂಡದ ಗೆಲುವಿನ ರೂವಾರಿಯಾಗಿದ್ದ ಉದಾಹರಣೆಗಳು ಇವೆ. ಆದರೆ ಇಲ್ಲಿ ಅವರ ಆಟ ನಡೆಯಲಿಲ್ಲ. ವಿಕೆಟ್ ಪಡೆಯುವುದಕ್ಕಿಂತಲೂ ಪಂದ್ಯದ ಸ್ಥಿತಿಗೆ ತಕ್ಕಂತೆ ಸ್ವಿಂಗ್, ಶಾರ್ಟ್‌ಪಿಚ್ ಎಸೆತಗಳ ಅಸ್ತ್ರಗಳನ್ನು ಸಮರ್ಪಕವಾಗಿ ಪ್ರಯೋಗಿಸುವಲ್ಲಿ ಶಾರ್ದೂಲ್ ಹಿಂದೆ ಬಿದ್ದರು.

ಇನ್ನೊಂದೆಡೆ ಶಾರ್ದೂಲ್ ಅವರನ್ನು ಬೌಲಿಂಗ್ ಸಾಮರ್ಥ್ಯ ನೋಡಿಯೇ ಆಯ್ಕೆ ಮಾಡಲಾಗಿತ್ತು ಎಂದು ಈ ಹಿಂದೆ ಮುಖ್ಯ ಕೋಚ್ ಗೌತಮ್ ಗಂಭೀರ್ ಹೇಳಿದ್ದರು. ಹಾಗಿದ್ದರೂ ಅವರನ್ನು ಮೊದಲ ಇನಿಂಗ್ಸ್‌ನಲ್ಲಿ 40ನೇ ಓವರ್‌ನಲ್ಲಿ ಬೌಲಿಂಗ್‌ಗೆ ಇಳಿಸಿದ್ದು ಅಚ್ಚರಿ ಮೂಡಿಸದಿರದು. ಆ ಹೊತ್ತಿಗೆ ಚೆಂಡು ಹಳೆಯದಾಗುವುದರಿಂದ ಮಧ್ಯಮವೇಗಿಗೆ ನಿರ್ವಹಣೆ ಸವಾಲಾಗುತ್ತದೆ. ಅದರಿಂದಾಗಿಯೇ ಅವರ ಸ್ವಿಂಗ್ ಎಸೆತಗಳು ಮೊನಚು ಕಳೆದುಕೊಂಡಿದ್ದವು. ಬ್ಯಾಟಿಂಗ್‌ಗೆ ನೆರವಾಗುತ್ತಿದ್ದ ಪಿಚ್‌ನಲ್ಲಿ ಅವರು ಮೊದಲ ಇನಿಂಗ್ಸ್‌ನಲ್ಲಿ ತಮ್ಮ ಮೊದಲ ಆರು ಓವರ್‌ಗಳಲ್ಲಿ 6.33ರ ಸರಾಸರಿಯಲ್ಲಿ ರನ್ ಕೊಟ್ಟರು. ಎರಡನೇ ಇನಿಂಗ್ಸ್‌ನಲ್ಲಿ 10 ಓವರ್‌ಗಳಲ್ಲಿ 5.10ರ ಸರಾಸರಿಯಲ್ಲಿ ರನ್ ನೀಡಿ, ಎರಡು ವಿಕೆಟ್ ಪಡೆದಿದ್ದರು. ಆದರೆ ಗಿಲ್ ಅವರು ಠಾಕೂರ್ ಅವರಿಗಿಂತ ಮುಂಚೂಣಿ ವೇಗಿಗಳ ಮೇಲೆ ಹೆಚ್ಚು ವಿಶ್ವಾಸ ಇಟ್ಟಿದ್ದರಿಂದ ಈ ರೀತಿಯಾಗಿರಬಹುದು.

ಆದರೆ ಒಂದೇ ಪಂದ್ಯದ ವೈಫಲ್ಯಕ್ಕೆ ಶಾರ್ದೂಲ್ ಅವರಿಗೆ ದಂಡನೆ ನೀಡುವುದು ಸರಿಯಲ್ಲ ಎಂಬ ಮಾತು ಕೂಡ ಇದೆ. ಆದರೂ ತಂಡವು ಇದಕ್ಕೆ ಮುಂದಾದರೆ ಶಾರ್ದೂಲ್ ಬದಲಿಗೆ 22 ವರ್ಷದ ನಿತೀಶ್ ಮೊದಲ ಆಯ್ಕೆಯಾಗಬಹುದು.

ಇನ್ನೊಂದು ಆಯ್ಕೆಯೆಂದರೆ ಕುಲದೀಪ್ ಯಾದವ್. ಅವರು ಎರಡನೇ ಸ್ಪಿನ್ನರ್ ಆಗಿ ರವೀಂದ್ರ ಜಡೇಜ ಅವರೊಂದಿಗೆ ಕಣಕ್ಕಿಳಿಯಬಹುದು. ಎಜ್‌ಬಾಸ್ಟನ್ ಪಿಚ್ ಲೀಡ್ಸ್ ಅಂಗಳಕ್ಕಿಂತಲೂ ಹೆಚ್ಚು ಶುಷ್ಕವಾಗಿದೆ. ಇಲ್ಲಿಯೂ ಇಂಗ್ಲೆಂಡ್‌ನ ಬಲಿಷ್ಠ ಬ್ಯಾಟಿಂಗ್ ಪಡೆಯು ಪಾರಮ್ಯ ಮೆರೆಯುವ ಲಕ್ಷಣಗಳಿವೆ. ಇಂತಹ ಸನ್ನಿವೇಶದಲ್ಲಿ ಎಡಗೈ ಮಣಿಕಟ್ಟಿನ ಮೋಡಿಯ ಸ್ಪಿನ್ನರ್ ಕುಲದೀಪ್ ಪರಿಣಾಮಕಾರಿಯಾಗಬಲ್ಲರು. ಅವರ ಶೈಲಿ ಮತ್ತು ಎಸೆತಗಳನ್ನು ಅಂದಾಜು ಮಾಡುವುದು ಎದುರಾಳಿ ಬ್ಯಾಟರ್‌ಗಳಿಗೆ ಯಾವಾಗಲೂ ಸವಾಲಾಗಲಿದೆ. ಆದ್ದರಿಂದ ಅವರನ್ನೂ ಆಯ್ಕೆಗೆ ಪರಿಗಣಿಸುವ ಸಾಧ್ಯತೆ ಹೆಚ್ಚಿದೆ.



ಶಾರ್ದೂಲ್ ಠಾಕೂರ್ ಮತ್ತು ನಿತೀಶ್ ಕುಮಾರ್ ರೆಡ್ಡಿ


ಕುಲದೀಪ್ ಯಾದವ್

ಎಐಟಿಎ ಮಹಾ ಪ್ರಧಾನ ಕಾರ್ಯದರ್ಶಿ ಪದಚ್ಯುತಿ

ನವದೆಹಲಿ (ಪಿಟಿಐ): ಅಖಿಲ ಭಾರತ ಟೆನಿಸ್ ಸಂಸ್ಥೆಯ (ಎಐಟಿಎ) ಮಹಾ ಪ್ರಧಾನ ಕಾರ್ಯದರ್ಶಿ ಅನಿಲ್ ಧುಪರ್ ಅವರನ್ನು ಸಂಸ್ಥೆಯ ಕಾರ್ಯಕಾರಿ ಸಮಿತಿಯು ಆ ಸ್ಥಾನದಿಂದ ತೆಗೆದುಹಾಕಿದೆ. ಅವರ ವಯಸ್ಸು 70 ವರ್ಷ ದಾಟಿದ್ದು, ಈಗಾಗಲೇ ನಾಲ್ಕು ವರ್ಷಗಳ ಅವಧಿ ಪೂರೈಸಿದ ಕಾರಣ ಹುದ್ದೆಯಲ್ಲಿ ಮುಂದುವರಿಯುವಂತಿಲ್ಲ ಎಂದು ಹೇಳಿದೆ.


ಅನಿಲ್ ಧುಪರ್

ಕಾರ್ಯಕಾರಿ ಸಮಿತಿಯ 25 ಸದಸ್ಯರ ಪೈಕಿ 17 ಮಂದಿ ಹಾಜರಾಗಿದ್ದು, ಬಹುಮತದಿಂದ ಈ ನಿರ್ಣಯ ಅಂಗೀಕರಿಸಿದೆ. ಅವರ ಸ್ಥಾನಕ್ಕೆ ಪ್ರಭಾರಿಯಾಗಿ ಜಂಟಿ ಕಾರ್ಯದರ್ಶಿ ಸುಂದರ್ ಅಯ್ಯರ್ ಅವರನ್ನು ನೇಮಿಸಿದೆ.


2024ರ ಸೆಪ್ಟೆಂಬರ್‌ನಲ್ಲಿ ಎಐಟಿಎಗೆ ನಡೆದ ಚುನಾವಣೆಗಳ ಸಿಂಧುತ್ವ ಪ್ರಶ್ನಿಸಿ ಸೋಮದೇವ್ ದೇವ್‌ವರ್ಮನ್ ಮತ್ತು ಪುರವ್ ರಾಜಾ ಅವರು ದೆಹಲಿ ಹೈಕೋರ್ಟ್‌ಗೆ ಸಲ್ಲಿಸಿರುವ ರಿಟ್ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ನೀಡುವ ಅಧಿಕಾರವನ್ನು ಸಮಿತಿಯು ಅಯ್ಯರ್ ಅವರಿಗೆ ವಹಿಸಿದೆ.

ಕೆಲವು ಅಭ್ಯರ್ಥಿಗಳ ಅರ್ಹತೆ ಪ್ರಶ್ನಿಸಿ ಈ ಇಬ್ಬರು ಆಟಗಾರರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

72 ವರ್ಷ ವಯಸ್ಸಿನ ಧುಪರ್ 2020ರಲ್ಲಿ ನಾಲ್ಕು ವರ್ಷಗಳ ಅವಧಿಗೆ ಮಹಾ ಪ್ರಧಾನ ಕಾರ್ಯದರ್ಶಿ ಆಗಿ ಆಯ್ಕೆ ಆಗಿದ್ದರು. 2024ರ ಚುನಾವಣೆಯಲ್ಲಿ ಅವರು ಯಾವುದೇ ಪದಾಧಿಕಾರಿ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿರಲಿಲ್ಲ. ಆದರೆ ಕೋರ್ಟ್ ‘ಚುನಾವಣೆ ನಡೆಸಬಹುದು. ಆದರೆ ಫಲಿತಾಂಶ ಪ್ರಕಟಿಸಿವಂತಿಲ್ಲ’ ಎಂದು ಹೇಳಿದ್ದರಿಂದ ಅವರು ತಮ್ಮ ಸ್ಥಾನದಲ್ಲಿ ಮುಂದುವರಿದಿದ್ದರು.

ಬೂಮ್ರಾ ಕಣಕ್ಕಿಳಿಯುವುದು ಅನುಮಾನ

ನವದೆಹಲಿ (ಪಿಟಿಐ): ಜಸ್‌ಪ್ರೀತ್ ಬೂಮ್ರಾ ಅವರು ಎಜ್ಬಾಸ್ಟನ್‌ನಲ್ಲಿ ನಡೆಯಲಿರುವ ಎರಡನೇ ಟೆಸ್ಟ್‌ನಲ್ಲಿ ಆಡುತ್ತಾರೆಯೇ? ಮೊದಲ ಟೆಸ್ಟ್ ಪಂದ್ಯ ಸೋತ ನಂತರ ಸಮಬಲ ಸಾಧಿಸುವ ಪ್ರಯತ್ನದಲ್ಲಿರುವ ಭಾರತ ತಂಡದ ಚಿಂತಕರ ಚಾವಡಿಗೆ ಎದುರಾಗಿರುವ ದೊಡ್ಡ ಪ್ರಶ್ನೆ ಇದು.



ಭಾರತ ತಂಡ ಒಂದು ಹಂತದಲ್ಲಿ ಸ್ಪಷ್ಟ ಮೇಲುಗೈ ಹೊಂದಿದ್ದರೂ, ಕೆಳಕ್ರಮಾಂಕದ ಆಟಗಾರರ ವೈಫಲ್ಯ, ಕಳಪೆ ಫೀಲ್ಡಿಂಗ್ ಮತ್ತು ಶಿಸ್ತಿಲ್ಲದ ಬೌಲಿಂಗ್‌ನಿಂದ ಹೆಡಿಂಗ್ಲೆ ಟೆಸ್ಟ್ ಪಂದ್ಯವನ್ನು ಐದು ವಿಕೆಟ್‌ಗಳಿಂದ ಸೋತಿತ್ತು.

ಐದು ಟೆಸ್ಟ್‌ಗಳ ಕ್ರಿಕೆಟ್ ಸರಣಿಯ ಮೊದಲ ಪಂದ್ಯ ಜುಲೈ 24ರಂದು ಮುಗಿದಿದ್ದು, ಎರಡನೇ ಪಂದ್ಯ ಜುಲೈ 2ರಂದು ಆರಂಭವಾಗಲಿರುವ ಕಾರಣ ಬೂಮ್ರಾ ಅವರಿಗೆ ಸುಧಾರಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ಇದೆ. ಆದರೆ ದೇಹ ಕೇಳುವುದೇ ಎಂಬುದನ್ನು ಬೂಮ್ರಾ ಅವರಷ್ಟೇ ಹೇಳಬಲ್ಲರು.

ಮೊದಲ ಟೆಸ್ಟ್‌ನಲ್ಲಿ ಬೂಮ್ರಾ ಮಾತ್ರ ಇಂಗ್ಲೆಂಡ್ ಬ್ಯಾಟರ್‌ಗಳಿಗೆ ಆತಂಕ ಮೂಡಿಸಿದ್ದರು. ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್‌ಗಳ ಗೊಂಚಲನ್ನೂ ಪಡೆದಿದ್ದರು. ಆ ಪಂದ್ಯದಲ್ಲಿ ಅವರು ಒಟ್ಟು 44.4 ಓವರುಗಳನ್ನು ಮಾಡಿದ್ದರು.

ಬೂಮ್ರಾ ಅವರಿಲ್ಲದ ವೇಗದ ದಾಳಿ ಎದುರಾಳಿ ತಂಡದ ಒತ್ತಡವನ್ನು ಗಣನೀಯವಾಗಿ ಕಡಿಮೆ ಮಾಡಬಲ್ಲದು. ಜೊತೆಗೆ ಭಾರತ ತಂಡದ ತಲೆನೋವನ್ನು ಹೆಚ್ಚಿಸಬಲ್ಲದು. ಬೂಮ್ರಾ ಮೂರು ಟೆಸ್ಟ್‌ಗಳಿಗೆ ಮಾತ್ರ ಲಭ್ಯರಾಗುವರೆಂದು ಸರಣಿಯ ಆರಂಭದಲ್ಲೇ ಕೋಚ್ ಗೌತಮ್ ಗಂಭೀರ್ ಹೇಳಿದ್ದರು.

‘ತಂಡದ ಚಿಂತಕರ ಚಾವಡಿಗೆ ಈ ಬಗ್ಗೆ (ಬೂಮ್ರಾ ಆಡಿಸುವ ಬಗ್ಗೆ) ನಿರ್ಧಾರ ಕೈಗೊಳ್ಳುವುದು ಕಷ್ಟದ ಕೆಲಸ. ಅವರ ಕಾರ್ಯದೊತ್ತಡ ಹೇಗೆ ನಿರ್ವಹಿಸಬೇಕು ಎಂಬುದು ಚಿಂತಕರ ಚಾವಡಿಗೆ ಚೆನ್ನಾಗಿ ಗೊತ್ತಿರು ತ್ತದೆ’ ಎಂದು ಆಯ್ಕೆ ಸಮಿತಿ ಮಾಜಿ ಮುಖ್ಯಸ್ಥ ಎಂಎಸ್‌ಕೆ ಪ್ರಸಾದ್ ತಿಳಿಸಿದರು.

‘ಬೂಮ್ರಾ ಅವರಿಗೆ ಎರಡು ಟೆಸ್ಟ್‌ಗಳ ಮಧ್ಯೆ ಒಂದು ವಾರದ ಸಮಯವಿದೆ. ಈ ಬಗ್ಗೆ ನಿರ್ಧಾರ ಕೈಗೊಳ್ಳುವುದು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್, ಗೌತಮ್ ಗಂಭೀರ್ ಮತ್ತು ನಾಯಕ ಶುಭಮನ್ ಗಿಲ್ ಅವರಿಗೆ ಬಿಟ್ಟಿದ್ದು. ಟೆಸ್ಟ್ ಆರಂಭಕ್ಕೆ ಒಂದು ದಿನ ಮೊದಲು ಅವರು ಈ ಬಗ್ಗೆ ನಿರ್ಧಾರಕ್ಕೆ ಬರಬಹುದು’ ಎಂದು ಬಿಸಿಸಿಐ ಮೂಲವೊಂದು ತಿಳಿಸಿದೆ.

ಆದರೆ ಎರಡನೇ ಮತ್ತು ಮೂರನೇ ಟೆಸ್ಟ್ ನಡುವೆ ಇರುವುದು ಕೇವಲ ಮೂರು ದಿನಗಳ ಅಂತರ. ಲಾರ್ಡ್ಸ್‌ನಲ್ಲಿ ಮೂರನೇ ಟೆಸ್ಟ್ ಜುಲೈ 10 ರಿಂದ 14ರವರೆಗೆ ನಡೆಯಲಿದ್ದು, ಬೂಮ್ರಾ ಈ ಎರಡೂ ಟೆಸ್ಟ್‌ಗಳಲ್ಲಿ ಕಾಣಿಸಿಕೊಳ್ಳುವುದು ಅನುಮಾನ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

The California Holiday Village

RK ENTERPRISES

Residential

DTCP APPROVED Sites

DTCP APPROVED

E-KHATA SITES

ದೇವನಹಳ್ಳಿ

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ

45 ನಿಮಿಷಗಳ ಪ್ರಯಾಣ

ಈಶಾ ಫೌಂಡೇಶನ್‌ನಿಂದ ಕೇವಲ 25 ನಿಮಿಷಗಳ ಪ್ರಯಾಣ

OFFER PRICE Rs.599 per sq ft Onwards



• ಸೈಟುಗಳು ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ. • 100% ಕಾನೂನಾತ್ಮಕ ದಾಖಲೆ ಪತ್ರಗಳು • ಅಭಿವೃದ್ಧಿಪಡಿಸಿದ ಲೇಔಟ್ • ನಿವೇಶನ ಖರೀದಿಸಲು ಬ್ಯಾಂಕ್ ಸಾಲ ಸೌಲಭ್ಯವಿದೆ

ಸೌಲಭ್ಯಗಳು : • ನೀರು • ಬೀದಿ ದೀಪ • ರಸ್ತೆಗಳು • ಪಾರ್ಕ್ • ವಿದ್ಯುತ್ • ಅಂಡರ್ ಗ್ರೌಂಡ್ ವಾಟರ್ ಲೈನ್ಸ್

Site dimension: 30x40 onwards

www.rkcalifornia.com

ಸೈಟ್ ಭೇಟಿಗಾಗಿ ಕರೆ ಮಾಡಿ : 8880665577

RAJESHWARI AASHIRVAD

Develop I Build I Sale

www.aashirvad.net

ಮೈಸೂರು ರಸ್ತೆಯಲ್ಲಿರುವ BMRDA/BMICAPA ಮಾನ್ಯತೆ ಪಡೆದ ಸೈಟುಗಳ ಮೇಲೆ ಇಂದೇ ಹೂಡಿಕೆ ಮಾಡಿ

Aashirvad Aprameya



Rs. 4599 Per Sft

BMICAPA & RERA ಅನುಮೋದನೆ ಆದ ಸೈಟುಗಳು

ಬಿಡದಿ

ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ಹೈವೇಗೆ ಹೊಂದಿಕೊಂಡಿದೆ

SPOT BOOKING OFFER ₹ 2 Lakhs DISCOUNT

BMRDA & RERA ಅನುಮೋದನೆ ಆದ ನಿವೇಶನಗಳು

ದೊಡ್ಡ ಆಲದ ಮರದ ಹತ್ತಿರ ಮೈಸೂರು ರಸ್ತೆ



Rs. 2699 Per Sft

Aashirvad Siddhi Priya

ನೋಂದಣಿಗೆ ಸಿದ್ಧ* ಲೇಔಟ್ ಅಭಿವೃದ್ಧಿ ಹೊಂದಿದೆ

ಬ್ಯಾಂಕ್ ಸಾಲ ಸೌಲಭ್ಯವಿದೆ ವಿಶ್ವ ದರ್ಜೆಯ ಸೌಲಭ್ಯಗಳು

ಸೈಟ್ ಭೇಟಿಗಾಗಿ ಕರೆ ಮಾಡಿ: 63 99 88 99 11

SITE DIMENSIONS: 30X35, 30X40 ODD DIMENSIONS

ಶರಣ್ಯ ಫಾರ್ಮ್ಸ್

Sharanya Farms

Create your own Sunshine

ನಿಮ್ಮ ಕನಸಿನ ತೋಟದ ಮನೆ ನನಸು ಮಾಡುವುದೇ ನಮ್ಮ ಆದ್ಯತೆ

MS REALTIES A TRADITION OF TRUST

Sharanya Hillview Farms

Phase- II

51 acre fully gated community

"Experience Luxury Amidst Nature" - Dive into our ready Swimming Pool while anticipating upcoming Resort Amenities

ಶ್ರೀಗಂಧದ ಮರದೊಂದಿಗೆ ನಿಮ್ಮ ಹಣವನ್ನು ಬೆಳೆಸಿ

Bengaluru- Mysuru Road

RESORT: Club House, Restaurant, Cottages

ಫಾರ್ಮ್ ಲ್ಯಾಂಡ್ ಖರೀದಿಸಿ - ನಿರ್ವಹಣೆ ನಮ್ಮದು, ಲಾಭ ನಿಮ್ಮದು









*Actual Pictures of farmhouse

*T&C Apply

ಒಂದು ಹೂಡಿಕೆಯಿಂದ ನಾಲ್ಕು ಲಾಭಗಳು!

ಫಾರಂ ಲ್ಯಾಂಡ್ ಖರೀದಿಸಿ ನಿಮಗೂ ಮತ್ತು ನಿಮ್ಮ ಕುಟುಂಬದವರಿಗೆ ರೆಸಾರ್ಟ್ ಸೌಲಭ್ಯ ಉಚಿತವಾಗಿ ಪಡೆಯಿರಿ.

ಇಲ್ಲಿನ ಫಲವತ್ತಾದ ಭೂಮಿಯಲ್ಲಿ ಶ್ರೀಗಂಧ ಮರಗಳ ಅಧಿಕ ಲಾಭ ಪಡೆಯಿರಿ.

ನಿಮ್ಮ ಫಾರಂ ಹೌಸ್ ಅನ್ನು ಬಾಡಿಗೆಗೆ ನೀಡುವುದರ ಮೂಲಕ ಪ್ರತಿ ತಿಂಗಳು ಆದಾಯ ಪಡೆಯಿರಿ.

ಇಂದಿನ ನಿಮ್ಮ ಹೂಡಿಕೆಯ ಮೇಲೆ ಮುಂದಿನ ದಿನಗಳಲ್ಲಿ ದುಪ್ಪಟ್ಟು ಲಾಭ ಪಡೆಯಿರಿ ಹಾಗೂ ಒಂದು ಹೂಡಿಕೆಯಿಂದ ಇನ್ನು ಅನೇಕ ಲಾಭಗಳನ್ನು ಪಡೆಯಿರಿ.

www.sharanyafarms.com

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ:

70 26 26 22 33

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call:9964627255

Banashankari

"AVAILABLE WANTED BDA Sites Banashankari 6TH Stg.Anjanapura Vishweshwaraiah Lyt 50x80 40x60 30x40 20x30,Value Properties Call Raju:9901315949, 9731814437

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

SRINIVASNAGAR, 30X50, East facing site 40' Road, Prime location 19,000/- Sft, E-Katha, clear document -9845000299

AVAILABLE BANSHANKARI 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

NORTH FACING 40'x70' 'A' khata site for sale in BSK 6th stage, adjacent to 11th block, price 10000/ sqft slightly negotiable. Contact:- 9845380312

BTM Layout

SALE 30X45 'A' Khata Site East Facing Guru Raghavendra Layout BTM 1st Stage Rs.27000/- Psqft Call:9739393607

Basavanagudi

SITE FOR Sale 30x48 East South Corner Clear Title property @ Sannidhi Road Basavanagudi Contact:7892586674/ 9343742082

Basaweshwaranagar

SALE SITE 1600 SQFT A KHATHA WITH EASTHI READY FOR REGISTRATION CLEAR TITLES 1 CRORE 90 LAKHS ONLY: 9035883017

Kanakapura Road

30X40 N/E CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

KEMPEGOWDA LAYOUT 50x80,Site #4233,West-facing 3rd Block"L"sector 300feet-road,40x60 Site #547,East-facing 1st Block"K"sector 40feet-road. Contact Owner:8095002424

KEMPEGOWDA LAYOUT, Commercial/Residential BDA Site for Sale 20x30, 30x40, 40x60, 50x80 Contact Kumar 9945119449

Nagarabhavi

SITE SALE, North Facing 40x60 Sqft, Behind Namooru Tindi, Nagarbhavi, No Brokers/ No Agents: 9448377834

NAGARABHAVI NEAR BDA Complex 30x40 East Facing on 40 Feet Road @ 19200/- Negotiable: 9964971895

Vishweshwariah Layout

COMMERCIAL BDA SITE SALE 40x60 N/F Vishveswaraiah Layout 1st Block, 100ft Road,Contact: 9742681666 ,9886634578

"50X80 EAST FACING SITE 60 FEET ROAD 6TH BLOCK VISHVESHWARAIH LAYOUT [PROPOSED BDA COMPLEX]- 9845143579"

"40X60 WEST FACEING Residential Site`for`sale Vishveswaraiah Layout 1st Block 40`feet wide Road near 100`Feet Road, 15`Minutes drive`to`Metro. 9880031654"

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

COMMERCIAL SITE Sale SMV Layout, 50x80 West Face 100 Feet Road, Opposite BDA Complex Call: 9986869996.

DIRECT OWNER NO.134, EF 30x40 ARUNACHALAM LAYOUT Adjacentto Vishveswaraiah Layout 1st-Block 9500/- 8496030007/ 8310885235

Mysore

KHB ALLOTTED 30x40 Site at Kenchalgudu, Mysore City 46 Lakhs Clear Documents Owner Contact: 9606866368

Hegganahalli

SITE SALE 160x100ft In Hegganahalli Cross Bangalore A Katha Borewell Brick wall Fenced: 9900287834/ 9448377834

Industrial & Factory

Mysore Road

INDUSTRIAL CONVERTED LAND AVILABLE FOR SALE AREA 10000SQFT TO 20000 SQFT TO 1ACRE AT KUMBALGODU INDAREA MYSORE ROAD MOB:6366378787.

House

Banashankari

BANASHANKARI 6TH Stage 7th Block 20x30, Ground and First floor 2 BHK 2 unit House 30'Road Prime location 1,20,00,000/-, 9845000299

J P Nagar

BDAN/E,CORNER,1550SFT 3BHK Duplex NrForam 4.10cr.30x50,N/W14500/- 2150Sft,3BHKFlrwise_Flat 1.65Cr,35x40 N/W ,13500/-30x40,3units 3.10cr:8904210201

Magadi Road

KAMAKSHIPALYA 15X50 sqft. 5 Floor Building, for SALE, 3.5 years Old, 8 Houses + One Shop, East Facing, 'A' Khata, Rental Income 51,000. 98452-88310

Rajarajeshwari Nagar

SALE INDEPENDENT duplex 4 BHK with car parking. 3.5 Crore, only serious buyers contact #8762018445. (Brokers Excuse)

Vidyaranyapura

SHOPS FOR RENT 1 BHK & 3 BHK VIDYARANYAPURA GOOD LOCATION CONTACT:8296895858 GENUINE TENANT

Flat

Padmanabha Nagar

BRAND NEW 2 BHK (SBA 1129) Apartment For Sale @ Brigade Komarla Heights. Contact: 7019888028

Uttarahalli

4BHK NEW Flats Sale, Ready to move, Cauvery, Carparking, Lift, Vaasthu, Maruthi Layout. Rs.1.10.Cr. Call: 6360501159, 9945224058.

Commercial Land

Out-Station

SALEM UDAYAPATY byepass opposite to udayapaty EB power station 14000.sq.feet Corner Commercial Land`with a 110 feet Frontage for`sale, suitable`to construct Hotels,Marriage Halls petrol`bunk Apartments, Hospitals. Cell:9943168099

Commerical

Vishweshwariah Layout

BDA COMMERCIAL 40X60 Sale KLE Law College Circle South SMV 5th-Block 80ft Road: 9945694783/ 9980433004

REAL ESTATE BUYING

Commerical

South

WANTED RENT Fetching Property Commercial/PG/ Residential,around 2cr,Rent >1.3 Lakhs/ Month Contact 91130 70146 South Bangalore

Sites

Anjanapura

WANTED BDA Sites Anjanapura BSK 6th Stage JPNagar 8th 9th Phase Royal Park Contact: 9880776950

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60, 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

RENTAL COMMERCIAL Commercial space available for rent at Seshadripuram, Bangalore, GF 1300 sft, FF 1350 sft suitable for office/banks/ godown.9841228842

SHOP FOR RENT WOOD PRESSED OIL WITH 10KV ELECTRICITY AVAILABLE FOR RENT. CONTACT: 6361374600, 9110893903

Flats

AVAILABLE FOR rent semi furnished 5 BHK flat with private garden of 830 sft in Brigade Vintage, Basavanagudi, expected rent 1,40,000 including maintenance, call 9845380312

General

RENTAL WANTED- INDEPENDENT 4 BHK HOUSE, AS PER VAASTU ONLY. BTM, JPNAGAR, DOLLARS COLONY, JAYANAGAR 4TH 'T' BLOCK, 9TH BLOCK, MINI FOREST.- WANTED FOR RENT FULLY FURNISHED 250 TO 350 FT OFFICE SPACE, SHANTHINAGAR, JAYANAGAR, CBD RS.15000/ VICTORY PROPERTIES (A 35 yrs Experienced Leading Real Estate Company) 7411692219/ 8618576685 info@victoryproperties.in www.victoryproperties.in

PUBLIC NOTICE

PUBLIC NOTICE

Public are hereby informed that my clients **Sri. A. Ramakrishna Reddy** S/o Late Annayappa and **Sri. S. N. Balasubramaniy** S/o Late M. Shamanna, the owners of Vacant Site bearing No.23, **Khatha No.1339/17/5A2,** formed out of **Sy.No.17/5A2,** situated at Doddakannelli Village, Varthur Hobli, Bangalore East Taluk, measuring East to West 60 feet and North to South 47'2" + 50'/2 feet, totally measuring 2914 Sq. feet, hereby informs that the original document, pertaining to the aforesaid property, i.e., Sale Deed dated 21.12.2004 registered as **Document No.23881/2004-05,** in the office of the Senior Sub-Registrar, Bangalore South Taluk, have been lost in transit. If any person/s, Bank, Financial Institution, firm, Company, Institution, or organization has any claim or holding to the afore mentioned original deed, they may contact the undersigned in writing within **7 days** from the date of this notice failing which it will be presumed that there are no claims.

Sumithra. S, Advocate
No.12, Okalipuram,
Bangalore-560 021
Mobile No +91 72592 73736

PRESS NOTE

As per Court Order O.S. 1277/2006, the Hon'ble City Civil Court has appointed Sri. Shashidhara. P as Court Commissioner to conduct the 94th Adjourned Election and to facilitate the formation of a new board.

The Court Commissioner has released the draft voter list signed by former secretary which is submitted to Hon'ble Court. The list, handed over by the Former Hon. General Secretary, Sri. P. S. Naidu.

The State Centre currently has a total of 1,147 registered members/voters, including 7 Patrons and Vice-Patrons, 698 Life Members, 363 Annual Members, and 79 District and Taluk Centre Members.

The draft voters' list signed by former secretary is available at the St. John Ambulance (India), Karnataka State Centre, No. 8 "A" Main Road, 1st Floor, Sampangiramanagar, Bangalore-560027.

Members are requested to visit the office to verify their membership details. Please ensure you carry your identity card issued at the time of registration.

If there are any discrepancies or omissions in the list, members may submit a written request along with supporting documents such as an identity card issued by the office.

If a listed member is deceased, any family member may notify the office in writing to ensure the records are updated accordingly.

For any other queries or grievances related to this matter, please contact our office using the details mentioned above or send a written communication, the last date is 4th July 2025 (5:30 PM) to submit your concern.

If no objections received in the stipulated period, we will proceed with Final Voters List with the exiting data which we are having at present.

Yours faithfully

**COURT COMMISSIONER
ST. JOHN AMBULANCE INDIA
and 4th Zone,
Office of the Deputy Regulator of Co- Operative Societies.**

BUSINESS

Business to Business

Business

AVAILABLE COLLATERALS/ Takeovers/ Properties/ Financial Arrangements (For only big projects). 'LAND PARCEL' & Company- 9342247637.

Business Offers

Finance

MSME LOANS Available for any startup companies,any existing companies NOTE:Also one approved loan available contact-7204995189

LOAN AVAILABLE @5% Yearly Interest Business Project Mortgage Agriculture Takeover Personal HomeLoan 8787091647 Agents Welcome

JOB OPPORTUNITIES

Teachers/ Professors

FIRST STEPS SCHOOL
Jakkur Agrahara Village
a CBSE-affiliated school
Wanted Kannada Teacher
Qualified, experienced, and passionate kannada teacher for middle school. Eligibility: As per CBSE norms Fluency in English is an added advantage
Contact No
9343633303 / 9060950351

WANTED TRAINED lady teachers for Primary/High school for all subjects shrimaitri@gmail.com 8892949404

HRD & Admin

WANTED AN ADMINISTRATOR to look after Schools, High School Retd. HM may Apply, General Secretary Deena Seva Sangha, No. 22, Risaldar Street, Seshadripuram, Bangalore- 560020.

PERSONAL

Lost

DOCUMENT LOST

I, **Dr. ASMA PASHA,** R/a at F53, Manish Complex, 10 Convent Road, Richmond Town, Bengaluru, have lost **1) Sale deed document No./ Indentification 28/2001-02, dt: 03-04-2001, 2) Gift deed document No. 4974/2004-05, dt:05-01-2005,** while traveling, If found please contact: **9108826643**

Change of Name

I, GIREESHA BANAVARA SHIVASWAMY S/o.Shivaswamy Banavara Ramaiah R/o#590, S2_Akshaya Apartments, 18th_main, 23rd`cross Poornapragna Layout, Subramanyapura, Bengaluru 560061 have_changed my`Name to GIRISHA BANAVARA SHIVASWAMY vide`affidavit dated:27.6.2025 before`Notary L.Puttaraju, Bangalore.

I SARAVANAN. P alias (PETER. G) R/a, #7/84, 3rd Block East, Jayanagar, Bengaluru -560011 Have Changed My Name To PETER SARAVANAN. P vide Affidavit Dated 26/06/2025 before Notary Mohammed Hussain. K Bangalore.

I, PRANAV V S/o Vijayakumar R have changed my name to PRANAV B V vide affidavit dated: 27/6/2025 Before Notary Shreeshail B.Gobbani Bangalore

I, VINODHA G S/o Gopinath R have changed my name to VINOD G vide affidavit dated: 27/6/2025 Before Notary Shreeshail B.Gobbani Bangalore

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

DS-MAX PROPERTIES

EXPERIENCE THE JOY OF LIVING

www.dsmaxproperties.com



DR. K V SATISH, CHAIRMAN

DS MAX®

DS-MAX SKYFIELDS

PRM/KA/RERA/1250/304/PR/251024/007179

ಡಿಎಸ್-ಮ್ಯಾಕ್ಸ್ ಸ್ಕೈಫೀಲ್ಡ್ಸ್

Whitefield

10 MINS - ITPL

Super Luxurious

2 & 3-BHK APARTMENTS | G+14 FLOORS

2-BHK STARTS @ ₹ 73 L*

3-BHK STARTS @ ₹ 91 L*



8880 003 003

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1250/304/PR/150224/006622
WHITEFIELD
ON SOUKYA ROAD
₹ 60.84 L - 1.01 Cr*
8088 773 773

PRM/KA/RERA/1251/310/PR/150223/005721
MYSORE ROAD
NEAR RR DENTAL COLLEGE
₹ 59.56 - 87.47 Lakhs*
8088 445 445

PRM/KA/RERA/1250/301/PR/251024/007178
YELAHANKA
5 MINS. RAJANUKUNTE
₹ 49.36 L - 88.53 Lakhs*
8880 758 758

PRM/KA/RERA/1251/308/PR/160824/006972
ELECTRONIC CITY
10 MINS. HOSA ROAD METRO
₹ 62.26 L - 1.24 Cr*
9164 045 000

PRM/KA/RERA/1251/308/PR/160824/006973
BANNERGHATTA RD
NEAR KOPPA GATE
₹ 56.64 - 82.18 Lakhs*
8880 461 461

PRM/KA/RERA/1251/309/PR/060923/006244
TUMKUR ROAD
10 MINS. MADAVARA METRO
₹ 59.28 - 91.68 Lakhs*
8880 465 465

PRM/KA/RERA/1251/310/PR/151223/006489
BANASHANKARI
OPP. NPS SCHOOL (3 & 4-BHK)
₹ 1.19 - 2.17 Cr*
8050 161 222

PRM/KA/RERA/1251/308/PR/290122/004660
SARJAPURA
SARJAPUR - ATTIBELE RD
₹ 43.68 - 48.10 Lakhs*
9164 122 000

PRM/KA/RERA/1251/308/PR/280222/004739
CHANDAPURA
10 MINS. BOMMASANDRA METRO
₹ 42.30 - 55.80 Lakhs*
8880 013 310

PRM/KA/RERA/1251/310/PR/210324/006724
SILKBOARD
NEAR SINGASANDRA METRO
₹ 79.10 L - 1.22 Cr*
8880 472 472

TRENDING PROJECT



PRM/KA/RERA/1251/472/PR/250225/007524
AIRPORT ROAD
NAVARATHNA AGRAHARA
₹ 69.87 L - 1.18 Cr*
8880 073 370

FACILITY MANAGEMENT SERVICES



For Apartment & Commercial Complexes

MEP | Security Services | Gardening | Landscaping
STP | WTP | RO Maintenance | Housekeeping
Swimming Pool Maintenance

CALL : 9164 022 000

ELEGANT INTERIORS



Directly From Our Factory

Modular Kitchens | TV Units | Wardrobes
Painting & Wallpapers | Storage Units
False Ceilings | Furniture

CALL : 9164 056 000

REFER & EARN



Refer Us To Your Friends & Relatives And Get Handsomely Rewarded

2, 3 & 4-BHK Homes | Full / Partial Interiors
Facility Management Services
(For Apartment & Commercial Complexes) *T & C Apply

CALL : 9164 043 000

REFER & EARN



Refer Us To A Landowner For JV / Outright Purchase In Any Part Of Bengaluru And Get A 2-BHK ABSOLUTELY FREE*

Residential Land | Commercial Land

*T & C Apply

CALL : 8880 463 463

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU